ಶಿಲುಬೆಗೇರಿಸುವ ಸಮಯ ಸನ್ನಿಹಿತವಾಯ್ತು. ಆ ದಿನ ವಸಂತ ಪೂರ್ಣಿಮೆಯ ಶುಕ್ರವಾರ. ಮಟಮಟ ಮಧ್ಯಾಹ್ನವಾದರೂ ಸೂರ್ಯನ ಕಾಂತಿ ಮಂದವಾಗಿತ್ತು. ದೊಡ್ಡದಾದ ಒಂದು ಕಪ್ಪು ಮೋಡ ಆಕಾಶವನ್ನೆಲ್ಲಾ ಚಾಚಿ ಆವರಿಸಿಕೊಂಡಿತ್ತು. ಗಾಳಿಗೂ ಉಸಿರು ಕಟ್ಟುವಂತಾಗಿತ್ತು. ಗಿಡಮರಗಳೆಲ್ಲವೂ ಸ್ತಬ್ಧವಾಗಿತ್ತು. ಹಕ್ಕಿಗಳು ಮೂಕವಾಗಿ ಬಿಟ್ಟಿದ್ದವು. ಜನರಾದರೋ ಮಿಡಿತೆಗಳಂತೆ ಗುಂಪುಗೂಡಿ ಗೊಲ್ಗೊಥದ ಗಿರಿಗೆ ಹೊರಟಿದ್ದರು. ಏರ್ಪಾಡಾಗಿದ್ದಂತೆ ಮೂರು ಶಿಲುಬೆಗಳನ್ನು ಬೆಟ್ಟದ ಮೇಲೆ ನಟ್ಟದ್ದಾಗಿತ್ತು. ಅಕ್ಕಪಕ್ಕದಲ್ಲಿ ಇಬ್ಬರು ಕಳ್ಳರ ಮಧ್ಯೆ ಯೇಸುವನ್ನು ಶಿಲುಬೇಗೇರಿಸಿದರು. ಆ ಹೃದಯವಿದ್ರಾವಕವಾದ ದೃಶ್ಯ ಮಾತುಗಳಲ್ಲಿ ಹೇಳಲು ಸಾಧ್ಯವಿಲ್ಲ.

ಯೇಸುವಿನ ಅಪಾರವಾದ ನೋವು ಹಾಗೂ ಸಾವಿನ ಸಮಯದಲ್ಲೂ ಅದಕ್ಕೆ ಬದ್ಧನಾಗಿ ನಿಂತು, ತನ್ನ ಆ ಸ್ಥಿತಿಗೆ ಕಾರಣವಾದವರನ್ನು ಕ್ಷಮಿಸಿ ಶಾಂತಿಯ ದೂತನಾದ. ಇಂತಹ ಹಲವಾರು ಉನ್ನತವಾದ ಸಂದೇಶಗಳಿಗೆ ಸಾಕ್ಷಿಯಾದ ಈ ದಿನಕ್ಕೆ ಸಾವು, ನೋವು, ಮೀರಿದ ಮಾನವೀಯ ಆಯಾಮ ದೊರಕಿತು. ಅದರಿಂದಲೇ ಅದಕ್ಕೆ 'ಶುಭ ಶುಕ್ರವಾರ' (Good Friday) ಎಂಬ ಹೆಸರು ಬಂತು. ಯೇಸು ಕ್ರಿಸ್ತ ಬಂಧನಕ್ಕೆ ಒಳಗಾಗುವುದರಿಂದ ಹಿಡಿದು ಶಿಲುಬೆಯ ಮೇಲೆ ಸಾಯುವ ತನಕದ ಘಟನೆಗಳನ್ನು 14 ಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದು ಭಾಗವನ್ನು ಅವಲೋಕಿಸುತ್ತಾ, ಪ್ರಾರ್ಥಿಸುತ್ತಾ ಸಾಗುವ ಪ್ರಕ್ರಿಯೆಗೆ ''ಶಿಲುಬೆ ಹಾದಿ'' ಎಂಬ ಹೆಸರಿದೆ. ಇದನ್ನು Good Friday ದಿನದಂದು ವಿಶೇಷವಾಗಿ ನಡೆಸಲಾಗುತ್ತದೆ.

ಮುಂದೆ ಭಾನುವಾರದ ಮುಂಜಾನೆ ಬೆಳಕಿನಲ್ಲಿ ಯೇಸು ಮತ್ತೆ ಜೀವದಿಂದ ಎದ್ದರು. ಇದು ''ಕತ್ತಲಿನಿಂದ ಬೆಳಕಿನೆಡೆಗೆ'' ಎಂಬ ಮಾತಿಗೆ ಅನ್ವರ್ಥದಂತಿದೆ.

2000 ವರ್ಷಗಳು ಕಳೆದರೂ ಪ್ರಸ್ತುತವಾಗಿರುವ ಯೇಸು ಕ್ರಿಸ್ತನ ಶಾಂತಿ, ಪ್ರೇಮ, ಸಹನೆಯ ಸಂದೇಶದಿಂದಲೇ Good Fridayಗೆ ಜಾತಿ, ಧರ್ಮ ಮೀರಿದ ಮನ್ನಣೆ ಮಹತ್ವ ಇಂದಿಗೂ ಇದೆ. ವಿಶ್ವದ ಶಾಂತಿ ಹಾಗೂ ಸೋದರತೆಯ ಭಾವದಲ್ಲಿ Good Fridayಯ ಸಾರ್ಥಕತೆ ಇದೆ.

●

ನವಿಲುಗರಿಯ ಒಡೆಯ

ಮನವೆಂಬ ಮರ್ಕಟವು
ಭುವಿಯಿಂದ ಬಾನಿನೆಡೆಗೆ
ಮದವೆಂಬ ಏಣಿಯೂ ಬೆಸೆದಿತ್ತೊ ಹರಿಯೆ।
ಪಥವರಿಯೆಯೆಂಬ
ಭ್ರಮೆಯಲ್ಲೆ ಬದುಕು
ಭುವಿಯತ್ತ ಬಾನತ್ತ ತೊಳಲಾಡುತಿತ್ತ।
ತೊಳಲಾಡುತ್ತಿದ್ದ ಈ ಬದುಕಬಣ್ಣ
ಮರೆಮಾಚಿ ಹೋಯ್ತಾ ನಿನ್ನ ಬೆಣ್ಣೆ ಕಣ್ಣ?
ಈ ಮಿಥ್ಯಕೃಪಾನಿತ್ಯದ ಅರಿವ ಮರೆವ ಮುನ್ನ
ಕೊರಳಕೊಳಲ ಬದಿಗರಿಸಿ ಹರಿಯೆ
ಬಡಿದೆಬ್ಬಿಸೆನ್ನನು ಕೈಹಿಡಿದೆಬ್ಬಿಸೆನ್ನನು ॥

✍ **ಅಶ್ವಿನಿ ಎನ್.,** ಪ್ರಥಮ ಬಿ.ಎ.

ಗೋವರ್ಧನ ಪೀಠದ ವೀರ ಸಂನ್ಯಾಸಿ

✍ **ಪ್ರಮೋದ್ ಆರ್. ನಾಯಕ್,** ಪ್ರಥಮ ಪಿ.ಯು.ಸಿ.

ಜಗದ್ಗುರು ಶ್ರೀ ಆದಿಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಪೀಠಗಳಲ್ಲಿ ತನ್ನದೇ ಆದ ಮಹತ್ತ್ವ ಪಡೆದಿರುವಂಥದ್ದು ಪುರಿಯ ಗೋವರ್ಧನ ಪೀಠ. ಭಾರತೀಯ ಸಂಸ್ಕೃತಿ ಹಾಗೂ ಹಿಂದೂ ಧರ್ಮದ ಉನ್ನತಿಗಾಗಿ ಶ್ರಮಿಸಿರುವ ಈ ಪೀಠವು ಎಲ್ಲರೂ ಸರಿಸಮಾನರು ಎಂಬ ದೃಷ್ಟಿಕೋನದಲ್ಲಿ ಭಕ್ತರನ್ನು ಪೋಷಿಸುತ್ತಿದೆ.

ಗೋವರ್ಧನ ಪೀಠವು ಪ್ರಸಿದ್ಧ ಪುರಿ ಜಗನ್ನಾಥ ದೇವಾಲಯದ ಉಸ್ತುವಾರಿಯನ್ನುವಹಿಸಿಕೊಂಡಿದೆ. ಈ ಪೀಠದ ಮೊದಲ ಪೀಠಾಧಿಪತಿ ಶ್ರೀ ಪದ್ಮಪಾದಾಚಾರ್ಯ ಶ್ರೀಗಳು. ಪ್ರಸ್ತುತ ಪೀಠಾಲಂಕೃತ ಶ್ರೀ ನಿಶ್ಚಲಾನಂದ ಸರಸ್ವತೀ ತೀರ್ಥ ಮಹಾಸ್ವಾಮಿಗಳು ಹಿಂದೂ ಧರ್ಮದ ಏಕೀಕರಣ ಹಾಗೂ ಸಾಂಸ್ಕೃತಿಕ ಪ್ರಸಾರದ ಮುಂದಾಳತ್ವವನ್ನು ವಹಿಸಿಕೊಂಡಿದ್ದಾರೆ. ಈ ಪೀಠ ಪರಂಪರೆಯ ಪ್ರಸಿದ್ಧ ಪೀಠಾಧಿಪತಿಯಾಗಿದ್ದ ಶ್ರೀ ಭಾರತೀಕೃಷ್ಣ ತೀರ್ಥ ಮಹಾಸ್ವಾಮಿಗಳು ಹಿಂದೂ ಧರ್ಮದ ಪ್ರಖರ ಪ್ರಸಾರಕರಲ್ಲಿ ಒಬ್ಬರಾಗಿದ್ದರು. ಒಬ್ಬ ಸಂನ್ಯಾಸಿಯಾಗಿ ಶ್ರೀಗಳು 1921ರಲ್ಲಿ ಕರಾಚಿ ನ್ಯಾಯಾಲಯದಲ್ಲಿ ತೋರಿದ ಧೈರ್ಯ ಇಂದಿನ ಸಂನ್ಯಾಸಿಗಳಿಗೆ ಮಾದರಿ.

ಸಂನ್ಯಾಸತ್ವ ಪ್ರತಿಪಾದಿಸಿದ ವೀರ ಸಂನ್ಯಾಸಿ



ಬ್ರಿಟಿಷ್ ಆಡಳಿತದ ಪರಮಾವಧಿಯಲ್ಲಿ ಶ್ರೀ ಭಾರತೀಕೃಷ್ಣ ತೀರ್ಥ ಮಹಾಸ್ವಾಮಿಗಳು ಕೋರ್ಟ್ ಮೆಟ್ಟಿಲು ಹತ್ತಬೇಕಾದ ಪರಿಸ್ಥಿತಿ ಎದುರಾಯಿತು. ಅಂದಿನ ಕಾಂಗ್ರೆಸ್ ನಾಯಕರಾದ ಅಲಿ ಸಹೋದರರ ಕಾರ್ಯಕ್ಕೆ ಶ್ರೀಗಳು ಬೆಂಬಲ ಸೂಚಿಸಿದ್ದರು. ಅಲಿ ಸಹೋದರರು ತಮ್ಮ ಕಾರ್ಯಸಾಧನೆಗಾಗಿ ಬ್ರಿಟಿಷ್ ಸೈನ್ಯದಲ್ಲಿ ಮುಸ್ಲಿಮರನ್ನು ಸೇರಿಸಿದ್ದರು. ಇದರಿಂದ ಬ್ರಿಟಿಷ್ ಸರ್ಕಾರವು ಅವರ ವಿರುದ್ಧ ಭಾರತೀಯ ದಂಡಸಂಹಿತೆಯ ಪ್ರಕಾರ ಒಂದು ದೂರು ದಾಖಲಿಸಿತು. ಘಾಜಿ ಮುಸ್ತಫಾ ಕಮಲ್ ಪಾಷಾ ಬ್ರಿಟಿಷರ ವಿರುದ್ಧ ಮುಸ್ಲಿಂ ಫತ್ವಾ (ಕಾನೂನು) ಹೇರುವಲ್ಲಿ ಪಾರಮ್ಯ ಸಾಧಿಸಿದ್ದ.

ಅದನ್ನು ಹತ್ತಿಕ್ಕಲು ಬ್ರಿಟಿಷ್ ಸರ್ಕಾರ ಪಿತೂರಿ ನಡೆಸಿತ್ತು. ಇದನ್ನು ಮನಗಂಡ ಪಾಷಾ, ಅಂಗೋರಾ ಸರ್ಕಾರದಿಂದ ಎಲ್ಲಾ ಧರ್ಮದವರ ಸಭೆ ಕರೆದು ಬ್ರಿಟಿಷರ ವಿರುದ್ಧ ದಂಗೆ ಏಳಲು ಆದೇಶಿಸಿದ. ಅದರ ನೇತೃತ್ವವನ್ನು ಮೌಲಾನಾ ಹುಸೇನ ಅಹ್ಮದ್ ಮದಿನಿ ವಹಿಸಿದ್ದ. ಈ ಕ್ರಾಂತಿಕಾರಿ ಹೆಜ್ಜೆಗೆ ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ಭಾರತೀಕೃಷ್ಣ ತೀರ್ಥ ಮಹಾಸ್ವಾಮಿಗಳು ಕೂಡ ಸಮ್ಮತಿಸಿದ್ದರು. ಕೆಲವು ಮುಸ್ಲಿಂ ಮೌಲ್ವಿಗಳು ಸೇರಿದಂತೆ ವಿವಿಧ ಧರ್ಮೀಯರು ದಂಗೆ ಏಳುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಆದರೆ ಶ್ರೀ ಭಾರತೀಕೃಷ್ಣ ತೀರ್ಥ ಮಹಾಸ್ವಾಮಿಗಳು ಮಾತ್ರ ಬೆಂಬಲ ಸೂಚಿಸಿದ್ದರು. ಈ ಕ್ರಾಂತಿಯ ಸುಳಿವನ್ನು ಅರಿತ ಬ್ರಿಟಿಷ್ ಸರ್ಕಾರ 1921ರ ಸೆಪ್ಟೆಂಬರ್ 8ರಂದು ಸಭೆಯಲ್ಲಿ ಪಾಲ್ಗೊಂಡಿದ್ದವರನ್ನು ಬಂಧಿಸಿ ಕರಾಚಿ ನ್ಯಾಯಾಲಯಕ್ಕೆ ಹಾಜರುಪಡಿಸಿತು.

ಸೆಪ್ಟೆಂಬರ್ 21ರಂದು ಎಲ್ಲರ ವಿಚಾರಣೆಯನ್ನು ನಡೆಸಿದ ನ್ಯಾಯಾಧೀಶರು ಶ್ರೀ ಭಾರತೀಕೃಷ್ಣ ತೀರ್ಥ ಮಹಾಸ್ವಾಮಿಗಳನ್ನು ಆರನೆಯ ಆರೋಪಿಯಾಗಿ ವಿಚಾರಣೆಗೆ ಒಳಪಡಿಸಿದರು. ''ಎದ್ದು ನಿಂತು ಅಭಿಪ್ರಾಯ ಮಂಡಿಸಿ''ಎಂದು ನ್ಯಾಯಾಧೀಶರು ಶ್ರೀಗಳಿಗೆ ಸೂಚಿಸಿದರು. ಆದರೆ ಎದ್ದು ನಿಲ್ಲಲು ನಿರಾಕರಿಸಿದ ಶ್ರೀಗಳು ''ಸಂನ್ಯಾಸಿ ಪರಂಪರೆಯಲ್ಲಿ ನಮ್ಮ ಗುರುಗಳ ಹೊರತು ಯಾರ ಮುಂದೆಯೂ ಎದ್ದು ನಿಲ್ಲಲು ಅವಕಾಶವಿಲ್ಲ'' ಎಂದು ಉತ್ತರಿಸಿದರು. ಕೋಪಗೊಂಡ ನ್ಯಾಯಾಧೀಶರು, ''ನಾನು ಈ ರೀತಿ ಸಾಕಷ್ಟು ನೋಡಿದ್ದೇನೆ. ಎದ್ದು ನಿಲ್ಲಿ'' ಎಂದರು. ಅದನ್ನು ನಿರಾಕರಿಸಿದ ಶ್ರೀಗಳು ''ಮೌಖಿಕವಾಗಿ ನಮ್ಮ ಅಭಿಪ್ರಾಯವನ್ನು ದಾಖಲಿಸಬಹುದು. ಅಲ್ಲದೆ ನನ್ನ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳೂ ಇಲ್ಲ'' ಎಂದರು. ಹಠ ಬಿಡದ ನ್ಯಾಯಾಧೀಶ, ''ನೀವು ಎದ್ದು ನಿಲ್ಲುವವರೆಗೆ ನಿಮ್ಮ ಯಾವುದೇ ಅಭಿಪ್ರಾಯವನ್ನು ದಾಖಲಿಸುವುದಿಲ್ಲ'' ಎಂದಾಗ ''ನಾವು ಧರ್ಮಪರಿಪಾಲಕರು. ನಮಗೆ ನಮ್ಮದೇ ಆದ ನಿಯಮಗಳಿವೆ. ನನ್ನ ಶಿರಚ್ಛೇದ ಮಾಡಿದರೂ ಯಾವುದೇ ಕಾರಣಕ್ಕೂ ನಿಯಮ ಮುರಿಯಲು ಇಚ್ಛಿಸುವುದಿಲ್ಲ, ನಮಗೆ ಇರುವುದೇ ಕಾನೂನು.

ಅದು ಧರ್ಮ. ಹೀಗಾಗಿ ನಾನು ಎದ್ದು ನಿಲ್ಲುವುದಿಲ್ಲ. ಬೇಕಾದರೆ ಅಭಿಪ್ರಾಯ ದಾಖಲಿಸಬಹುದು'' ಎಂದು ಖಡಾಖಂಡಿತವಾಗಿ ನುಡಿದ ಶ್ರೀಗಳು ವೀರ ಸಂನ್ಯಾಸತ್ವ ಪ್ರದರ್ಶಿಸಿದರು.

ಈ ವೇಳೆ ಶ್ರೀಗಳಿಗೆ ಬೆಂಬಲ ಸೂಚಿಸಿದ ಮಹಮ್ಮದ್ ಅಲಿ, ''ನ್ಯಾಯಾಧೀಶರೇ, ಅವರು ಒಬ್ಬ ವೀರ ಸಂನ್ಯಾಸಿ. ಅವರನ್ನು ಈ ರೀತಿ ನಡೆಸಿಕೊಳ್ಳುವುದು ಸರಿಯಲ್ಲ. ನಿಮಗೆ ಇರುವಂತೆ ಅವರಿಗೂ ಅನೇಕ ಕಟ್ಟುಪಾಡುಗಳಿವೆ. ನಿಮ್ಮ ನ್ಯಾಯಧರ್ಮಕ್ಕೆ ನೀವು ಗೌರವಿಸುವಂತೆ ಅವರು ತಮ್ಮ ಧರ್ಮ ಹಾಗೂ ಸಂನ್ಯಾಸ ಪರಂಪರೆಗೆ ಗೌರವ ಸೂಚಿಸುತ್ತಿದ್ದಾರೆ'' ಎಂದು ತಿಳಿಸಿದರು. ವಾದ ಪ್ರತಿವಾದ ಆಲಿಸಿದ ಕೆಲವು ಹೊತ್ತಿನ ನಂತರ ನ್ಯಾಯಾಧೀಶರು ಶ್ರೀ ಭಾರತೀಕೃಷ್ಣ ತೀರ್ಥ ಮಹಾಸ್ವಾಮಿಗಳನ್ನು ಬಂಧಮುಕ್ತ ಮಾಡಿ ಉಳಿದ ಆರೋಪಿಗಳಿಗೆ ಎರಡು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದರು. ಹೀಗೆ ನ್ಯಾಯಾಧೀಶರ ಮುಂದೆ ತಮ್ಮ ಪರಂಪರೆಯನ್ನು ಎತ್ತಿ ಹಿಡಿದ ಶ್ರೀ ಭಾರತೀಕೃಷ್ಣ ತೀರ್ಥ ಮಹಾಸ್ವಾಮಿಗಳು ಒಬ್ಬ ವೀರ ಸಂನ್ಯಾಸಿಯಾಗಿ ಕಾಣಿಸಿಕೊಂಡರು.

ವೇದಗಣಿದ ಪರಿಶೋಧನೆ

ಮದ್ರಾಸ್ ಪ್ರಾಂತ್ಯದಲ್ಲಿ 1884ರ ಮಾರ್ಚ್ 14ರಂದು ಜನಿಸಿದ ಮಹಾಸ್ವಾಮಿಗಳ ಪೂರ್ವಾಶ್ರಮದ ಹೆಸರು ವೆಂಕಟರಮಣ. 1899ರಲ್ಲಿ ಮದ್ರಾಸ್ ವಿ.ವಿ.ಯ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದ ಅವರ ಅಪಾರ ಸಂಸ್ಕೃತ ಜ್ಞಾನ ಮತ್ತು ಭಾಷಣ ಕಲೆಯಲ್ಲಿದ್ದ ಪ್ರಾವೀಣ್ಯತೆಯನ್ನು ಗುರುತಿಸಿ ಮದ್ರಾಸ್ ಸಂಸ್ಕೃತ ಸಂಘದವರು 'ಸರಸ್ವತಿ' ಎಂಬ ಬಿರುದು ನೀಡಿ ಗೌರವಿಸಿದರು. 1903ರಲ್ಲಿ ಅಮೇರಿಕನ್ ಕಾಲೇಜ್ ಆಫ್ ಸೈನ್ಸ್‌ನ ಮುಂಬೈ ಕೇಂದ್ರದಿಂದ ಪರೀಕ್ಷೆ ಬರೆದು ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದರು. 1904ರ ಹೊತ್ತಿಗೆ ಕೇವಲ 20 ವರ್ಷ ವಯಸ್ಸಿನಲ್ಲಿ ಏಳು ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ್ದಲ್ಲದೆ, ಈ ಎಲ್ಲ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆದಿದ್ದರು. ವಿಜ್ಞಾನವಲ್ಲದೆ ಸಂಸ್ಕೃತ, ತತ್ತ್ವಶಾಸ್ತ್ರ, ಇಂಗ್ಲಿಷ್, ಗಣಿತ ಮತ್ತು ಇತಿಹಾಸಗಳನ್ನೂ ಅಧ್ಯಯನ ಮಾಡಿದ್ದರು. ವಿದ್ಯಾಭ್ಯಾಸದ ನಂತರ ಗೋಪಾಲಕೃಷ್ಣ ಗೋಖಲೆಯವರ ಮಾರ್ಗದರ್ಶನದಲ್ಲಿ ರಾಷ್ಟ್ರೀಯ ಶಿಕ್ಷಣ ಚಳುವಳಿಯಲ್ಲಿ ತೊಡಗಿಸಿಕೊಂಡರು. ಸನಾತನ ವೇದವಿಜ್ಞಾನದ ಬಗ್ಗೆ ತೀವ್ರ ಆಸಕ್ತಿಯಿಂದಾಗಿ 1908ರಲ್ಲಿ ಶೃಂಗೇರಿಯ ಶಾರದಾ ಪೀಠದ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳಲ್ಲಿ ಬಂದರು. ಆದರೆ ರಾಷ್ಟ್ರೀಯ ಶಿಕ್ಷಣ ಚಳುವಳಿಯವರ ಕರೆಗೆ ಮತ್ತೊಮ್ಮೆ ಓಗೊಟ್ಟು ಮುಂದಿನ 3 ವರ್ಷ ರಾಜಮಹೇಂದ್ರಿಯ ರಾಷ್ಟ್ರೀಯ ಕಾಲೇಜಿನ ಪ್ರಾಚಾರ್ಯರಾಗಿ ಕರ್ತವ್ಯ ನಿರ್ವಹಿಸಿದರು. ಅಥರ್ವ ವೇದದ ಪರಿಶಿಷ್ಟವೊಂದರಲ್ಲಿ ಹುದುಗಿದ್ದ ವೇದಗಣಿತವನ್ನು ಹೊರತೆಗೆಯಬೇಕೆಂಬುದು ಅವರ ಬಯಕೆಯಾಗಿತ್ತು. ಹಾಗೆಯೇ 1911ರಲ್ಲಿ ಪುನಃ ಶೃಂಗೇರಿಗೆ ಬಂದು ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳ ದಿವ್ಯಾಶೀರ್ವಾದಗಳೊಂದಿಗೆ ಜ್ಞಾನದ ಹಸಿವನ್ನು ತಣಿಸಿಕೊಳ್ಳಲು ನಿರಂತರ ಅಧ್ಯಯನದಲ್ಲಿ ತೊಡಗಿದರು. ಮುಂದಿನ ಎಂಟು ವರ್ಷಗಳಲ್ಲಿ ವೇದಾಂತವನ್ನು ಆಳವಾಗಿ ಅಧ್ಯಯನ ಮಾಡಿದರು. ಈ ಅವಧಿಯಲ್ಲಿ ಶೃಂಗೇರಿಯ ವೇದಪಾಠಶಾಲೆಯಲ್ಲಿ ಸಂಸ್ಕೃತ ಮತ್ತು ತತ್ತ್ವಶಾಸ್ತ್ರಗಳನ್ನು ಬೋಧಿಸಿದರು.

ಬಹಳ ವರ್ಷಗಳ ಕಾಲ ವೇದಾಂತದ ಆಳ ಅಧ್ಯಯನದ ಫಲವಾಗಿ ವೆಂಕಟರಮಣ ಸರಸ್ವತಿಯರು ಸಂನ್ಯಾಸದ ಕಡೆಗೆ ತಮ್ಮ ಒಲವನ್ನು ತೋರಿಸಿದರು. ವಾರಣಾಸಿಯ ಜಗದ್ಗುರು ಶ್ರೀ ತ್ರಿವಿಕ್ರಮ ತೀರ್ಥ ಮಹಾಸ್ವಾಮಿಗಳ ದಿವ್ಯಾಶೀರ್ವಾದಗಳೊಂದಿಗೆ 1919ರ ಜುಲೈ 4ರಂದು ಸಂನ್ಯಾಸ ದೀಕ್ಷೆ ಪಡೆದರು. ನಂತರ ಇವರನ್ನು ಸ್ವಾಮಿ ಭಾರತೀಕೃಷ್ಣ ತೀರ್ಥರೆಂದು ಕರೆಯಲಾಯಿತು. 1921ರಿಂದ ಭಾರತದ ನಾನಾ ಕಡೆಗಳಲ್ಲಿ ಸಂಚರಿಸಿ ಸನಾತನ ಧರ್ಮದ ಸಾರವನ್ನು ಉಪನ್ಯಾಸಗಳ ಮೂಲಕ ತಿಳಿಸತೊಡಗಿದರು. ಈ ಅವಧಿಯಲ್ಲೇ ಅವರು ಕರಾಚಿ ನ್ಯಾಯಾಲಯದಲ್ಲಿ ವೀರ ಸಂನ್ಯಾಸತ್ವ ಪ್ರದರ್ಶಿಸಿರುವುದು.

1925ರಲ್ಲಿ ಅನಾರೋಗ್ಯಪೀಡಿತರಾದ ಪುರಿ ಗೋವರ್ಧನ ಪೀಠದ ಜಗದ್ಗುರು ಶ್ರೀ ಮಧುಸೂದನ ತೀರ್ಥ ಮಹಾಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳಾಗಿ ಶ್ರೀ ಭಾರತೀಕೃಷ್ಣ ತೀರ್ಥರು ಬರಬೇಕೆಂದು ಬಯಸಿದರು. ಹೀಗಾಗಿ ಪುರಿಯ ಗೋವರ್ಧನ ಪೀಠದ ಪೀಠಾಧೀಶರಾಗಿ ಉಪಸ್ಥಿತರಾದ ಅವರು ಮುಂದಿನ 35 ವರ್ಷ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ನೂರಾರು ಉಪನ್ಯಾಸಗಳನ್ನು ನೀಡಿದರು. 1953ರಲ್ಲಿ ನಾಗಪುರದಲ್ಲಿ ''ವಿಶ್ವ ಪುನರ್ನಿರ್ಮಾಣ ಸಂಘ'' ಸ್ಥಾಪಿಸಿದರು. ವಿಶ್ವಶಾಂತಿಗಾಗಿ ಭಾರತೀಯ ಆಧ್ಯಾತ್ಮಿಕ ಚಿಂತನೆಗಳನ್ನು ಪ್ರಪಂಚಕ್ಕೆಲ್ಲ ಪರಿಚಯಿಸುವ ಉದ್ದೇಶದಿಂದ 1958ರಲ್ಲಿ ಅಮೇರಿಕ ಪ್ರವಾಸ ಕೈಗೊಂಡರು. ಮೂರು ತಿಂಗಳು ಅಮೇರಿಕದಲ್ಲಿ ನೆಲಸಿ ಹಲವು ಆಧ್ಯಾತ್ಮಿಕ ಉಪನ್ಯಾಸಗಳನ್ನು ನೀಡಿ, ವಿಶ್ವ ಪುನರ್ನಿರ್ಮಾಣ ಸಂಘದ ಶಾಖೆಯನ್ನು ಅಲ್ಲಿ ಆರಂಭಿಸಿದರು. ಭಾರತಕ್ಕೆ ಮರಳುವ ಮಾರ್ಗದಲ್ಲಿ ಇಂಗ್ಲೆಂಡ್‌ಗೂ ಹೋಗಿ ಉಪನ್ಯಾಸ ನೀಡಿದರು.

ವೇದಗಣಿತವನ್ನು 16 ಸಂಪುಟಗಳಲ್ಲಿ ಸಂಗ್ರಹಿಸಿ ಬರೆಯಲಾಗಿತ್ತೆಂದು ಸ್ವಾಮಿಗಳು ಹೇಳಿಕೊಂಡಿದ್ದಾರೆ. ದುರದೃಷ್ಟವಶಾತ್ ಈ ಎಲ್ಲಾ ಸಂಪುಟಗಳ ಹಸ್ತಪ್ರತಿಗಳನ್ನು ಪುರಿಯಲ್ಲಿನ ಆಪ್ತ ಶಿಷ್ಯರೊಬ್ಬರ ಮನೆಯಲ್ಲಿ ಇರಿಸಿದ್ದಾಗ ಬೆಂಕಿಗೆ ಆಹುತಿಯಾದವು. ಸ್ವಾಮಿಗಳ ಜೀವನದ ಕೊನೆಯ ದಿನಗಳಲ್ಲಿ ದೃಷ್ಟಿ ಮಂದವಾಗಿದ್ದರೂ ನೆನಪಿನಾಳದಿಂದ ಕೆದಕಿ ಕೇವಲ ಆರು ವಾರಗಳಲ್ಲಿ ಒಂದು ಸಂಪುಟದ ಕರಡನ್ನು ರಚಿಸಿ ಆಧುನಿಕ ಜಗತ್ತಿಗೆ ಕೊಟ್ಟರು. ಈ ಕರಡನ್ನು ವಾರಣಾಸಿಯ ಮೋತಿಲಾಲ್ ಬನಾರಸಿದಾಸ್

ಸಂಸ್ಥೆಯವರು 'ವೇದಗಣಿತ' ವೆಂಬ ಹೆಸರಿನಲ್ಲಿ ಪ್ರಕಟಿಸಿದರು. ಈಗ ನಮಗೆ ಲಭ್ಯವಿರುವ ವೇದಗಣಿತದಲ್ಲಿ ಸ್ವಾಮಿಗಳು ಹದಿನಾರು ಸೂತ್ರಗಳನ್ನು ನಿರೂಪಿಸಿದ್ದಾರೆ. ಈ ಸೂತ್ರಗಳು ಅಂಕಗಣಿತದ ಕ್ಲಿಷ್ಟತೆಯನ್ನು ಕಡಿಮೆ ಮಾಡಲು ಬಳಸಬಹುದು.

ಐದು ದಶಕಗಳ ಸತತ ಅಧ್ಯಯನ, ಚಿಂತನೆ, ಸಮಾಜಸೇವೆ, ತಿರುಗಾಟಗಳಿಂದ ಬಳಲಿದ ಸ್ವಾಮಿಗಳು 1959ರ ನವೆಂಬರ್ ತಿಂಗಳಿನಲ್ಲಿ ತೀವ್ರ ಅನಾರೋಗ್ಯ ಪೀಡಿತರಾದರು. ಸಾಕಷ್ಟು ಔಷಧೋಪಚಾರಗಳನ್ನು ಮಾಡಿದರೂ 1960ರ ಫೆಬ್ರವರಿ ಎರಡರಂದು ಸ್ವಾಮಿಗಳು ಮುಂಬೈಯಲ್ಲಿ ಮಹಾಸಮಾಧಿ ಹೊಂದಿದರು.

(ಸಂಗ್ರಹ - ಲೇ. ವಿ. ಜಿ. ಪಾಟೀಲ)

●

ನೀತ

ನೀತ ಒಬ್ಬಳು
ಸುಂದರ ಹುಡುಗಿ
ಮೌನದ ಚೆಲುವೆ
ಆ ಬೆಡಗಿ

ಆಡಂಬರವಿಲ್ಲ, ಒನಪು
ವೈಯ್ಯಾರವಿಲ್ಲ,
ಆದರೂ ಅವಳು ಪ್ರಾಕೃತಿಕ
ಚೆಲುವೆ
ಅವಳಿಗೆ ಈ ತ್ರಿಭುವನದಲ್ಲಿ
ಸರಿಸಾಟಿಯಿಲ್ಲ

ಓರೆಗಣ್ಣ ಹುಡುಗಿ
ಒಲುಮೆ ಜಗದ ಬೆಡಗಿ
ಕವನ ಉಕ್ಕಿ, ಭಾವವಾಗಿ
ಭಾಗ್ಯವಾದ ಹುಡುಗಿ

ಮುಗ್ಧ ಮನಸ ತರುಣಿ...
ಇವಳಿಗಾಗಿ, ಹುಟ್ಟಿತಾಗ ಕರುಣೆ...
ಒಲುಮೆ ಇವಳ ಪ್ರೇರಣೆ...
ಜಗಕೆ ಆಗ ಮನ್ನಣೆ...

ನೀತ, ಒಬ್ಬಳು
ಸುಂದರ ಹುಡುಗಿ
ಮೌನದ ಚೆಲುವೆ
ಆ ಬೆಡಗಿ

✍ **ಸಿದ್ಧಪ್ಪ ನಾಯಕ ಎಂ.,** ದ್ವಿತೀಯ ಬಿ.ಎ.

ಗದಗದಲ್ಲಿ ಬಸವೇಶ್ವರ ಸ್ಮಾರಕ

✍ **ಸದಾಶಿವ ಬಿ. ಎನ್.,** ಪ್ರಥಮ ಬಿ.ಎ.

ಪ್ರಪಂಚದ ಅತಿ ದೊಡ್ಡ ಬಸವೇಶ್ವರ ಪ್ರತಿಮೆಯು ಗದಗ ನಗರದಲ್ಲಿದೆ. ಇದು 116 ಅಡಿ ಎತ್ತರದ ಕಾಂಕ್ರೀಟ್ ಪ್ರತಿಮೆಯನ್ನು ಸಿಂಕ್ ಲೋಹದಿಂದ ಸಿಂಪಡಿಸಲಾಗಿರುತ್ತದೆ. ಶ್ರೀ ಬಸವೇಶ್ವರ ಅವರು 12ನೇ ಶತಮಾನದಲ್ಲಿ ಶ್ರೇಷ್ಠ ಸಾಮಾಜಿಕ ಸುಧಾರಕರಾಗಿದ್ದರು. ಸಮಾಜದ ಉತ್ತಮತೆಗಾಗಿ ಶ್ರಮ ವಹಿಸಿದರು. ಬಸವೇಶ್ವರರು ಸಮಾಜದ ಸಮಾನತೆಗಾಗಿ ವಚನ ಸಾಹಿತ್ಯದ ಮೂಲಕ ವಿಶ್ವದ ಗೌರವವನ್ನು ಪಡೆದವರು.

ಸುಂದರವಾದ ಉದ್ಯಾನವನದ ಮಧ್ಯಭಾಗದಲ್ಲಿರುವ ಈ ದೊಡ್ಡ ಪ್ರತಿಮೆಯು, ಗದಗ ನಗರದ ಜನಪ್ರಿಯ ಪ್ರವಾಸಿ ತಾಣವಾಗಿವೆ. ಇಲ್ಲಿರುವ ದೊಡ್ಡ ಗಾತ್ರದ ಸರೋವರದ ಕಾರಣದಿಂದ ಇದನ್ನು ಭೀಷ್ಮಾ ಕೆರೆ ಎಂದು ಕರೆಯಲಾಗುತ್ತದೆ. ಮಹಾಭಾರತದ ಅರ್ಜುನ ಮತ್ತು ಭೀಷ್ಮ ನಡುವಿನ ಯುದ್ಧದ ಪ್ರತಿಮೆಗಳು ಮುಂಭಾಗದಲ್ಲಿ ರಚಿಸಲ್ಪಟ್ಟಿವೆ.

ಈ ಪ್ರತಿಮೆಯ ನಿರ್ಮಾಣವು 2009ರಲ್ಲಿ ಪ್ರಾರಂಭವಾಗಿ 2015ರಲ್ಲಿ ಪೂರ್ಣಗೊಂಡಿತು. ಇದರ ವೆಚ್ಚವು ಸುಮಾರು 9 ಕೋಟಿಗಿಂತ ಹೆಚ್ಚು ಎಂದು ಹೇಳಲಾಗುತ್ತದೆ. ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿದ್ದ ಬಸವೇಶ್ವರಕ್ಕಿಂತ 8 ಅಡಿ ಎತ್ತರವಾಗಿದೆ.

ಈ ಪ್ರತಿಮೆಯ ಕೆಳಗೆ ವೃತ್ತಾಕಾರದ ಕೊಠಡಿಯಲ್ಲಿ ಬಸವೇಶ್ವರ ಜೀವನದ ಕೆಲವು ಪ್ರಮುಖ ಘಟನೆಗಳ ಸಣ್ಣ ವಸ್ತು ಸಂಗ್ರಹಾಲಯವಿದೆ. ವರ್ಣರಂಜಿತ ದೃಶ್ಯಗಳನ್ನು, ಪ್ರತಿಮೆಗಳು ಮತ್ತು ವರ್ಣಚಿತ್ರಗಳ ರೂಪದಲ್ಲಿ ಚಿತ್ರಿಸಲಾಗಿದೆ.

ಈ ಸ್ಮಾರಕದ ಸುತ್ತಲು ಅಚ್ಚುಕಟ್ಟಾದ ಉದ್ಯಾನವಿದೆ. ಪ್ರತಿಮೆಯ ಹೊರತುಪಡಿಸಿ ಭೀಷ್ಮಾ ಕೆರೆಯ ಮತ್ತೊಂದು ಆಕರ್ಷಣೆ ಬೋಟಿಂಗ್ ಆಗಿದೆ. ದೋಣಿಗಳನ್ನು ಬಾಡಿಗೆಗೆ ಪಡೆದುಕೊಂಡು ಅಥವಾ ಮೋಟಾರ್ ಬೋಟಲ್ಲಿ ಸವಾರಿ ಮಾಡಲು ಹೋಗಬಹುದು.

ಈ ಸ್ಮಾರಕ ಸೇರಿದಂತೆ ಇನ್ನೂ ಹತ್ತು ಹಲವಾರು ಪ್ರೇಕ್ಷಣಿಯ ಸ್ಥಳಗಳನ್ನು ನೋಡಲು ರಾಜ್ಯದ ವಿವಿಧೆಡೆಯಿಂದ ಜನ ಹರಿದುಬರುತ್ತಾರೆ. ಗದಗಿನ ಇತಿಹಾಸ ಸ್ಥಳಗಳಲ್ಲಿ ಪ್ರಮುಖವಾಗಿ ಬಸವೇಶ್ವರ ಸ್ಮಾರಕವೂ ಒಂದು.

ವಿಶ್ವಮಾತೆ ಗೋಮಾತೆ

✍ **ಚಿರಂತ ಸತೀಶ ಹೆಗಡೆ,** ಪ್ರಥಮ ಪಿ.ಯು.ಸಿ.

ಭಗವಂತನ ಸೃಷ್ಟಿಯಲ್ಲಿ ಗೋಮಾತೆ, ಜನ್ಮದಾತೆ, ಭೂಮಾತೆ ಈ ತ್ರಿಜೇತಗಳು ಪೂಜಾರ್ಹವಾದವುಗಳು. ಜನ್ಮದಾತೆ ಹೊತ್ತು-ಹೆತ್ತು ಸಾಕಿ ಸಲಹುತ್ತಾಳೆ. ಭೂಮಾತೆ ಆಹಾರ ಪದಾರ್ಥ ನೀಡಿ ದೇಹದ ಮತ್ತು ಜೀವದ ಪುಷ್ಟಿಗೆ ಕಾರಣಳಾಗುತ್ತಾಳೆ. ಆದರೆ ಗೋಮಾತೆ ಈ ಎರಡೂ ಮಾತೆಯರಿಗೂ ಜಗನ್ಮಾತೆಯಾಗಿ ಜನಿಸಿದ ಪ್ರತಿಯೊಬ್ಬ ಮಾನವನ ಆಜೀವ ಪರ್ಯಂತ ಸಹಕಾರಿಯಾಗಿರುತ್ತಾಳೆ. ಈ ಮೂವರ ಸಂಗಮ ಅತ್ಯಂತ ಶ್ರೇಷ್ಠವಾದುದು.

'ಗಮಲೃ ಗತೌ' ಎಂಬ ಧಾತುವಿನಿಂದ ನಿಷ್ಪನ್ನವಾದದ್ದು ಗೋ ಶಬ್ದ. ನಮ್ಮ ಸಂಸ್ಕೃತಿ ಗೋವಿನ ಮಹತ್ವವನ್ನು ಸಾರುತ್ತದೆ.

ಭುಕ್ತ್ವಾತೃಟಾನಿ ಶುಷ್ಕಾನಿ ಪೀತ್ವಾತೋಯಂ ಜಲಾಶಯಾತ್ ।
ದುಗ್ಧಂ ದದತಿ ಲೋಕೇಭ್ಯಃ ಗಾವೊ ವಿಶ್ವಸ್ಯ ಮಾತರಃ ॥

'ಶುಷ್ಕವಾದ ಹುಲ್ಲನ್ನು ತಿಂದು, ಜಲಾಶಯದ ನೀರನ್ನು ಕುಡಿದು ಅಮೃತ ತುಲ್ಯವಾದ ಕ್ಷೀರವನ್ನು ಕೊಡುವ ಲೋಕಮಾತೆ ಗೋವು, ಎಂಬುದಾಗಿ ನಮ್ಮ ಸಂಸ್ಕೃತಿ, ವೇದ, ರಾಮಾಯಣ, ಮಹಾಭಾರತ, ಭಗವದ್ಗೀತೆ – ಹೀಗೆ ಮುಂತಾದ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಇವುಗಳನ್ನು ಅವಲೋಕಿಸಿದಾಗ ಗೋವಿನ ಮಹತ್ವ, ಗೋ ಸೇವೆಯ ಫಲ, ಗೋ ಸಂರಕ್ಷಣೆಯ ಶ್ರೇಷ್ಠತೆ ಗೋಚರಿಸುತ್ತದೆ. 'ಪರೋಪಕಾರಾಯ ದುಹಂತಿ ಗಾವಃ' ಎಂಬ ಮಾತಿನಂತೆ ಗೋವು ಯಾವುದೇ ಫಲಾಭಿಲಾಶೆ ಇಲ್ಲದೇ ಕೃಷಿ ಪ್ರಧಾನ ರಾಷ್ಟ್ರದ ರೈತನ ಬೆನ್ನೆಲುಬಾಗಿ ಕೃಷಿಗೆ ತನ್ನ ಪೂರ್ಣ ಕೊಡುಗೆ ನೀಡಿ ಈ ಇಡೀ ಮಾನವ ಸಮಾಜದ ಉನ್ನತಿಗೆ ಕಾರಣವಾಗುತ್ತಿದೆ. ಅಂತಹ ಶ್ರೇಷ್ಠ ಗೋವಿನ ಬಗ್ಗೆ ಸ್ವಲ್ಪ ತಿಳಿಸಲು ಪ್ರಯತ್ನಿಸುತ್ತೇನೆ.

ನಮೋ ಬ್ರಹ್ಮಣ್ಯ ದೇವಾಯ ಗೋ ಬ್ರಾಹ್ಮಣ ಹಿತಾಯ ಚ ॥
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥

ಈ ಸಮಾಜದಲ್ಲಿ ಎಷ್ಟೋ ಜನರ ಬೆಳಗು ಬೆಡ್ ಕಾಫಿಯಿಂದ ಪ್ರಾರಂಭವಾಗುತ್ತದೆ. ಎದ್ದ ತಕ್ಷಣ ಕಾಫಿ ಕುಡಿಯದಿದ್ದರೆ ಅವರ ಆ ದಿನ ನರಕ ಸದೃಶ. ಇನ್ನು ಮಕ್ಕಳಿಗೆ ಹಾಲು, ದೇವತಾ ಕಾರ್ಯಗಳಿಗೆ ಹಾಲು, ಊಟದ ಪದಾರ್ಥಗಳಿಗಾಗಿ ಹಾಲು – ಹೀಗೆ ನಮ್ಮ ದೈನಂದಿನ ಜೀವನದಲ್ಲಿ ಹಾಲು ಒಂದು ಪ್ರಮುಖ ಸಂಗಾತಿ. ಆದರೆ ನಮ್ಮ ದುರದೃಷ್ಟ ಏನೆಂದರೆ ಈಗಿನ ಪಟ್ಟಣವಾಸಿ ಮಕ್ಕಳನ್ನು ಹಾಲು ಎಲ್ಲಿಂದ ಸಿಗುತ್ತದೆ ಎಂದು ಪ್ರಶ್ನಿಸಿದರೆ ನಂದಿನಿ ಅಂಗಡಿಯವನಿಂದ ಎಂದು ಉತ್ತರಿಸುತ್ತಾರೆ. ಪಾಪ ಇದು ಅವರ ತಪ್ಪಲ್ಲ, ಹುಟ್ಟಿನಿಂದಲೂ ಗೋವನ್ನು ನೋಡಿದವರಲ್ಲ, ಆದ್ದರಿಂದ ಗೊತ್ತಿಲ್ಲ. ಆದರೆ ಇದ್ಯಾವುದೂ ನಮ್ಮ ಸಂಸ್ಕೃತಿ ಅಲ್ಲ.

ಎಲ್ಲರಿಗೂ ತಿಳಿದಿರುವಂತೆ ಭಾರತ ಕೃಷಿ ಪ್ರಧಾನ ರಾಷ್ಟ್ರ. ನಾವೆಲ್ಲರೂ ಅದರಿಂದಲೇ ಬದುಕುತ್ತಿರುವ ಜನರು. ಒಂದು ಕಾಲದಲ್ಲಿ ದೇಶದ ಬೆನ್ನೆಲುಬು ರೈತ, ರೈತನ ಬೆನ್ನೆಲುಬು ಗೋವು. ಈಗ ಆಧುನಿಕ ಕೃಷಿ ಪದ್ಧತಿಯಲ್ಲಿ ಯಂತ್ರೋಪಕರಣಗಳ ಬಳಕೆ ಬಂದಿದೆ. ನಾವು ಉತ್ತಮವಾದ ಬೆಳೆ ಪಡೆಯಬೇಕೆಂದರೆ ಮಣ್ಣು ಫಲವತ್ತಾಗಿರಬೇಕು. ಅದಕ್ಕೆ ಗೊಬ್ಬರ ಹಾಕಬೇಕು. ಈಗ ರಾಸಾಯನಿಕ ಗೊಬ್ಬರ ಬಂದಿದೆ. ಒಳ್ಳೆ ಫಲವತ್ತತೆ ನೀಡುತ್ತದೆ. ಆದರೆ ಆ ಸುಖ ತಾತ್ಕಾಲಿಕ. ರಾಸಾಯನಿಕ ಗೊಬ್ಬರ ಒಂದು ರೀತಿ 'ಸ್ಲೋ ಪೊಯ್ಸನ್'. ಹೀಗೆ ಮುಂದೊಂದು ದಿನ ಅದು ನಮ್ಮ ಭೂಮಿಯನ್ನು ಬರಡು ಮಾಡುತ್ತದೆ. ಆದರೆ ಪೂರ್ವಜರು ಸಾವಯವ ಗೊಬ್ಬರ ಬಳಸುತ್ತಿದ್ದರು. ಈ ಸಾವಯವ ಗೊಬ್ಬರದ ಪ್ರಮುಖ ಘಟಕವೇ ಗೋವು. ಗೋ ತ್ಯಾಜ್ಯಗಳಿಂದ ನಿರ್ಮಿತವಾದ ಗೊಬ್ಬರ ಕೃಷಿ ಭೂಮಿಗೆ ಫಲವತ್ತತೆ ನೀಡುತ್ತಿತ್ತು ಹಾಗೂ ಅದನ್ನು ಬಳಸಿದಷ್ಟು ಫಲವತ್ತತೆ ಹೆಚ್ಚುತ್ತಾ ಹೋಗುತ್ತಿತ್ತು. ಇದು ಕೃಷಿಯಲ್ಲಿ ಗೋವಿನ ಸಣ್ಣ ಪಾತ್ರ.

ಭಾರತೀಯ ಸಂಸ್ಕೃತಿ ಒಂದು ಅವಿನಾಶಿಯಾಗಿ ಹರಿದು ಬರುತ್ತಿರುವ ಸಂಸ್ಕೃತಿ. ಹೇಗೆ ಗಂಗೆ ಕೇವಲ ನಿಂತ ನೀರಾಗದೆ ಶಿವನ ಜಟೆಯಿಂದ ಧರೆಗಿಳಿದು ಬಂದು ಎಲ್ಲರ ಪಾಪವನ್ನು ಕಳೆಯುತ್ತಾ ಅವಿನಾಶಿನಿಯಾಗಿ ಹರಿಯುತ್ತಿದ್ದಾಳೋ ಹಾಗೇ ಭಾರತೀಯ ಸಂಸ್ಕೃತಿ ಕೂಡ ವಿಶೇಷವಾದುದು. ಗೋವು ಭಾರತೀಯ ಸಂಸ್ಕೃತಿಯ ಮೂಲಾಧಾರ, ಗೋವಿನ ದರ್ಶನ, ಸ್ಪರ್ಶನ ಹಾಗೂ ಪೂಜನದ ಮಹತ್ವವನ್ನು ನಮ್ಮ ಸಂಸ್ಕೃತಿ ಸಾರುತ್ತದೆ. ನಮ್ಮ ಸಂಸ್ಕೃತಿಯ ಸರ್ವ ಕ್ಷೇತ್ರಗಳಲ್ಲೂ ಗೋವು, ಗೋಮಾತೆ ವಂದ್ಯಳಾಗಿದ್ದಾಳೆ. ಭಾರತೀಯರ ಆಹಾರ ಪದ್ಧತಿ, ಆಚರಣೆ, ಆಧ್ಯಾತ್ಮ ಚಿಂತನೆ, ವೈದ್ಯಕೀಯ ಕ್ಷೇತ್ರ, ಯೋಗ, ರಕ್ಷಣೆ – ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಗೋವಿಗೆ ಮಹತ್ವ ನೀಡಲಾಗಿದೆ.

ಹಿರಿಯರು ಚಿಕ್ಕ ಮಕ್ಕಳಿಗೆ ಹೇಳುವುದುಂಟು 'ಆಕಳ ಹಾಲನ್ನು ಕುಡಿಯೋಣ, ಆನೆಯ ಶಕ್ತಿಯ ಪಡೆಯೋಣ' ಎಂದು. ಭಾರತೀಯ ಧರ್ಮ ಪರಂಪರೆಯ ವೇದ ಗ್ರಂಥಗಳೂ ಹೇಳುತ್ತವೆ 'ಆಯುರ್ವೈ ಘೃತಂ' ಎಂದು. ಅಂದರೆ ತುಪ್ಪ ಆಯುಷ್ಯ ವರ್ಧಕ ಎಂದು, ಹಾಗೇ ಆಯುರ್ವೇದ ಹೇಳುತ್ತದೆ ''ಶಸ್ತಂ ಕ್ಷೀರಾಜ್ಯ ಭೋಜನಂ'' ಅಂದರೆ ಹಾಲು ಮತ್ತು ತುಪ್ಪದಿಂದ ಕೂಡಿರುವಂತಹ ಪದಾರ್ಥಗಳ ಸೇವನೆ ಉತ್ತಮ ಎಂದು. ಈ ಪದಾರ್ಥಗಳು ಮೇಧಾಶಕ್ತಿ, ಏಕಾಗ್ರತೆ ಹೆಚ್ಚಿಸುತ್ತವೆ. ಇದು ಬರೀ ನಮ್ಮ ಪೂರ್ವಜರ ಚಿಂತನೆಗಳಲ್ಲ, ನಮ್ಮ ಆಧುನಿಕ ವಿಜ್ಞಾನ ಕೂಡ ಸಾಬೀತು ಪಡಿಸಿದೆ. ಉತ್ತಮ ದೇಶಿ ತಳಿಯ ಗೋವಿನ ಹಾಲಿನಲ್ಲಿ ಪ್ರೋಟಿನ್, ಕಾರ್ಬೋಹೈಡ್ರೇಟ್, ಲಿಪಿಡ್, ಎ, ಬಿ, ಸಿ ಜೀವಸತ್ವಗಳು ಕೂಡಿವೆ. ಆದ್ದರಿಂದ ಹಾಲು ಒಂದು ಉತ್ತಮ ಪೂರ್ಣ ಆಹಾರ.

ರಾಮಾಯಣ, ಮಹಾಭಾರತ, ಭಗವದ್ಗೀತೆ ಹೀಗೆ ಭಾರತೀಯರ ಪವಿತ್ರ ಗ್ರಂಥಗಳಲ್ಲಿ ಗೋವಿನ ಮಹತ್ವ ಚಿತ್ರಿತವಾಗಿದೆ. ಭಾರತೀಯರು ನಂಬಿರುವಂತೆ ಶ್ರೀಕೃಷ್ಣನ ಬಾಯಿಯಿಂದ ಬಂದಿರುವ ಭಗವದ್ಗೀತೆಯಲ್ಲಿ ಹೀಗಿದೆ:

ಸರ್ವೋಪನಿಷದೋ ಗಾವಃ ದೋಗ್ಧಾ ಗೋಪಾಲ ನಂದನಃ ।
ಪಾರ್ಥೋ ವತ್ಸಸ್ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥

ತಾತ್ಪರ್ಯ: ಉಪನಿಷತುಗಳೇ ಗೋವುಗಳು, ಹಾಲನ್ನು ಕರೆಯುವವನೇ ಗೋಪಾಲನಂದನ ಕೃಷ್ಣ, ಕರು ಅರ್ಜುನ, ಈ ಹಾಲನ್ನು ಕುಡಿಯುವವರು ಪಂಡಿತರು, ಜ್ಞಾನಿಗಳು. ಅಂದರೆ ಗೋವಿನ ಹಾಲು ಶ್ರೇಷ್ಠ, ಅದು ಅಜ್ಞಾನವನ್ನು ಹೋಗಲಾಡಿಸಿ, ಸುಜ್ಞಾನವನ್ನು ನೀಡುತ್ತದೆ ಎಂಬುದಾಗಿ ಶ್ರೀ ಕೃಷ್ಣ ಹೇಳಿದ್ದಾನೆ.

॥ ವಂದೇ ಗೋಮಾತರಂ ॥

'ಗಾವೋ ಮೇ ಪುರತಃ ಸಂತು ಗಾವೋಮೇ ಸಂತು ಪೃಷ್ಠತ ।
ಗಾವೋ ಮೇ ಹೃದಯೇ ನಿತ್ಯಂ ಗವಾಂ ಮಧ್ಯೆ ವಸಾಮ್ಯಹಂ ॥'

ಅರ್ಥ: ನನ್ನ ಮುಂದೆ ಗೋವು, ನನ್ನ ಹಿಂದೆ ಗೋವು, ನನ್ನ ಹೃದಯದಲ್ಲಿ ಗೋವು, ಗೋವನ್ನು ನಿತ್ಯವೂ ಆರಾಧಿಸುತ್ತಾ ಗೋವಿನ ಮಧ್ಯದಲ್ಲಿ ವಾಸಿಸುತ್ತೇನೆ.

ಇದು ಒಂದು ಕಾಲದ ಜನರ ಮಾತು, ಈಗ ಪ್ರತಿಯೊಬ್ಬರು ಹೀಗಾದರೆ ಪುನಃ ಭಾರತ ಖಂಡಿತ ವಿಶ್ವಗುರುವಾಗುತ್ತದೆ.

''ಮಾತಾ ರುದ್ರಾಣಾಂ ದುಹಿತಾ ವಸೂನಾಂ ಸ್ವಸಾದಿತ್ಯಾನಾ ಮಮೃತಸ್ಸ ನಾಭಿಃ ।
ಪ್ರಣವೋಚಂ ಚಿಕಿತುಷೇ ಜನಾಯ ಮಗಾಮನಾಗಾ ಮದಿತಿಂ ವಧಿಷ್ಠ ॥''

ಗೋವು ಶಿವನ ತಾಯಿ, ಕ್ಷೀರವೆಂಬ ಅಮೃತ ನಿಧಿ, ಇವಳನ್ನು ವಧಿಸಬಾರದು, ಎಂಬುದು ಈ ಮಂತ್ರದ ತಾತ್ಪರ್ಯ, ಹೀಗೆ ಅನೇಕ ವೇದ ಮಂತ್ರಗಳಲ್ಲಿ ಗೋವಿನ ಮಹತ್ವ ತಿಳಿಯುತ್ತದೆ.

ಗೋವು ಮಂಗಲಕವಾದುದು. ಆದ್ದರಿಂದ ಯಾವುದೇ ಮಂಗಲ ಕಾರ್ಯಗಳಲ್ಲಿ ಗೋಪೂಜೆ, ಗೋಗ್ರಾಸ ಸಮರ್ಪಣೆ, ಗೋ ಸ್ಪರ್ಶಗಳನ್ನು ಆಚರಿಸುವುದು. ಗೃಹಪ್ರವೇಶದ ಸಂದರ್ಭದಲ್ಲಿ ಗೋ ಪ್ರವೇಶ, ಷೋಡಶ ಸಂಸ್ಕಾರಗಳ ಪ್ರಾರಂಭದಲ್ಲಿಯೂ ಗೋ ಪೂಜೆ, ಕನ್ಯಾದಾನದ ಸಂದರ್ಭದಲ್ಲಿ ಗೋ ದಾನ, ಹೀಗೆ ಗೋವಿಗೆ ಮಂಗಲಮಾತೆಗೆ ಎಲ್ಲಾ ಕಡೆ ಸ್ಥಾನ ನೀಡಲಾಗಿದೆ.

ನಮಗಾಗಿ ಗೋವು, ಗೋವಿಗಾಗಿ ನಾವು, ಗೋವಿಂದಲೇ ಜಗವು. ಗೋವಿಲ್ಲದೆ ಮಾನವ ಜೀವಿಸಲಾರ. ಗೋವಿನಿಂದ ನಮ್ಮ ಉಸಿರು ಶುದ್ಧ, ಗೋವಿನಿಂದ ನಮ್ಮ ಪಾಕ ಸಿದ್ಧ, ಗೋವಿನಿಂದ ನಮ್ಮ ಅಂತರ್ಜಲ ವೃದ್ಧಿ, ಗೋವಿನಿಂದ ನಮ್ಮ ಭೂಮಿ ಸಮೃದ್ಧಿ, ಗೋವಿನಿಂದ ನಮ್ಮ ಗೃಹ ಶುದ್ಧಿ, ಗೋವಿಂದಲೇ ನಮ್ಮ ಸರ್ವ ಸಮೃದ್ಧಿ, ಎಲ್ಲವೂ ಗೋಮಯ, ಗೋವಿದ್ದರೆ ನಾವು. ''ಗಾವೋ ವಿಶ್ವಸ್ಯ ಮಾತರಃ ॥''

ಹೀಗೆ ಮಾನವನ ಏಳ್ಗೆಗಾಗಿ ಶ್ರಮಿಸುತ್ತಿರುವ ಗೋವಿನ ತ್ಯಾಗ ಶ್ರೇಷ್ಠವಾದುದು. ಆದರೆ ಮಾನವನ ಆಸೆಗೆ ಮಿತಿಯೇ ಇಲ್ಲ. ಯಾರೋ ಒಬ್ಬ ಬಹಳ ಚಿನ್ನದ ಮೊಟ್ಟೆಗಳ ಆಸೆಯಿಂದ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನೇ ಕೊಂದನಂತೆ, ಹಾಗಾಗಿದೆ ನಮ್ಮ ಸಮಾಜ. ನಮಗಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಲೋಕಮಾತೆ ಗೋವು. ಅವಳು ನಮಗೆ ಜನ್ಮ ಕೊಟ್ಟ ತಾಯಿ, ಸಾಕುತ್ತಿರುವ ಭೂಮಿ ತಾಯಿಗೆ ತುಲ್ಯಳು. ನಮಗೆ ಆಹಾರ ನೀಡಿ ಪೋಷಿಸುತ್ತಿರುವವಳು, ಅಂತಹ ಅವಳನ್ನೇ ಆಹಾರವಾಗಿ ಬಯಸುವುದು ಎಷ್ಟು ಸರಿ ?

ಮಿತ್ರರೇ ಒಂದಂತೂ ನಿಜ, ಗೋವಿಂದಲೇ ನಾವು. ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಾವೆಲ್ಲರೂ ಗೋವನ್ನು ಅವಲಂಬಿಸಿದ್ದೇವೆ. ಪುರಾಣಗಳಲ್ಲಿ ಇರುವಂತೆ ಗೋಹತ್ಯೆ ಮಹಾಪಾಪ. 'ಗೋ ಸಂರಕ್ಷಣೆಯೇ ಸ್ವರ್ಗಕ್ಕೆ ಹಾದಿ, ಗೋ ಹತ್ಯೆಯೇ ನರಕಕ್ಕೆ ಆದಿ' ಆದ್ದರಿಂದ ಇನ್ನಾದರೂ ಎಚ್ಚೆತ್ತುಕೊಂಡು ಸ್ವರ್ಗದ ಹಾದಿಯಲ್ಲಿ ನಡೆಯಿರಿ. ಮತ್ತೊಮ್ಮೆ ಗೋವಿನ 'ರಕ್ಷಣೆ ನಮ್ಮೆಲ್ಲರ ಹೊಣೆ'. ●

ನಮ್ಮ ದೇಶದ ಸಂಸ್ಕೃತಿ

✍ **ಮನಸ್ವಿ ಕೆ.,** ದ್ವಿತೀಯ ಬಿ.ಎಸ್ಸಿ.

ಹಲವು ಸಾವಿರ ವರುಷಗಳ ಪರಂಪರೆಯನ್ನು ಹೊಂದಿರುವ ನಮ್ಮ ದೇಶ ಹಲವಾರು ಹೆಸರುಗಳಿಂದ ಪ್ರಸಿದ್ಧವಾಗಿದೆ. ಸಿಂಧೂ ನದಿ ಕಣಿವೆಗಳಲ್ಲಿ ವಾಸಿಸುತ್ತಿದ್ದ ಜನರ ನಾಗರೀಕತೆಯನ್ನು ಆಧರಿಸಿ ಗುರುತಿಸಲ್ಪಟ್ಟ ನಮ್ಮ ದೇಶದ ಸಂಸ್ಕೃತಿಯನ್ನು ಮೊಟ್ಟಮೊದಲಿಗೆ ದಾಖಲಿಸಲಾಯಿತು. ಹಾಗಾಗಿ ನಮ್ಮ ದೇಶಕ್ಕೆ ಹಿಂದೂ ದೇಶ ಅಥವಾ ಹಿಂದೂಸ್ಥಾನ ಎಂಬ ಹೆಸರು ಬಂತು ಎಂಬುದಾಗಿ ಚರಿತ್ರೆ ತಿಳಿಸುತ್ತದೆ. ಭಾರತ ಎಂಬುದಾಗಿ ಕರೆಯಲ್ಪಡುವ ನಮ್ಮ ದೇಶವನ್ನು ನಂತರ ಬಂದ ಬ್ರಿಟಿಷರು 'ಇಂಡಿಯಾ' ಎಂದು ಕರೆದರು. ಏಕಕಾಲದಲ್ಲಿ ಮೂರು ಹೆಸರುಗಳಿಂದ ಗುರುತಿಸಲ್ಪಡುವ ದೇಶ ಎಂದರೆ ಅದು ನಮ್ಮ ದೇಶ ಮಾತ್ರ.

30 ರಾಜ್ಯಗಳನ್ನು ಒಳಗೊಂಡ ನಮ್ಮ ದೇಶ ಅಖಂಡ ಭಾರತವಾಗಿ ಕಂಡುಬಂದರೂ ಒಂದೊಂದು ರಾಜ್ಯವೂ ತನ್ನದೇ ಆದ ಸ್ವಂತಿಕೆಯನ್ನೂ, ಸಂಸ್ಕೃತಿಯನ್ನು ಹೊಂದಿದೆ. ಭಾರತೀಯ ಪರಂಪರೆಯನ್ನು, ಸಂಸ್ಕೃತಿಯನ್ನು ಗೌರವಿಸುವ, ಅನುಸರಿಸುವ ಹಲವಾರು ವಿದೇಶಿಯರನ್ನು ನಾವು ಕಾಣಬಹುದು. ಉತ್ತರದ ರಾಜ್ಯಗಳಾದ ಜಮ್ಮು ಕಾಶ್ಮೀರ, ಉತ್ತರಾಂಚಲ ಸರೋವರಗಳಿಗೆ, ಗಿರಿ ಶಿಖರಗಳಿಗೆ ಹೆಸರುವಾಸಿಯಾದರೆ ದಕ್ಷಿಣದ ಕನ್ಯಾಕುಮಾರಿ, ಕೇರಳ, ತಮಿಳುನಾಡು. ಸಮುದ್ರ, ತೆಂಗಿನಮರಗಳು, ದೋಣಿ ಮನೆಗಳಿಗೆ ಪ್ರಸಿದ್ಧ ಪಡೆದಿದೆ. ಪೂರ್ವದ ರಾಜ್ಯಗಳಾದ ಮೇಘಾಲಯ, ಮಣಿಪುರ, ಅಸ್ಸಾಂ ಚಹಾ ತೋಟಗಳಿಗೆ ಹೆಸರಾಗಿದ್ದರೆ, ಪಶ್ಚಿಮದ ರಾಜಸ್ಥಾನ, ಪಂಜಾಬ್, ಕೋಟೆ, ಅರಮನೆ, ಮರುಭೂಮಿಗೆ, ಹಸಿರು ಪೈರಿಗೆ ಪ್ರಸಿದ್ಧಿ ಪಡೆದಿವೆ. ಕೇವಲ ಒಂದೊಂದು ರಾಜ್ಯದಲ್ಲೇ ತುಂಬಿರುವ ಕಲೆ ಹಾಗೂ ಸಂಸ್ಕೃತಿ ಒಟ್ಟು ದೇಶಕ್ಕೆ ಬೇಕಾಗುವಷ್ಟು ಇದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹಲವಾರು ರಾಜರಿಂದ ಆಳಲ್ಪಡುತ್ತಿದ್ದ ನಮ್ಮ ದೇಶವು ಒಂದು ಸಿರಿವಂತ ದೇಶವಾಗಿತ್ತು. ಕೇವಲ ರಾಜಸ್ಥಾನವೊಂದರಲ್ಲೇ ರಾಜ್ಯವಾಳಿದ ಮೇವಾಡದ ಅರಸರು ನಮ್ಮ ದೇಶದ ಸಂಸ್ಕೃತಿಗೆ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಅಲ್ಲಿರುವ ಒಂದೊಂದು ಕೋಟೆಗಳು, ಅರಮನೆಗಳು ಅಲ್ಲಿರುವ ಚಿತ್ರಕಲೆ, ಅವರು ಉಪಯೋಗಿಸುತ್ತಿದ್ದ ವಸ್ತುಗಳು ನಮ್ಮ ಸಂಸ್ಕೃತಿಗೊಂದು ನಿದರ್ಶನವಾಗಿದೆ. ಮಹಿಳೆಯರು 'ಪರದಾ' ಪದ್ಧತಿಯನ್ನು ಅನುಸರಿಸುತ್ತಿದ್ದು ಅನ್ಯ ಪುರುಷರ ಎದುರಿಗೆ ಬಂದು ನಿಲ್ಲುವ ಸಂಪ್ರದಾಯ ಅಂದಿನ ಕಾಲದಲ್ಲಿರಲಿಲ್ಲ. ಪಂಜಾಬ್‌ನ ಜನರು ಶ್ರಮಜೀವಿಗಳಾಗಿದ್ದು ಅಲ್ಲಿನ ಜನರ ಬಾಂಗ್ರಾ ನೃತ್ಯವು ಬಹಳ ಜನಪ್ರಿಯವಾಗಿದೆ. ಪಂಜಾಬಿಗಳ ಸಾಂಪ್ರದಾಯಿಕ ಉಡುಗೆಯಾದ 'ಸಲ್ವಾರ್ ಕಮೀಜ್' ಈಗ ಉತ್ತರ ದಕ್ಷಿಣವೆನ್ನದೆ ಇಡೀ ದೇಶದ ಸಾಂಪ್ರದಾಯಿಕ ಉಡುಗೆಯಾಗಿ ಸ್ವೀಕೃತಗೊಂಡಿದೆ.

ಸುಮಾರು ಕ್ರಿ.ಶ. 1400ರ ಹೊತ್ತಿಗೆ ನಮ್ಮ ದೇಶದ ಮೇಲೆ ದಾಳಿ ಇಟ್ಟ ಮೊಘಲರು ಹಲವಾರು ಕಾಲ ದೆಹಲಿಯ ಗದ್ದುಗೆಯಲ್ಲಿ ದೇಶವಾಳಿದ್ದರು. ಮೊಘಲರ ದೊರೆಗಳಲ್ಲಿ ಪ್ರಸಿದ್ಧನಾದ ಅಕ್ಬರ್ ಮಹಾರಾಜ ಹಲವಾರು ಕೊಡುಗೆಗಳನ್ನು ದೇಶಕ್ಕೆ ನೀಡಿದ್ದನು. ಪರ್ಷಿಯನ್ ಶೈಲಿಯ ಹಲವಾರು ಕೋಟೆ ಅರಮನೆಗಳನ್ನು ದೆಹಲಿ, ಆಗ್ರಾದ ಆಸುಪಾಸುಗಳಲ್ಲಿ ನಾವು ಈಗಲೂ ಕಾಣಬಹುದು. ಆಗ್ರಾದ ಕೋಟೆ, ದೆಹಲಿಯ ಕೆಂಪು ಕೋಟೆ ಇವುಗಳಲ್ಲಿ ಯಮುನಾ ನದಿ ದಂಡೆಯಲ್ಲಿರುವ ತಾಜ್‌ಮಹಲ್ ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದು. ವ್ಯಾಪಾರದ ಕಾರಣವನ್ನು ನೀಡಿ ನಮ್ಮ ದೇಶಕ್ಕೆ ಬಂದು ಇಲ್ಲಿನ ಅಪಾರ ಸಂಪತ್ತನ್ನು ಕಂಡು ಇಲ್ಲಿಯೇ ನೆಲೆಯೂರಿ ಸುಮಾರು 100 ವರುಷಗಳ ಕಾಲ ನಮ್ಮ ದೇಶವನ್ನು ಲೂಟಿ ಮಾಡಿದ ಬ್ರಿಟಿಷರ ಕಡೆ ಪ್ರತಿಯೊಬ್ಬ ಭಾರತೀಯನಿಗೂ ನೋವು ತರುವ ವಿಚಾರ. ವೈದ್ಯಕೀಯ, ವಿದ್ಯಾಭ್ಯಾಸ ಮುಂತಾದ ಕ್ಷೇತ್ರಗಳಲ್ಲಿ ಬಹಳಷ್ಟು ಸುಧಾರಣೆಯನ್ನು ತಂದ ಬ್ರಿಟಿಷರು ತಮ್ಮ ಹಲವಾರು ರೀತಿ-ನೀತಿಗಳು, ಸಂಪ್ರದಾಯಗಳನ್ನು ಭಾರತೀಯರಿಗಾಗಿ ಬಿಟ್ಟು ಹೋಗಿದ್ದಾರೆ. ಬ್ರಿಟಿಷರ ಭಾಷೆಯಾದ ಇಂಗ್ಲಿಷ್ ನಮ್ಮ ದಿನನಿತ್ಯದ ವ್ಯಾವಹಾರಿಕ ಭಾಷೆಯಾಗಿರುವುದು ಹಾಗೂ ಪ್ಯಾಂಟ್ ನಮ್ಮ ದೇಶದ ಪುರುಷರ ಅನಿವಾರ್ಯ ಉಡುಗೆಯಾಗಿರುವುದನ್ನು ನಾವು ಇಂದು ಕಾಣಬಹುದು.

ನಮ್ಮ ರೀತಿ-ನೀತಿಗಳು, ಸಂಸ್ಕೃತಿ-ಸಂಪ್ರದಾಯಗಳು ತೆರೆಮರೆಗೆ ಸರಿಯುತ್ತಿದ್ದು ವಿದೇಶಿ ಉಡುಗೆ-ತೊಡುಗೆ, ಆಹಾರ, ಪಾನೀಯಗಳೇ ನಮ್ಮ ಅನಿವಾರ್ಯತೆ ಎಂಬಂತೆ ನಮ್ಮ ಜನರು ಇತ್ತೀಚೆಗೆ ವರ್ತಿಸುತ್ತಿದ್ದಾರೆ.

ದಕ್ಷಿಣದ ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರ ನಮ್ಮ ದೇಶದ ಸಂಸ್ಕೃತಿಯನ್ನು ಬಿಂಬಿಸುವ ಹಲವಾರು ರೀತಿ ರಿವಾಜುಗಳನ್ನು, ಸಂಪ್ರದಾಯಗಳನ್ನು ಜನರಿಗೆ ನೀಡುತ್ತಾ ಬಂದಿದೆ. ಮುಖ್ಯ ನಾಟ್ಯ ಪ್ರಕಾರಗಳಾದ ಭರತನಾಟ್ಯ, ಕಥಕ್ಕಳಿ, ಮೋಹಿನಿಯಾಟಂ, ಯಕ್ಷಗಾನ ಮುಂತಾದವು ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುತ್ತದೆ. ಹಲವಾರು ವಿದೇಶಿಯರು ನಮ್ಮೆಲ್ಲ ಸಂಸ್ಕೃತಿಗೆ ಮನಸೋತು ನಮ್ಮ

ದೇಶವನ್ನು ವೀಕ್ಷಿಸಲು ನಮ್ಮ ಕಲೆ, ಸಂಸ್ಕೃತಿಯನ್ನು ಅಭ್ಯಸಿಸಲು ಪ್ರತಿ ವರ್ಷವೂ ದೊಡ್ಡ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಯೋಗ, ಪ್ರಾಣಾಯಾಮಗಳಂತಹ ಸಾಧನೆಯನ್ನು ಮಾಡಲು ಅದರಿಂದ ಆರೋಗ್ಯವನ್ನು ಪಡೆಯಲು ಜನರು ವಿದೇಶಗಳಿಂದ ಆಗಮಿಸುತ್ತಾರೆ. ಪೂರ್ತಿ ಮಾಂಸಾಹಾರಿಗಳಾದ ವಿದೇಶಿಯರು ಭಾರತದ ಸಾತ್ವಿಕ ಆಹಾರಕ್ಕೆ ಮನಸೋತು ಪೂರ್ಣ ಶಾಕಾಹಾರಿಗಳಾದ ಎಷ್ಟೋ ಉದಾಹರಣೆಗಳಿವೆ. ಈಗ ನಡೆಯುತ್ತಿರುವ ಕುಂಭ ಮೇಳವನ್ನು ನೋಡಲು ಸಾವಿರಾರು ವಿದೇಶಿಯರು ಆಗಮಿಸುತ್ತಿದ್ದಾರೆ. ನಾಥ ಪಂಥದ ಅಘೋರಿಗಳ ಶಿಷ್ಯರಾಗಿ ಹಲವಾರು ಕಠಿಣ ಸಾಧನೆಗಳನ್ನು ಮಾಡುತ್ತಾ ಹಿಮಾಲಯದ ತಪ್ಪಲಿನಲ್ಲಿ ವಾಸಿಸುತ್ತಿದ್ದಾರೆ. ಕೇವಲ ತನ್ನ ದೇಶಕ್ಕಷ್ಟೇ ಅಲ್ಲದೇ ಅದನ್ನು ಇತರ ದೇಶಗಳು ಅನುಸರಿಸುವಷ್ಟರ ಮಟ್ಟಿನ ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುವ ಭಾರತದ ಪ್ರಜೆಗಳಾಗಿರುವ ನಾವೇ ಧನ್ಯರು. ನಮ್ಮ ದೇಶದ ಕಲೆ ಸಂಸ್ಕೃತಿಯನ್ನು ಉಳಿಸುವುದು ಹಾಗೂ ಬೆಳೆಸುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯ.

●

ಆಕೆ ಆಟಿಕೆ ಅಲ್ಲ

ದಯವಿಟ್ಟು ನನ್ನನ್ನು ಕ್ಷಮಿಸು ಮಗಳೆ
ಆ ರಾಕ್ಷಸರು ನಿನ್ನ ಬೆನ್ನಟ್ಟಿ
ನೀನು "ಅಮ್ಮಾ" ಎಂದಾಗ ನನಗೆ ಬರಲಾಗಲಿಲ್ಲ

ನಾನು ಅಳುವುದಿಲ್ಲ
ನಾನು ರೋದಿಸುವುದಿಲ್ಲ
ಆ ರಾಕ್ಷಸರಿಗೆ ಸರಿ ಶಿಕ್ಷೆಯಾಗುವ ತನಕ

ಛೀ! ಥೂ ! ನಾಚಿಕೆಯಾಗಬೇಕು ನಿಮಗೆ
ಆಕೆ ಆಟಿಕೆ ಅಲ್ಲ
ಆಕೆ ನನ್ನ ಮಗಳು

ಆಕೆ ನನ್ನ ಮಗಳು
ಆಕೆ ನನ್ನ ತಂಗಿ
ಆಕೆ ನಿಮ್ಮ ಅಮ್ಮ ಎಂದೆನಿಸಿಕೊಳ್ಳಿ

ನಿನ್ನ ಕೊನೆಯ ಮಾತು
ರಿಂಗಣಿಸುತಿದೆ ಕಿವಿಯಲಿ
ಅಮ್ಮಾ ಹುಷಾರು ! ಬಾಗಿಲ ಅಗುಳಿ ಹಾಕು

ಮತ್ತೆ ಹುಟ್ಟಿ ಬಾ ಮಗಳೆ
ರಾಕ್ಷಸರಿಗೆ ಬುದ್ಧಿ ಕಲಿಸಲು
ನಿನ್ನ ಕನಸಿಗೆ ರೆಕ್ಕೆ ಹಚ್ಚಲು ಬಾ.

✍ **ದೀಪ್ತಿ,** ಪ್ರಥಮ ಪಿ.ಯು.ಸಿ.

ತುಳುನಾಡಿನ ದೈವಾರಾಧನೆ

✍ **ಕಿಶನ್ ನಾಯಕ್,** ಪ್ರಥಮ ಬಿ.ಎಸ್ಸಿ.

ಪರಶುರಾಮನ ಸೃಷ್ಟಿಯಾದಂತಹ ಈ ತುಳುನಾಡಿನಲ್ಲಿ ದೈವಾರಾಧನೆ ಮತ್ತು ನಾಗಾರಾಧನೆಗಳು ಅತ್ಯಂತ ಪ್ರಮುಖವಾದ ಆಚರಣೆಗಳಾಗಿವೆ. ತುಳುನಾಡಿನ ಜನರಿಗೆ ದೈವಾರಾಧನೆಯು ಅತ್ಯಂತ ಪವಿತ್ರವಾದ ಆಚರಣೆ. ದೈವಾರಾಧನೆಯು ಮುಖ್ಯವಾಗಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಕಾಸರಗೋಡು ಮತ್ತು ಕೇರಳದ ಹಲವು ಭಾಗಗಳಲ್ಲಿ ನಡೆಯುತ್ತದೆ.

ದೈವಾರಾಧನೆಯ ಪ್ರಮುಖಾಂಶವೆಂದರೇ ಅದು ''ನೇಮೋತ್ಸವ'' ಅಥವಾ ''ಕೋಲ'' ಅಥವಾ ಇದನ್ನು ಕೇರಳಿಗರು ''ತೆಯ್ಯಂ'' ಎಂದು ಕರೆಯುತ್ತಾರೆ. ಈ ರೀತಿಯ ಆರಾಧನೆಯನ್ನು ಮೊದಲ ಬಾರಿಗೆ ಜೈನರಸರು ಆರಂಭಿಸಿದರೆಂದು ಇತಿಹಾಸ ತಿಳಿಸುತ್ತದೆ. ತುಳುವ ನಾಡಿನಲ್ಲಿ ದೈವಾರಾಧನೆಗೆ ಒಳ್ಳೆಯ ಸ್ಥಾನಮಾನವಿದೆ. ಈ ದೈವಾರಾಧನೆಯಲ್ಲಿ ಮುಖ್ಯವಾಗಿ ದೈವಗಳ ಆರಾಧನೆ ನಡೆಯುತ್ತದೆ. ದೈವಗಳೆಂದರೆ ದೇವರ ಪ್ರತಿನಿಧಿಗಳು. ಧರ್ಮ-ಅಧರ್ಮವಾಗಿ ಪರಿವರ್ತನೆಯಾಗುತ್ತಿದಂತಹ ಕಾಲದಲ್ಲಿ ಧರ್ಮ ಸ್ಥಾಪನೆಗಾಗಿ ಇಳಿದು ಬಂದಂತಹ ಶಕ್ತಿಗಳು, ನಂಬಿದವರಿಗೆ ಇಂಬು ಕೊಟ್ಟು, ನಂಬದಿದ್ದವರಿಗೆ ಶಿಕ್ಷೆ ವಿಧಿಸಿ ನಂಬಿಸುವಂತಹ ದೈವಗಳು ತುಳುವ ನಾಡಿನಲ್ಲಿ ತಮ್ಮ ಆಧಿಪತ್ಯವನ್ನು ಹೊಂದಿವೆ. ತುಳುನಾಡಿನಲ್ಲಿ ಒಟ್ಟಾಗಿ ಸುಮಾರು ಒಂದು ಸಾವಿರದ ಒಂದು ದೈವಗಳಿವೆ ಎಂದು ನಂಬಿಕೆ. ಅದರಲ್ಲಿ ಪ್ರಮುಖವಾದದ್ದು ಪಂಜುರ್ಲಿ, ಕಲ್ಕುಡ, ಧೂಮಾವತಿ, ಗುಳಿಗ, ಚಾಮುಂಡಿ, ಕೊಡಮಣಿತ್ತಾಯ, ಜಾರಂದಾಯ, ಕೋಟಿ-ಚೆನ್ನಯ, ಸಿರಿ, ಕುಮಾರ, ಬೊಬ್ಬರ್ಯ ಮುಂತಾದವು. ದೈವಗಳಲ್ಲಿ ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು. ಒಂದನೇಯದಾಗಿ, ಪ್ರಾಣಿ ಮೂಲದಿಂದ ಬಂದಂತಹ ದೈವಗಳು. ಪಂಜುರ್ಲಿ, ಮೈಸಂದಾಯ, ನಂದಿಗೋಣ. ಎರಡನೇಯದಾಗಿ ಭೂಮಿಯಲ್ಲಿ ಮನುಷ್ಯರಾಗಿದ್ದು ಹಲವಾರು ಕಷ್ಟಗಳನ್ನು ಅನುಭವಿಸಿ ದೈವಶಕ್ತಿಗಳಾಗಿ ಪರಿವರ್ತನೆಗೊಂಡಂತಹ ದೈವಗಳು. ಕಲ್ಕುಡ, ಕಲ್ಲುರ್ಟಿ, ಬಬ್ಬುಸ್ವಾಮಿ. ಮೂರನೇಯದಾಗಿ ದೇವರ ಅಂಶದಿಂದ ಜನಿಸಿದ ಶಕ್ತಿಗಳು. ಧೂಮಾವತಿ, ಚಾಮುಂಡಿ, ರಕ್ತೇಶ್ವರಿ, ಸತ್ಯದೇವತೆ.

ಅನಾದಿ ಕಾಲದಿಂದಲೂ ಕೂಡ ಈ ದೈವಾರಾಧನೆಯನ್ನು ತುಳುವರು ನಡೆಸಿಕೊಂಡು ಬಂದಿದ್ದಾರೆ. ಹಿಂದಿನ ಕಾಲದಲ್ಲಿ ಅವರು ದೈವಗಳನ್ನು ಅತ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಿಸುತ್ತಿದ್ದರು. ಅವರಲ್ಲಿ ಬಡತನವಿದ್ದರೂ, ತಿನ್ನಲು ಆಹಾರವಿಲ್ಲದಿದ್ದರೂ ಕೂಡಾ ತಾನು ನಂಬಿದಂತಹ ದೈವಗಳನ್ನು ಭಕ್ತಿಯಿಂದ, ವಿಧಿ-ವಿಧಾನಗಳನ್ನು ತಪ್ಪದೇ ಆರಾಧಿಸುತ್ತಿದ್ದರು. ಅವರಲ್ಲಿ ಕೇವಲ ಭಕ್ತಿಯಿತ್ತು. ಅದಕ್ಕಾಗಿ ಅವರಿಗೆ ದೈವಗಳು ಒಲಿಯುತ್ತಿದ್ದವು. ಆದರೆ ಈ ರೀತಿಯ ಆರಾಧನೆ ಕ್ಷೀಣಿಸತೊಡಗಿದೆ. ಏಕೆಂದರೆ, ಈಗ ದೈವ ಕೋಲಗಳು ನಡೆದರೂ ಕೂಡಾ ಅದು ಆಡಂಬರವಾಗಿ ಮನೋರಂಜನೆಗೆ ಆಸ್ಪದವನ್ನು ಮಾಡಿಕೊಡುತ್ತಿದೆ. ದೈವಗಳನ್ನು ಭೂತಗಳೆಂದು ಕರೆಯುವುದು ಹಿಂದಿನಿಂದ ಬಂದಂತಹ ಪದ್ಧತಿ. ಆದರೆ ವಾಸ್ತವದಲ್ಲಿ ದೈವಗಳು ಭೂತಗಳಲ್ಲ. ಹಿಂದಿನ ತುಳುವರು ತಮ್ಮ ಆರಾಧನೆಗಳಲ್ಲಿ ಕಂಡುಬಂದಂತಹ ಲೋಪದೋಷಗಳನ್ನು ಪರಿಹರಿಸಿಕೊಳ್ಳುವ ಸಲುವಾಗಿ ದೈವಕೋಲವನ್ನು ನಡೆಸುತ್ತಿದ್ದರು. ಆದರೆ ಈ ಆಚರಣೆ ಈಗಿನ ಕಾಲದಲ್ಲಿ ಆಧುನಿಕವಾಗಿ, ಆಡಂಬರವು ಅಧಿಕವಾಗುತ್ತಿದೆ. ಆದರೆ ಜನಸಾಮಾನ್ಯರಲ್ಲಿ ಭಕ್ತಿಯ ಒಂದು ಕಳೆಯು ಕೂಡಾ ಕಾಣಸಿಗುವುದಿಲ್ಲ. ದೈವಗಳು ಮತ ಭೇದವಿಲ್ಲದೇ ಎಲ್ಲಾ ಧರ್ಮದ ಜನರಿಗೂ ನ್ಯಾಯವನ್ನು, ಪರಿಹಾರವನ್ನೂ ಒದಗಿಸುತ್ತದೆ ಎಂಬುವುದರಲ್ಲಿ ಯಾವ ರೀತಿಯ ಸಂಶಯವಿಲ್ಲ. ●

ಕರುನಾಡ ಈ ಗಂಡುಕಲೆ

✍ **ದಿಶಾ ಜಿ.,** ತೃತೀಯ ಬಿ.ಕಾಂ.

ಮನುಷ್ಯ ಶ್ರಮಜೀವಿ ಮತ್ತು ಸಂಘಜೀವಿ. ತಾನು ಸಮಾಜದಲ್ಲಿ ಜೀವಿಸಬೇಕಾಗುವ ಕಾರಣಕ್ಕೆ ಕಸುಬುಗಳನ್ನು ಮಾಡಲೇ ಬೇಕಾಯಿತು. ದೈಹಿಕ ಮತ್ತು ಮಾನಸಿಕವಾಗಿ ಅವಿಶ್ರಾಂತನಾದ ಅವನು ಮನಸ್ಸಿಗೆ ಆಹ್ಲಾದವನ್ನು ಉಂಟು ಮಾಡುವ ಅವಶ್ಯಕತೆಗೆ ಮನರಂಜನೆಯ ಮಾಧ್ಯಮಗಳನ್ನು ಕಂಡುಕೊಂಡನು. ಹೀಗೆ ಮನರಂಜನಾ ಪ್ರಕಾರವಾಗಿ ಹಬ್ಬಿಕೊಂಡವು. ನಂತರ ಕಲಾಪ್ರಕಾರಗಳಾಗಿ ಬೆಳೆದುಬಂದವು. ಅದರಲ್ಲಿ ಯಕ್ಷಗಾನವು ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನಾದ್ಯಂತ ವ್ಯಾಪಿಸಿರುವ ಜಾನಪದ ಮತ್ತು ಶಾಸ್ತ್ರೀಯ ಅಂಶಗಳಿರುವ ಕಲಾ ಪ್ರಕಾರವಾಗಿದೆ. ಯಕ್ಷಗಾನ ಕಲೆಯಲ್ಲಿ ನೃತ್ಯ, ಸಂಗೀತ ಮತ್ತು ಆಹಾರ್ಯಗಳೆಂಬ ಭಾಗಗಳಿವೆ. ಯಕ್ಷಗಾನದ ಇತಿಹಾಸದ ಬಗೆಗೆ ನಿಖರವಾದ ದಾಖಲೆಗಳು ಸ್ಪಷ್ಟವಾಗಿರುವುದಿಲ್ಲ. ಅವುಗಳಲ್ಲಿ ತೆಂಕುತಿಟ್ಟು ಕಾಸರಗೋಡು ಮತ್ತು ದಕ್ಷಿಣಕನ್ನಡ ಜಿಲ್ಲೆ ಪ್ರಸ್ತುತ ಪಡಿಸಿರುವ ವಿಧಾನವಾದರೆ ಬಡಗುತಿಟ್ಟು ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಯ ಪ್ರಸ್ತುತಪಡಿಸಿರುವ ವಿಧಾನವಾಗಿದೆ.

ಈ ಯಕ್ಷಗಾನವು ಹಿಮ್ಮೇಳ ಮತ್ತು ಮುಮ್ಮೇಳಗಳ ಸಂಗಮ. ಹಿಮ್ಮೇಳದಲ್ಲಿ ಭಾಗವತರು, ಮದ್ದಲೆ, ಚಂಡೆ, ಶ್ರುತಿ ಇರುತ್ತದೆ. ಸಂಪೂರ್ಣ ಯಕ್ಷಗಾನದ ನಿರ್ದೇಶಕರು ಭಾಗವತರಾಗಿರುತ್ತಾರೆ.

ಯಕ್ಷಗಾನದಲ್ಲಿ ಕಥಾ ಪ್ರಾರಂಭಕ್ಕೆ ಮೊದಲು ನಡೆಯುವ ಕೆಲವು ಸಾಂಪ್ರದಾಯಿಕ ಕಲಾಪಗಳಿಗೆ ಪೂರ್ವರಂಗ ಎಂಬ ಹೆಸರಿದೆ. ಯಕ್ಷಗಾನವು ವೇಷಭೂಷಣದಲ್ಲಿ ತನ್ನದೇ ಆದ ಪರಂಪರೆಯನ್ನು ಹೊಂದಿದೆ. ಯಕ್ಷಗಾನದ ಪ್ರದರ್ಶನವಿರುವ ದಿನ ಸಂಜೆ ಸುಮಾರು 6 ಗಂಟೆ ಹೊತ್ತಿಗೆ ಚಂಡೆಯನ್ನು ಬಾರಿಸುವ ಕ್ರಮವಿದ್ದು ಅದನ್ನು ಕೇಳಿ ಹೊಡೆಯುವುದು ಎಂದು ಕರೆಯುತ್ತಾರೆ. ಯಕ್ಷಗಾನಕ್ಕೆ ಹಿಂದೆ ಕೇಳಿ ಎಂಬ ಹೆಸರೂ ಇತ್ತು. ಇದರಿಂದ ಹಳ್ಳಿಯಲ್ಲಿ ದೂರದವರೆಗೆ ಚಂಡೆಯ ಶಬ್ದ ಕೇಳುತ್ತಿತ್ತು. ಆದ್ದರಿಂದ ಬಯಲಾಟವಿದೆಯೆಂದು ಜನರಿಗೆ ಗೊತ್ತಾಗುತ್ತಿತ್ತು. ಆ ಕಾಲದಲ್ಲಿ ಈಗಿನ ಹಾಗೆ ವಿದ್ಯುನ್ಮಾನ ಉಪಕರಣಗಳು ಇರಲಿಲ್ಲ. ಈಗ ಈ ಪದ್ಧತಿಯನ್ನು ಅನುಸರಿಸುತ್ತಿಲ್ಲ.

ಭಕಾರೋ ಭಗವದ್ಭಕ್ತಃ ಗಕಾರೋ ಗರ್ವವರ್ಜಿತಃ
ವಕಾರೋ ವಾಕ್ಯಪಾರೀಚ ತಕಾರೋ ತಕಾರೋ ತತ್ತ್ವನಿರ್ಣಯೀ ॥

ಎಂದು ಭಾಗವತರ ಬಗ್ಗೆ ಹೇಳುತ್ತಾರೆ. ಯಕ್ಷಗಾನ ಪಾತ್ರಧಾರಿಗಳು ವೇಷ ಸಿದ್ಧತೆ ಮಾಡಿಕೊಳ್ಳುವ ಜಾಗಕ್ಕೆ ಚೌಕಿ ಎಂದು ಕರೆಯುತ್ತಾರೆ.

ಯಕ್ಷಗಾನ ಪ್ರದರ್ಶನದಲ್ಲಿ ಬಣ್ಣಗಾರಿಕೆ ಮತ್ತು ವೇಷಭೂಷಣಗಳು ಪ್ರಮುಖವಾದ ಸ್ಥಾನವನ್ನು ಪಡೆಯುತ್ತದೆ. ಪಾತ್ರಗಳ ವೈವಿಧ್ಯತೆಗೆ ಯಕ್ಷಗಾನ ಬಯಲಾಟ ವೇಷಗಳನ್ನು ಸಾಮಾನ್ಯವಾಗಿ ಗಂಡು ವೇಷ, ಹೆಣ್ಣು ವೇಷ, ರಾಕ್ಷಸ ವೇಷ, ವಿದೂಷಕ ಮತ್ತು ಉಪ ವೇಷಗಳೆಂದು ವರ್ಗೀಕರಿಸಲಾಗಿದೆ.

ಯಕ್ಷಗಾನದ ಕಥಾವಸ್ತು ಪೌರಾಣಿಕ ಕಥೆಗಳೇ ಆಗಿರುತ್ತದೆ. ಇಂದು ಸಾಮಾಜಿಕ ಕಥೆಗಳನ್ನಾಧರಿಸಿ ಪ್ರದರ್ಶನ ನೀಡಲಾಗುತ್ತದೆ. ಹೀಗೆ ನೃತ್ಯ, ಸಂಗೀತ, ಬಣ್ಣಗಾರಿಕೆಗಳಲ್ಲಿ ಸಂಪ್ರದಾಯಬದ್ಧವಾಗಿ ತನ್ನಲ್ಲಿಯೇ ಕೆಲವು ಬದಲಾವಣೆಗಳನ್ನು ತಂದುಕೊಂಡು ಯಕ್ಷಗಾನವು ದೇಶ ವಿದೇಶಗಳಲ್ಲಿ ವಿಖ್ಯಾತವಾಗಿದೆ.

ಉಗಮ:

ಯಕ್ಷಗಾನದ ಮೊದಲ ಉಲ್ಲೇಖ ಸಾರ್ಣದೇವನ ''ಸಂಗೀತ ರತ್ನಾಕರ''ದಲ್ಲಿ (1210 ಕ್ರಿ.ಶ.) ''ಜಕ್ಕ'' ಎಂದು ಆಗಿದ್ದು ಮುಂದೆ ''ಯಕ್ಕಲಗಾನ'' ಎಂದು ಕರೆಯಲ್ಪಟ್ಟಿತು ಎಂಬುದು ಒಂದು ಅಭಿಪ್ರಾಯ. ಗಂಧರ್ವ ಗ್ರಾಮ ಎಂಬ ಈಗ ನಶಿಸಿಹೋಗಿರುವ ಗಾನ ಪದ್ಧತಿಯಿಂದ ಗಾನ ಮತ್ತು ಸ್ವತಂತ್ರ ಜಾನಪದ ಶೈಲಿಗಳಿಂದ ನೃತ್ಯ ರೂಪುಗೊಂಡಿತೆಂದು ಶಿವರಾಮ ಕಾರಂತರ ''ಯಕ್ಷಗಾನ ಬಯಲಾಟ'' ಎಂಬ ಸಂಶೋಧನಾ ಪ್ರಬಂಧಗಳ ಸಂಕಲನದಲ್ಲಿ ಹೇಳಿದೆ. 1500ರಷ್ಟರಲ್ಲಿ ವ್ಯವಸ್ಥಿತವಾಗಿ ಯಕ್ಷಗಾನ ರೂಢಿಯಲ್ಲಿತ್ತು ಎಂಬುದು ಬಹಳ ವಿದ್ವಾಂಸರು ಒಪ್ಪುವ ವಿಚಾರ.

ಯಕ್ಷಗಾನದ ಪ್ರಮುಖ ಅಂಶಗಳು:

1. **ಪ್ರಸಂಗ:** ಯಕ್ಷಗಾನದಲ್ಲಿ ಯಾವುದಾದರೊಂದು

ಆಯ್ದುಕೊಂಡ ಕಥಾನಕವನ್ನು ಪ್ರಸಂಗ ಎಂದು ಕರೆಯುತ್ತಾರೆ. ಉದಾಹರಣೆಗೆ ಮಹಾಭಾರತದಲ್ಲಿ ಭೀಮ ಮತ್ತು ದುರ್ಯೋಧನರ ನಡುವೆ ನಡೆಯುವ ''ಗದಾಯುದ್ಧ ಪ್ರಸಂಗ'' ಎಂಬುದಾಗಿ ಕರೆಯುತ್ತಾರೆ. ಹೆಚ್ಚಾಗಿ ಪೌರಾಣಿಕ ಪ್ರಸಂಗಗಳನ್ನೇ ಆಯ್ದುಕೊಳ್ಳುವುದು ಯಕ್ಷಗಾನದ ವಾಡಿಕೆಯಾದರೂ ಪ್ರಸಂಗವು ಪೌರಾಣಿಕವೇ ಆಗಬೇಕು ಎಂಬ ನಿಯಮವೇನೂ ಇಲ್ಲ. ಇದು ಐತಿಹಾಸಿಕವೂ, ಸಾಮಾಜಿಕವೂ ಆಗಿರಬಹುದು.

2. **ಪಾತ್ರಧಾರಿಗಳು:** ಪ್ರಸಂಗದಲ್ಲಿ ಬರುವ ಕಥೆಯನ್ನು ಅಭಿನಯಿಸುವವರೇ ಪಾತ್ರಧಾರಿಗಳು. ಸ್ತ್ರೀ ಪಾತ್ರ, ಖಳ ನಟನ ಪಾತ್ರ, ಹಾಸ್ಯ ಕಲಾವಿದನ ಪಾತ್ರ, ನಾಯಕನ ಪಾತ್ರ – ಹೀಗೆ ಪ್ರಸಂಗಕ್ಕೆ ಅನುಗುಣವಾಗಿ ಪಾತ್ರಗಳನ್ನು ಆಯ್ಕೆ ಮಾಡಲಾಗುತ್ತದೆ. ನೃತ್ಯ, ಅಭಿನಯ ಹಾಗೂ ಮಾತುಗಾರಿಕೆಗಳೊಂದಿಗೆ ಕಥೆಯನ್ನು ಪ್ರೇಕ್ಷಕರಿಗೆ ತಲುಪಿಸುವ ಮಹತ್ತರ ಜವಾಬ್ದಾರಿ ಪಾತ್ರಧಾರಿಗಳ ಮೇಲಿರುತ್ತದೆ.

3. **ವೇಷಭೂಷಣ:** ಯಕ್ಷಗಾನದ ಪ್ರಮುಖ ಪ್ರಭೇದವಾದ ಬಯಲಾಟಗಳಲ್ಲಿ ವೇಷಭೂಷಣಗಳು ಪ್ರಮುಖವಾದದ್ದು. ಪಾತ್ರಗಳಿಗೆ ತಕ್ಕಂತೆ ವೇಷಭೂಷಣಗಳಿರುತ್ತವೆ. ಉದಾಹರಣೆಗೆ ಪ್ರಮುಖ ಖಳನಟ ಮತ್ತು ರಾಜ (ನಾಯಕ) ನ ಪಾತ್ರಕ್ಕೆ ಬಳಸುವ ಕಿರೀಟವು ಸಾಮಾನ್ಯ ಪಾತ್ರಧಾರಿ ಬಳಸುವ ಕಿರೀಟಗಳಿಗಿಂತ ವಿಭಿನ್ನ ವಿನ್ಯಾಸದ್ದಾಗಿರುತ್ತದೆ. ಹಾಗೆಯೇ ಸ್ತ್ರೀ ಪಾತ್ರಗಳಿಗೆ ಬಳಸುವ ಕಿರೀಟವು ತುಂಬಾ ಚಿಕ್ಕದಾಗಿರುತ್ತದೆ. ಅಲ್ಲದೇ ತೆಂಕುತಿಟ್ಟು ಶೈಲಿಯ ಯಕ್ಷಗಾನದಲ್ಲಿ ಉಪಯೋಗಿಸುವ ವೇಷಭೂಷಣಗಳು ಬಡಗುತಿಟ್ಟಿನಲ್ಲಿ ಉಪಯೋಗಿಸುವ ವೇಷಭೂಷಣಗಳಿಗಿಂತ ಭಿನ್ನವಾಗಿರುತ್ತವೆ.

4. **ಭಾಗವತಿಕೆ:** ಯಕ್ಷಗಾನದ ಜೀವಾಳವೇ ಭಾಗವತಿಕೆ ಅಥವಾ ಹಾಡುಗಾರಿಕೆ. ಅವರು ಈ ರಂಗ ಪ್ರಕಾರದ ನಿರ್ದೇಶಕರಿದ್ದಂತೆ. ಇಲ್ಲಿ ಪಾತ್ರಧಾರಿಗಳು ಅಭಿನಯಿಸುವ ಕಥಾನಕವನ್ನು ಕಾವ್ಯ ರೂಪದಲ್ಲಿ ಹಾಡಲಾಗುತ್ತದೆ. ಹೀಗೆ ಹಾಡುವವರನ್ನು ಭಾಗವತರೆಂದು, ಭಾಗವತರು ಹಾಡುವ ಪದಗಳಿಗೆ ತಕ್ಕಂತೆ ಪಾತ್ರಧಾರಿಗಳು ನೃತ್ಯದ ಮೂಲಕ ಅಭಿನಯಿಸುತ್ತಾರೆ. ನೃತ್ಯದೊಂದಿಗೆ ಹಾಡಿನಲ್ಲಿ ಬರುವ ಕಥಾನಕದ ಸಂದರ್ಭಕ್ಕನುಗುಣವಾಗಿ ಭಾವಾಭಿನಯವೂ ಸಹ ಅತ್ಯಂತ ಅಗತ್ಯವಾದುದು.

5. **ಮಾತುಗಾರಿಕೆ:** ಹಾಡುವುದನ್ನು ಪೂರ್ಣಗೊಳಿಸಿದ ಕೂಡಲೇ ಆ ಹಾಡಿನ ಸಾರಾಂಶವನ್ನು ಪಾತ್ರಧಾರಿಗಳು ಚರ್ಚಿಸುತ್ತಾರೆ. ಹಾಡಿನಲ್ಲಿ ಕಥಾನಕದ ಯಾವ ಭಾಗವನ್ನು ಪ್ರಸ್ತುತ ಪಡಿಸಲಾಗುತ್ತದೋ ಅದೇ ಭಾಗದ ಅರ್ಥವನ್ನು ಜನಸಾಮಾನ್ಯರೆಲ್ಲರಿಗೂ ಸ್ಪಷ್ಟವಾಗುವಂತೆ ಆಡುಮಾತಿನಲ್ಲಿ ಪಾತ್ರಧಾರಿಗಳು ಸಂಭಾಷಿಸುತ್ತಾರೆ.

ಯಕ್ಷಗಾನದ ಪ್ರಭೇದಗಳು:

- ಯಕ್ಷಗಾನದಲ್ಲಿ ಅನೇಕ ರೀತಿಯ ಪ್ರಭೇದಗಳಿದ್ದು ಅವುಗಳಲ್ಲಿ ಯಕ್ಷಗಾನ ಬಯಲಾಟವು ಅತ್ಯಂತ ಜನಪ್ರಿಯವಾದುದು. ಬಯಲಾಟವೆಂದರೆ ವೇಷಭೂಷಣಗಳೊಂದಿಗೆ ರಂಗಭೂಮಿಯಲ್ಲಿ ಆಡುವ ಯಕ್ಷಗಾನ ಪ್ರಭೇದ. ಕುಣಿತ ಎಂಬ ಹೆಸರು ಇದಕ್ಕಿದೆ. ಮೊದಮೊದಲು ಹಬ್ಬ ಹರಿದಿನಗಳಂದು ಊರಿನ ಬಯಲಿನಲ್ಲಿ ರಾತ್ರಿಯಿಡೀ ಈ 'ಬಯಲಾಟ' ಎಂಬ ಹೆಸರು ರೂಢಿಯಲ್ಲಿದೆ. ಜನರು ಇದನ್ನು ಸರಳವಾಗಿ 'ಆಟ' ಎಂದೂ ಕರೆಯುತ್ತಾರೆ.
- ಆದರೆ ಈಗೀಗ ರಾತ್ರಿಯಿಡೀ ನಡೆಯುವ ಬಯಲಾಟದೊಂದಿಗೆ 2–3 ಘಂಟೆಗಳ ಕಾಲ ನಡೆಯುವ ಯಕ್ಷಗಾನವೂ ಬಳಕೆಯಲ್ಲಿದೆ. ಬಯಲಾಟದಲ್ಲಿ ವೇಷಭೂಷಣ, ರಂಗಸ್ಥಳ, ಭಾಗವತಿಕೆ, ಅಭಿನಯ, ಮಾತುಗಾರಿಕೆ, ನೃತ್ಯ – ಹೀಗೆ ಸಾಂಪ್ರದಾಯಿಕ ಯಕ್ಷಗಾನದ ಎಲ್ಲ ಮಜಲುಗಳನ್ನೂ ಕಾಣಬಹುದು.
- ಉತ್ತರ ಕರ್ನಾಟಕದಲ್ಲಿ ಬಹು ಜನಪ್ರಿಯವಾಗಿರುವ ''ಶ್ರೀ ಕೃಷ್ಣ ಪಾರಿಜಾತ'' ಮೂಲಪಾಯದಲ್ಲಿ ಗಮನಾರ್ಹ. ಮಲೆನಾಡು ಮತ್ತು ಕರಾವಳಿಯಲ್ಲಿ ಪ್ರಚಲಿತವಿರುವುದು ಪಡುವಲಪಾಯ. ಪಡುವಲಪಾಯದಲ್ಲಿ 3 ವಿಭಾಗಗಳಿವೆ. ಅವು ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಾಬಡಗು.
- ಉತ್ತರಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಉತ್ತರದ ತಿಟ್ಟು ಶೈಲಿಯ ಬಯಲಾಟಗಳು ಕಂಡುಬಂದರೆ ಉಡುಪಿಯಲ್ಲಿ ಬಡಗುತಿಟ್ಟು ದಕ್ಷಿಣಕನ್ನಡ ಹಾಗೂ ಕಾಸರಗೋಡು ಜಿಲ್ಲೆಗಳಲ್ಲಿ ತೆಂಕುತಿಟ್ಟು ಶೈಲಿಯ ಯಕ್ಷಗಾನವನ್ನು ಕಾಣಬಹುದು. ವೇಷಭೂಷಣಗಳ ವಿನ್ಯಾಸ, ನೃತ್ಯದ ಶೈಲಿ, ಭಾಗವತಿಕೆ ಮತ್ತು ಹಿಮ್ಮೇಳಗಳಲ್ಲಿ ಕಂಡುಬರುವ ಕೆಲವು ವ್ಯತ್ಯಾಸಗಳ ಆಧಾರದ ಮೇಲೆ ಈ ವಿಂಗಡಣೆಯನ್ನು ಮಾಡಲಾಗಿದೆಯೇ ಹೊರತು ಯಕ್ಷಗಾನದ ಮೂಲತತ್ವ, ಆಶಯಗಳು 3 ಶೈಲಿಗಳಲ್ಲಿಯೂ ಒಂದೇ ಆಗಿರುತ್ತದೆ.

●

ಗಾಂಧೀಜಿಯ ಉಡುಪಿ ಭೇಟಿಗೆ 85 ವರ್ಷಗಳು

✍ **ಅಭಿಷೇಕ್ ತಲ್ವಾಲ್ಕರ್**, ತೃತೀಯ ಬಿ.ಎ.

ಮಹಾತ್ಮ ಗಾಂಧೀಜಿ ಎಂಬ ಹೆಸರು ಎಲ್ಲಾ ತಲೆಮಾರುಗಳ ಬಹಳಷ್ಟು ಜನರಿಗೆ ಚಿರಪರಿಚಿತವಾದದ್ದು. ಅವರು ಒಂದು ಚಿತ್ರವಾಗಿ ನೋಟುಗಳ ಮೇಲಿರುವುದಕ್ಕಿಂತಲೂ ಮಿಗಿಲಾಗಿ ಸತ್ಯ, ಸರಳತೆ, ಶಾಂತಿ ಮತ್ತು ಅಹಿಂಸೆಯ ಸಂಕೇತವಾಗಿ ವಿಶ್ವದಾದ್ಯಂತ ಗೌರವಿಸಲ್ಪಡುವ ಮಹಾಚೇತನರಾಗಿದ್ದಾರೆ. ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನ ನಮಗಂತೂ ದಿನನಿತ್ಯವೂ ಒಂದಲ್ಲಾ ಒಂದು ರೀತಿಯಲ್ಲಿ ಗಾಂಧೀಜಿಯ ಸ್ಮರಣೆಯೇ. ನಮ್ಮ ಕಾಲೇಜಿನಲ್ಲಿ ಪ್ರಸಿದ್ಧವಾದ ಗಾಂಧಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವೂ ಇರುವುದು ಇದಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಿಸಿದ್ದಿರಬಹುದು ಅಂತ ಅನ್ನಿಸುತ್ತದೆ. ನಾನಂತೂ ಗಾಂಧೀಜಿ ಬಗ್ಗೆ ಹೆಚ್ಚು ತಿಳಿದುಕೊಂಡು ಪ್ರಶ್ನಿಸುವ ಉತ್ಸಾಹದಲ್ಲಿ ನಮ್ಮ ಗ್ರಂಥಾಲಯದ ಮಹಡಿಯಲ್ಲಿರುವ ಗಾಂಧಿ ಅಧ್ಯಯನ ಕೇಂದ್ರದ ಸರ್ಟಿಫಿಕೇಟ್ ತರಗತಿಗಳಿಗೆ ಸೇರಿದ್ದೆ. ಈ ವರ್ಷ ನಾಡಿನಾದ್ಯಂತ ಗಾಂಧೀಜಿಯ 150ನೇ ಜಯಂತಿಯ ವರ್ಷಾಚರಣೆಯ ಸಂಭ್ರಮದ ಜೊತೆಗೆ ಅವರ ಸ್ಮಾರಕವಾಗಿ ರೂಪುಗೊಂಡ ನಮ್ಮ ಕಾಲೇಜಿಗೂ 70ರ ಸಂಭ್ರಮವಿದ್ದ ಕಾರಣ ಪಾಠಗಳು ಸಾಕ್ಷ್ಯಚಿತ್ರ ವೀಕ್ಷಣೆ, ಓದು ಮತ್ತು ಚರ್ಚೆಗಳ ಮೂಲಕ ಹೊಸತನದಿಂದ ಮೂಡಿಬಂದವು. ಗಾಂಧೀಜಿ ಕರಾವಳಿಯ ಈ ಭಾಗಕ್ಕೆ ಭೇಟಿ ನೀಡಿದ್ದ ವಿವರಗಳನ್ನು ತಮ್ಮ ಪಾಠದಲ್ಲಿ ವಿನೀತ್ ರಾವ್ ಸರ್ ಹೇಳುತ್ತಾ, ''ಈ ಫೆಬ್ರವರಿ 25ರಂದು ಗಾಂಧೀಜಿಯ ಉಡುಪಿ ಭೇಟಿಗೆ ಎಂಬತ್ತೈದು ವರ್ಷಗಳು...'' ಎಂದಾಗ ನಾನು ಆ ಬಗ್ಗೆ ಹೆಚ್ಚು ಕುತೂಹಲದಿಂದ ಮಾಡಿಕೊಂಡ ಟಿಪ್ಪಣಿಯು ಇಲ್ಲಿದೆ.

ಭಾರತಕ್ಕೆ ದೊರಕುವ ಸ್ವಾತಂತ್ರ್ಯವು ಕೆಲವೇ ಕೆಲವು ಪ್ರಬಲ ಜನರಿಗೆ ಸೀಮಿತವಾದ ರಾಜಕೀಯ ಮತ್ತು ಭೌಗೋಳಿಕ ಆಡಳಿತದ ಸವಲತ್ತಾಗದೆ ಸಮಾನತೆಯೊಂದಿಗೆ ಸರ್ವರನ್ನೂ ಒಳಗೊಂಡಂತಹ ಅರ್ಥಪೂರ್ಣವಾದ ಮಾನವೀಯ ಮೌಲ್ಯಯುತವಾದ ಪೂರ್ಣ ಸ್ವರಾಜ್ಯವಾಗಿರಬೇಕೆಂಬುದು ಗಾಂಧೀಜಿಯ ಕನಸಾಗಿತ್ತು. ಅಂತಹ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯಯುಕ್ತವಾದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಮುಖ್ಯವಾಗಿ ಅಸ್ಪೃಶ್ಯತೆಯೇ ಮೊದಲಾದ ಸಾಮಾಜಿಕ ಪಿಡುಗುಗಳ ನಿವಾರಣೋಪಾಯಗಳ ಬಗ್ಗೆ ಜನರಲ್ಲಿ ಅರಿವನ್ನು ಮೂಡಿಸಲು ಹಾಗೂ ಸವರ್ಣೀಯರಲ್ಲಿ ಶೋಷಿತರ ಬಗ್ಗೆ ಸದ್ಭಾವನೆಯನ್ನು

ಉದ್ಯಾವರ ಹೊಳೆಯನ್ನು ದಾಟಿ ಜಂಗಲ್‌ನಿಂದ ಗಾಂಧೀಜಿ ಇಳಿಯುತ್ತಿರುವ ದೃಶ್ಯ

ಮೂಡಿಸಲು ಅವರು ದೇಶವ್ಯಾಪಿ ಸಂಚಾರವನ್ನು ಕೈಗೊಂಡಿದ್ದರು. 1933ರ ನವೆಂಬರ್ ತಿಂಗಳಿನಲ್ಲಿ ವಾರ್ಧಾದಿಂದ ಆರಂಭವಾದ ಈ ಯಾತ್ರೆಯು ''ಹರಿಜನ್ ಯಾತ್ರೆ'' ಎಂದು ಪ್ರಸಿದ್ಧವಾಯಿತು. ಈ ಯಾತ್ರೆಯ ಭಾಗವಾಗಿಯೇ ಅವರು 1934ರ ಫೆಬ್ರವರಿ 24ರಂದು ಮಡಿಕೇರಿಯಿಂದ ಸಂಪಾಜೆ ಮಾರ್ಗವಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿದ್ದರು. ಆ ದಿನ ಸಂಪಾಜೆ, ಸುಳ್ಯ, ಪುತ್ತೂರು, ಬಂಟ್ವಾಳ, ಮಂಗಳೂರುಗಳಲ್ಲಿ ಗಾಂಧೀಜಿ ಭಾಷಣದ ಮೂಲಕ ಸಂದೇಶವನ್ನು ನೀಡಿದ್ದರು. ಆ ರಾತ್ರಿ ಮಂಗಳೂರಿನಲ್ಲಿ ಉಳಿದುಕೊಂಡು ಮರುದಿನ 25ರಂದು ಸಾರ್ವಜನಿಕ ಕೃಷ್ಣ ಮಂದಿರಕ್ಕೆ ಶಿಲಾನ್ಯಾಸ ಮಾಡಿ ಗುರುಪುರ ಕಟೀಲು ಮಾರ್ಗವಾಗಿ ಮುಲ್ಕಿಯ ಸಭೆಯಲ್ಲಿ ಭಾಷಣವನ್ನಿತ್ತು ಉಡುಪಿ ಕಡೆಗೆ ಪ್ರಯಾಣಿಸಿದ್ದರು. ಮಧ್ಯಾಹ್ನದ ಬಳಿಕ ಉಡುಪಿಯಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ್ದ ಗಾಂಧೀಜಿ, ಸಂಜೆ ಕುಂದಾಪುರದ

ಕಡೆಗೆ ಪ್ರಯಾಣಿಸಿ ರಾತ್ರಿ ಅಲ್ಲಿಯೂ ಭಾಷಣವನ್ನು ಮಾಡಿದ್ದರು. ಆ ರಾತ್ರಿ ಮತ್ತು ಮರುದಿನ 26ರಂದು ಅಲ್ಲಿಯೇ ವಾಸ್ತವ್ಯವಿದ್ದು, 27ರ ಬೆಳಗ್ಗೆ 'ದಯಾವತೀ' ಎಂಬ ಹಡಗಿನಲ್ಲಿ ಕಾರವಾರದ ಕಡೆಗೆ ಪ್ರಯಾಣಿಸಿದ್ದರು. ಈ ಎಲ್ಲಾ ಸ್ಥಳಗಳಲ್ಲಿ ಹಾಗೂ ಮಾರ್ಗದಲ್ಲಿ ಸಿಗುವ ಊರುಗಳಲ್ಲಿ ಆ ಪ್ರದೇಶದ ಜನರು ಬಹಳ ಸಂಖ್ಯೆಯಲ್ಲಿ ಸೇರಿ ಅಲ್ಲಲ್ಲಿ ಗಾಂಧೀಜಿಯವರಿಗೆ ನಿಧಿ, ಹಣ ಮತ್ತು ಬೆಲೆಬಾಳುವ ವಸ್ತುಗಳನ್ನು ಅರ್ಪಿಸಿದ್ದರಂತೆ.

ಉಡುಪಿಯಲ್ಲಿ ಗಾಂಧೀಜಿ

1934ರ ಫೆಬ್ರವರಿ 25ನೇ ತಾರೀಕು, ಭಾನುವಾರದಂದು ಮಧ್ಯಾಹ್ನ ಮೂರೂವರೆ ಗಂಟೆಗೆ ಸರಿಯಾಗಿ ಕಾಪು, ಕಟಪಾಡಿ, ಉದ್ಯಾವರ ಮಾರ್ಗವಾಗಿ ಉಡುಪಿಯನ್ನು ತಲುಪಿದ್ದರು. ಆ ಕಾಲದಲ್ಲಿ ಮುಲ್ಕಿಯಿಂದ ಉಡುಪಿಗೆ ಬರುವ ಮಾರ್ಗದಲ್ಲಿ ಸಿಗುವ ಹೊಳೆಗಳಿಗೆ ಸೇತುವೆಗಳಿಲ್ಲದಿದ್ದ ಕಾರಣ ಗಾಂಧೀಜಿ ಅವನ್ನೆಲ್ಲ ಜಂಗಲ್ ಮೂಲಕ ದಾಟಿದ್ದರಂತೆ. ಹಲವು ದೋಣಿಗಳನ್ನು ಒಟ್ಟು ಸೇರಿಸಿ ಮೇಲೆ ಬಲವಾದ ಹಲಗೆಗಳನ್ನು ಹಾಕಿ ನಿರ್ಮಿಸುವ ವಾಹಕಕ್ಕೆ ಜಂಗಲ್ ಎಂದು ಕರೆಯುತ್ತಾರೆ. ಉಡುಪಿಗೆ ಬರುವಾಗ ಉದ್ಯಾವರ ಹೊಳೆಯನ್ನು ದಾಟಿ ಜಂಗಲ್‌ನಿಂದ ಗಾಂಧೀಜಿ ಇಳಿಯುತ್ತಿರುವ ದೃಶ್ಯವು ಐಡಿಯಲ್ ಸ್ಟುಡಿಯೋದ ದಿ. ನರಹರಿ ಕಾಮತ್ ಅವರ ಕ್ಯಾಮರಾದಲ್ಲಿ ಸೆರೆಯಾಗಿ ಚಿರಸ್ಥಾಯಿಯಾಗಿದೆ. ಗಾಂಧೀಜಿ ಉಡುಪಿ ಪ್ರವೇಶಿಸುವಾಗ ಉರಿ ಬಿಸಿಲಿದ್ದರೂ ಜನರು ಯಾವುದನ್ನೂ ಲೆಕ್ಕಿಸದೇ ಮಹಾತ್ಮರನ್ನು ಕಣ್ತುಂಬಿಸಿಕೊಳ್ಳುವ ಆಸೆಯಿಂದ ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದರು ಎಂಬುದನ್ನು ಆ ಕಾಲದ ಪ್ರತ್ಯಕ್ಷದರ್ಶಿಗಳು ದಾಖಲಿಸಿದ್ದಾರೆ. ಗಾಂಧೀಜಿಯವರನ್ನು ಊರಿನ ಮಹಾಜನತೆಯ ಪರವಾಗಿ ಹಾಜಿ ಅಬ್ದುಲ್ಲಾ ಸಾಹೇಬರು ಹಾಗೂ ಇತರ ಹಿರಿಯರು ಸ್ವಾಗತಿಸಿದ್ದರು. ಮೊದಲಿಗೆ ಕಾಡಬೆಟ್ಟು ಶ್ರೀನಿವಾಸ ಪೈ ಅವರ ಖಾದಿ ಭಂಡಾರವನ್ನು ಉದ್ಘಾಟಿಸಿ ಬಳಿಕ ಅಜ್ಜರಕಾಡು ಮೈದಾನದಲ್ಲಿ ಸುಮಾರು ಐದಾರು ಸಾವಿರ ಜನರನ್ನು ಉದ್ದೇಶಿಸಿ ಭಾಷಣವನ್ನು ಮಾಡಿ "ಸ್ಪೃಶ್ಯ-ಅಸ್ಪೃಶ್ಯ, ಮೇಲು-ಕೀಳೆಂಬ ಜಾತಿಯ ಭಾವನೆಗಳನ್ನು ನಮ್ಮ ಹೃದಯ ಹಾಗೂ ಮನಸ್ಸಿನಿಂದ ತೆಗೆಯುವ ಈ ಚಳುವಳಿಯು ಆತ್ಮಶುದ್ಧಿಯ ಚಳುವಳಿ. ಈಗ ಅಸ್ಪೃಶ್ಯರಿಗೆ ಪ್ರವೇಶವಿರದ ನಿಮ್ಮ ದೇವಾಲಯದಲ್ಲಿ ಎಲ್ಲರಿಗೂ ಪ್ರವೇಶ ದೊರೆಯುವಂತಹ ಪ್ರಜಾಭಿಪ್ರಾಯವು ಅತ್ಯಂತ ಸೌಮ್ಯ ಮಾರ್ಗದಿಂದ ರೂಪುಗೊಳ್ಳಲಿ. ಅಸ್ಪೃಶ್ಯರಿಗೂ ದೇವಾಲಯ ಪ್ರವೇಶ ಸಾಧ್ಯವಾಗಿ ಅಸ್ಪೃಶ್ಯತಾ ನಿವಾರಣೆಯಲ್ಲಿ ಉಡುಪಿ ರಾಜ್ಯಕ್ಕೆ ಮೇಲ್ಪಂಕ್ತಿಯಾಗಲಿ" ಎಂದು ಸಂದೇಶವನ್ನು ನೀಡಿದ್ದರು. ಆ ಕಾಲದಲ್ಲಿ ಮೈಕ್ ಇರದಿದ್ದರೂ, ಗಾಂಧೀಜಿಯು ಸ್ವಲ್ಪ ಮಾತಾಡಿದೊಡನೆಯೇ ಆ ಭಾಗವನ್ನು ವೇದಿಕೆಯ ಮೇಲೆ ಸ್ಥಳೀಯರೊಬ್ಬರು ಭಾಷಾಂತರ ಮಾಡಿ ಹೇಳುತ್ತಿದ್ದರಂತೆ. ಪ್ರತಿ ಹತ್ತನೇ ಸಾಲಿಗೊಬ್ಬರಂತೆ ಮೊದಲಿನಿಂದ ಕೊನೆಯವರೆಗೆ ಇದ್ದ ಸ್ವಯಂಸೇವಕರು ಅದನ್ನು ಒಬ್ಬರ ನಂತರ ಒಬ್ಬರು, ಹಿಂದಿನವರು ಹೇಳಿದ್ದನ್ನು ಕೇಳಿಸಿಕೊಂಡು ಕೂಗಿ ಹೇಳುತ್ತಿದ್ದರಂತೆ!

ಸಾರ್ವಜನಿಕ ಸಭೆಯಲ್ಲಿ ಒಂಬತ್ತರ ಹರಯದ ಬಾಲಕಿ ನಿರೂಪಮಾ ಹಿಂದಿ ಪ್ರೇಮಿ ಮಂಡಳಿಯ ಮಾನಪತ್ರವನ್ನು ವಾಚಿಸಿ ಅವರಿಗೆ ಅರ್ಪಿಸಿದ್ದಳಂತೆ. ಆ ಸಮಯದಲ್ಲೇ ಆಕೆ ತನ್ನ ಚಿನ್ನದ ಕೈಬಳೆಗಳನ್ನು ಅರ್ಪಿಸಿದ್ದಳು. ಗಾಂಧೀಜಿ ತುಂಟ ನಗುವನ್ನು ಬೀರುತ್ತಾ ಆಕೆಯ ಸರ ಮತ್ತು ಕಿವಿಯೋಲೆಗಳನ್ನೂ ಕೇಳಿದಾಗ ಮರುಮಾತಿಲ್ಲದೆ ತೆಗೆದು ಕೊಟ್ಟಿದ್ದಳು! ಮುಂದೆ ಇಷ್ಟು ಒಡವೆಗಳನ್ನು ಧರಿಸುವುದಿಲ್ಲ ಎಂಬ ಮಾತನ್ನು ಬಾಲಕಿಯಿಂದ ಪಡೆದು ಚಿನ್ನದ ಸರ ಹಾಗೂ ಕಿವಿಯೋಲೆಗಳನ್ನು ಗಾಂಧೀಜಿ ಮರಳಿಸಿದ್ದರು. ಅಲ್ಲಿ ಗಾಂಧೀಜಿಗೆ ಉಡುಪಿಯ ಜನತೆಯ ಪರವಾಗಿ ನಿಧಿಯನ್ನು ಅರ್ಪಿಸಿದ್ದರು. ಹಲವು ಜನರು ಅರ್ಪಿಸಿದ್ದ ವಸ್ತುಗಳನ್ನು ಗಾಂಧೀಜಿ ಸ್ವತಃ ಹರಾಜು ಹಾಕಿದಾಗಲೂ ಊರ ಜನರು ದೊಡ್ಡ ಮೊತ್ತಗಳನ್ನು ನೀಡಿದ್ದರಂತೆ! ಆಗ ಜನರು ಬಿಹಾರದ ಭೂಕಂಪ ಸಂತ್ರಸ್ತರಿಗಾಗಿಯೂ ನಿಧಿಯನ್ನು ಅರ್ಪಿಸಿದ್ದು ಕಂಡುಬರುತ್ತದೆ. ಬಳಿಕ ಗಾಂಧೀಜಿ ಅಲ್ಲೇ ಬಳಿಯ ರಾಮ ನಿವಾಸದಲ್ಲಿ ಫಲಾಹಾರ ಸ್ವೀಕರಿಸಿ ಸಂಜೆ 5.30ಕ್ಕೆ ಕುಂದಾಪುರದ ಕಡೆಗೆ ಪ್ರಯಾಣಿಸಿದ್ದರು. ಉಡುಪಿಯ ಸರಹದ್ದನ್ನು ದಾಟುತ್ತಿದ್ದಂತೆಯೇ ಗಾಂಧೀಜಿ ಇಲ್ಲಿನವರಿಗೆ ನೀಡಿದ್ದ ಸಂದೇಶವು "ಯಾವ ಬೆಲೆಯನ್ನು ತೆತ್ತಾದರೂ ಸತ್ಯಕ್ಕಾಗಿ ಸದಾ ಎದ್ದು ನಿಲ್ಲಿ" ಎಂಬುದಾಗಿತ್ತು. ಇದು ಉಡುಪಿಗೆ ಗಾಂಧೀಜಿಯ ಮೊದಲ ಹಾಗೂ ಕೊನೆಯ ಭೇಟಿ ಎಂಬುವುದು ವಿಶೇಷವಾಗಿದೆ.

ಇದೇ ಫೆಬ್ರವರಿ ತಿಂಗಳಲ್ಲಿ ಗಾಂಧೀಜಿಯ ಭೇಟಿ ಬಗ್ಗೆ ಚಿತ್ರಗಳನ್ನು ನೋಡುತ್ತಾ ಕುಳಿತ್ತಿದ್ದಾಗ ಎಂಬತ್ತೈದು ವರ್ಷಗಳ ಹಿಂದಿನ ಉಡುಪಿಯ ಚಿತ್ರಣವು ಮನಸ್ಸಿನಲ್ಲಿ ರೂಪುಗೊಂಡಿತ್ತು. ಗಾಂಧೀಜಿಯ ಭೇಟಿಯು 85 ವರ್ಷಗಳ ನೆನಪಿಗೋಸ್ಕರ ಅಂಚೆ ಇಲಾಖೆಯು ನಮ್ಮ ಕಾಲೇಜಿನ ಸಹಕಾರದೊಂದಿಗೆ, ಮಾಹೆ ವಿಶ್ವವಿದ್ಯಾಲಯದ ಪ್ರಾಯೋಜಕತ್ವದಲ್ಲಿ 25-02-2019ರಂದು ವಿಶೇಷ ಅಂಚೆ ಲಕೋಟೆಯನ್ನು ಹೊರತಂದಿರುವುದೂ ಎಂ.ಜಿ.ಎಂ. ವಿದ್ಯಾರ್ಥಿಯಾದ ನನಗೆ ಸ್ಮರಣೀಯ ಅನುಭವವಾಗಿದೆ.

●

ಮಹಾತ್ಮ ಗಾಂಧೀಜಿ ನನ್ನ ಪ್ರೇರಣೆ

✍ **ಎಚ್. ಶ್ರಾವ್ಯ,** ದ್ವಿತೀಯ ಎಮ್.ಎಸ್ಸಿ.

''ನಿನ್ನನ್ನು ನೀನು ಕಂಡುಕೊಳ್ಳಬೇಕಾದರೆ
ಇತರರ ಸೇವೆಯಲ್ಲಿ ನಿನ್ನನ್ನು ಕಳೆದುಕೊಳ್ಳು.''
– ಮಹಾತ್ಮ ಗಾಂಧೀಜಿ

ಈ ಒಂದೇ ವಾಕ್ಯ ಸಾಕು ಅವರ ಪ್ರೇರಣೆಯು ನನ್ನ ನರ ನಾಡಿಗಳಲ್ಲಿ ಸೇರಲು. ಮಾನವನಾಗಿ ಹುಟ್ಟುವುದೇ ಒಂದು ಪುಣ್ಯ. ಹುಟ್ಟು ಸಾವಿನ ನಡುವೆ ಬರುವ ಅಂತರದಲ್ಲಿ ನಾವೇನು ಸಾಧಿಸುತ್ತೇವೋ ಅದುವೇ ನಮ್ಮ ಆತ್ಮಸಾಕ್ಷಿಯಾಗಿ ತೃಪ್ತಿಯನ್ನು ಕೊಡುತ್ತದೆ. ಆದರೆ ಆ ಸಾಧನೆಯೂ ಧನಾತ್ಮಕ ತತ್ತ್ವಗಳನ್ನು, ನಿಸ್ವಾರ್ಥ ಮನೋಭಾವನೆಯನ್ನೂ ಅಂತರ್ಗತವಾಗಿಸಿಕೊಂಡಿರಬೇಕು. 'ಜನ ಸೇವೆಯೇ ಜನಾರ್ದನ ಸೇವೆ' ಎಂಬ ಮಾತಿದೆ. ಆ ವ್ಯಾಖಾನದಲ್ಲೂ ಇತರರ ಸೇವೆಯನ್ನು ಮಾಡಿದರೆ ಸಾಕ್ಷಾತ್ ಭಗವಂತನ ಸೇವೆಯನ್ನು ಮಾಡಿದಂತೆ ಎಂದು ಗಾಂಧೀಜಿಯವರು ಹೇಳುತ್ತಾರೆ. ಸತ್ಯ, ಅಹಿಂಸೆ, ರಾಮರಾಜ್ಯ ಮತ್ತು ಶ್ರಮ ಸಂಸ್ಕೃತಿಯಂತಹ ಪದಗಳೇ ಇಂದಿನ ಜಮಾನದಲ್ಲಿ ಮಂದವಾಗಿ ಮಂಕಾಗಿದೆ. ಗಾಂಧೀ ಜಯಂತಿಯನ್ನು ಆಚರಿಸುತ್ತಿರುವ ನಮಗೆ ಆ ಒಂದು ದಿನ ಮಾತ್ರ ಗಾಂಧೀ ಚಿತ್ರವನ್ನು ನೋಡುವಂತಾಗಿದೆ. ಆದರೆ ಅವರ ಚಿಂತನೆಗಳು, ತತ್ವಗಳು ಮತ್ತು ಅವರ ವಾದಗಳನ್ನು ಪರಿಶೀಲಿಸಿದಾಗ ಅವರ ವ್ಯಕ್ತಿತ್ವದ ಅರಿವು ನಮಗಾಗುತ್ತದೆ. ಅದರಿಂದಲಾದರೂ ಇಂದಿನ ಮಾನವನಲ್ಲಿ ಬದಲಾವಣೆಗಳು ಆಗಬಹುದೇನೋ ಎಂಬ ಕಿರು ನಂಬಿಕೆ ಖಂಡಿತ ಇದೆ.

ಇಂದು ಬರಾಕ್ ಒಬಾಮನಂತಹ ಪರ ರಾಷ್ಟ್ರೀಯ ವ್ಯಕ್ತಿಯೊಬ್ಬರು 'ಗಾಂಧೀಜಿಯವರೇ ನನಗೆ ಪ್ರೇರಣೆ' ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಭಾರತೀಯರು ಒಬಾಮರವರನ್ನು ಪಾಲಿಸುತ್ತಾರೆ. 'ಅಂಗೈಯಲ್ಲಿನ ತುಪ್ಪ ತೊರೆದು ಬೆಣ್ಣೆಗಾಗಿ ಬೇರೆ ಕಡೆ ಹುಡುಕಾಟ'ದ ಪರಿ ಇಂದಾಗಿದೆ. ಇದರಿಂದ ಆ ಧೀಮಂತ ನಾಯಕ ಮಹಾತ್ಮ ಗಾಂಧೀಜಿಯವರಲ್ಲಿ ಎಂತಹ ಆದರ್ಶಗಳು ಅಡಕವಾಗಿದ್ದವು ಎಂಬ ಪ್ರಶ್ನೆ ನಿಜವಾದ ದೇಶಭಕ್ತರಿಗೆ ಮಾತ್ರ. ಭಾರತಮಾತೆಯ ಪುಣ್ಯದ ಫಲವೋ ತಿಳಿದಿಲ್ಲ, ಆದರೆ 1869ರ ಅಕ್ಟೋಬರ್ 2ರಂದು ಗುಜರಾತಿನ ಪೋರಬಂದರಿನಲ್ಲಿ ಕರಮಚಂದ ಗಾಂಧಿ ಮತ್ತು ಪುತ್ಥಳೀಬಾಯಿಯವರಿಗೆ ಜನಿಸಿದ ಮಗುವಿನಿಂದ ಭಾರತಮಾತೆಯು ಪರಾಧೀನತೆಯಿಂದ ಮುಕ್ತಳಾಗಿ ಸ್ವತಂತ್ರಳಾಗಿದ್ದಾಳೆ. 1921ರಲ್ಲಿ ನ್ಯಾಶನಲ್ ಕಾಂಗ್ರೆಸ್‌ನ



ನಾಯಕತ್ವವನ್ನು ಪಡೆದ ಇವರು 1930ರ ಉಪ್ಪಿನ ಸತ್ಯಾಗ್ರಹ, 1942ರ ಕ್ವಿಟ್ ಇಂಡಿಯಾ ಚಳುವಳಿಯಂತಹ ಹಲವಾರು ಹೋರಾಟ ಕಾರ್ಯಗಳಿಗೆ ನಾಯಕತ್ವವನ್ನು ವಹಿಸಿ ಹೋರಾಟಗಾರರಿಗೆ ಪ್ರೇರೇಪಿತರಾದವರು. ಸರಳ ಸಜ್ಜನ ವ್ಯಕ್ತಿತ್ವದ ಹರಿಕಾರ ಮೂರ್ತಿಯೇ ನಮ್ಮೆಲ್ಲರ ನೆಚ್ಚಿನ 'ಬಾಪು' ಎನಿಸಿಕೊಂಡಿರುವ 'ಮಹಾತ್ಮ ಗಾಂಧೀಜಿ'ಯವರು.

'ಸತ್ಯ ಮತ್ತು ಅಹಿಂಸೆಯ ಸಾಧನೆಯೇ ಮಾನವ ಜೀವನದ ಗುರಿ' ಎಂದು ಬಲವಾಗಿ ನಂಬಿದವರು ಗಾಂಧೀಜಿ. ಇದರಿಂದಲೇ ವ್ಯಕ್ತಿಯು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಿ ಪುಣ್ಯತೆಯನ್ನು ಪಡೆದುಕೊಳ್ಳಬಹುದು, ರಾಮರಾಜ್ಯವನ್ನು ಸಾಧಿಸಬಹುದು ಎಂದು ದೃಢವಾಗಿ ಹೇಳುತ್ತಾರೆ. **'ವಿನಯ ಮತ್ತು ತ್ಯಾಗಗಳ'** ಆದರ್ಶವನ್ನೇ ಇವರು ತಮ್ಮದಾಗಿಸಿಕೊಂಡಿದ್ದರು. ಆರ್ಥಿಕ ನಾಗರಿಕತೆಯು ದೇಶದಲ್ಲಿ ಹೆಚ್ಚುತ್ತಿದ್ದಂತೆಯೇ ಜಗವು ವಿನಾಶದ ಕಡೆ ಹೆಜ್ಜೆ ಹಾಕುತ್ತದೆ. ಏಕೆಂದರೆ 'ಧನ'ವೆಂಬ ಕ್ರೂರತೆಯು ಯಾವ ಮನುಷ್ಯನನ್ನೂ ಸ್ವಾರ್ಥಿಯಾಗಿಸುತ್ತವೆ. ಅದರಿಂದಲೇ ಮಹಾತ್ಮ ಗಾಂಧೀಜಿವರು **'ಸತ್ಯ ಮತ್ತು ಅಹಿಂಸೆ'**ಯನ್ನು ಪಾಲಿಸಿ, ಇದರಿಂದಲೇ ದುಃಖ, ದಾರಿದ್ರ್ಯ ಮತ್ತು ಪರಾಧೀನತೆಯಿಂದ ಭಾರತವನ್ನು ಮುಕ್ತವಾಗಿಸಬಹುದು ಎಂಬ ಕರೆಯನ್ನು ನೀಡುತ್ತಾರೆ. **''ಅಹಿಂಸೆಯೇ ಪರಮ ಧರ್ಮ''** ಎಂದು ತಿಳಿಹೇಳಿದ್ದಾರೆ. ಹಿಂಸೆಯೇ ನಮ್ಮ ದೇಶದ ಬಡತನಕ್ಕೆ ಮೂಲ ಕಾರಣ ಎಂದು ಹೇಳಿದ್ದಾರೆ.

ಗಾಂಧೀಜಿಯವರು ''ಪರಲೋಕವನ್ನೇ ಧ್ಯೇಯವಾಗಿಸಿಕೊ, ಲೌಕಿಕ ಸಮೃದ್ಧಿಯೇ ಮನುಷ್ಯನ ಉಪೇಕ್ಷೆಯಾಗಿರಲಿ ಮತ್ತು ತನ್ನ ಅಗತ್ಯವನ್ನು ಮಿತವಾಗಿಸಿಕೊ, ತ್ಯಾಗ ಮನೋಭಾವವನ್ನು ಹೆಚ್ಚಿಸಿಕೊ.'' ಆಗಲೇ ಆನಂದವೆಂಬುದು ನಮಗಾಗುತ್ತದೆ ಎಂಬ ಆಧ್ಯಾತ್ಮಿಕ ಚಿಂತನೆಯನ್ನೂ ಹೊಂದಿದ್ದರು.

''ಇಹಲೋಕದತ್ತ ಕಡಿಮೆ ಗಮನ ಹರಿಸಿ, ಪರಲೋಕ ಪ್ರಾಪ್ತಿಯಾಗುವಲ್ಲಿ ಹೆಚ್ಚು ಗಮನವಿರಲಿ'', ಭೌತಿಕ ಅಗತ್ಯತೆಯನ್ನು ಮಿತಿಯಾಗಿರಿಸು ಎಂದು ಹೇಳಿರುತ್ತಾರೆ.

''ಶ್ರೀಮಂತಿಕೆಯೇ ಶ್ರೀಮಂತನನ್ನು ಸುಖಿಯಾಗಿಸಲಾರದು, ಬಡತನವೇ ಬಡವನ ದುಃಖಕ್ಕೆ ಕಾರಣವಾಗಲಾರದು'' ಆದುದರಿಂದಲೇ ಅನಗತ್ಯ ವಸ್ತುಗಳಲ್ಲಿ ಅನಾವಶ್ಯಕ ಆಸೆಯನ್ನು ಇರಿಸಿಕೊಳ್ಳಬಾರದು ಎಂಬುದು ಅವರ ಚಿಂತನೆ. ಇಷ್ಟೆಲ್ಲಾ ಉತ್ತಮ ತತ್ತ್ವಗಳನ್ನು ಅಳವಡಿಸಿಕೊಂಡಿರುವ ಗಾಂಧೀಜಿಯವರ ಸರಳತೆ ಈ ಕೆಳಗಿನ ಮಾತಿನಲ್ಲಿ ವ್ಯಕ್ತವಾಗುತ್ತದೆ. ''ಯಾವುದೇ ಹೊಸ ತತ್ತ್ವ ಅಥವಾ ಸಿದ್ಧಾಂತವನ್ನು ತೋರಿಸಿಕೊಡುತ್ತಿದ್ದೇನೆ ಎಂದು ನಾನು ಹೇಳಿಕೊಳ್ಳಲಾರೆ. ನನ್ನ ದಿನನಿತ್ಯದ ಬದುಕಿನಲ್ಲಿ ಹಾಗೂ ಪ್ರತಿದಿನ ಎದುರಾಗುವ ಪ್ರಶ್ನೆಗಳ ಸಂದರ್ಭದಲ್ಲಿ ತನ್ನದೇ ಆದ ರೀತಿಯಲ್ಲಿ ಶಾಶ್ವತ ಸತ್ಯಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಾನು ಮಾಡಿದ್ದೇನೆ''. ಇದು ಅವರ ವಿನಯತೆಯನ್ನು ಹೇಳುತ್ತದೆ. ತಾನು ನಂಬಿದ್ದು ಎಂದೂ ಹುಸಿಯಾಗಲಾರದು ಎಂಬ ನಂಬಿಕೆ, ಆತ್ಮವಿಶ್ವಾಸ ಅಂದು ಅವರಲ್ಲಿತ್ತು. ಆದುದರಿಂದಲೇ ಇಂದಿಗೂ ಕೂಡಾ ಜನ ಅದನ್ನು 'ಗಾಂಧೀ ವಾದ'ಎಂತಲೇ ನಂಬುತ್ತಾ ಬಂದಿದ್ದಾರೆ. ಸತ್ಯ ಮತ್ತು ಅಹಿಂಸೆಯ ಮೇಲೆ ದೃಢ ನಂಬಿಕೆಯನ್ನು ಇರಿಸಿದ ಗಾಂಧೀಜಿಯವರಿಗೆ ಕೊನೆಗೂ ಜಯವೇ ಆಯಿತು. **'ಗಾಂಧಿ ಸತ್ತರೂ, ಗಾಂಧೀವಾದ ಸಾಯುವುದಿಲ್ಲ'** ಎಂಬುದಕ್ಕೆ ಅವರ ದೃಢ ನಂಬಿಕೆಯೇ ಕಾರಣ ಎಂದು ಹೇಳಬಹುದು.

ಗಾಂಧೀಜಿಯವರು ನನ್ನನ್ನು ಅನುಸರಿಸಿ ಎಂದು ಹೇಳಿದವರೇ ಅಲ್ಲ. ಆದರೆ ಅವರ ಹಿಂಬಾಲಕರು ಅವರ ತತ್ತ್ವಗಳನ್ನು ಪಾಲಿಸತೊಡಗಿದರು. ಅದೆಷ್ಟೋ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣೆಯಾಗಿ ನಿಂತರು. ಯಾವುದೇ ತತ್ತ್ವವನ್ನು ಸ್ವತಃ ಪಾಲಿಸಿ ಸ್ವಾವಲಂಬಿ, ಸ್ವಾಭಿಮಾನದ ಬದುಕನ್ನು ಬಾಳಿ ಸಮಾಜಕ್ಕೆ ಮಾದರಿಯಾಗಿರುವರು. ಇದಲ್ಲದೆ ಇವರ ಇನ್ನೂ ಹಲವಾರು ಆದರ್ಶಗಳು ಪ್ರೇರೇಪಿತವಾಗಿವೆ.

●

ನನ್ನ ದೇವರು

ಅಮ್ಮ, ಅಮ್ಮ ನೀ ನನ್ನ ದೇವರು ಅಮ್ಮ
ಗರ್ಭದಿ ಹೊತ್ತು ತಿರುಗಿದೆ, ಮಡಿಲಲ್ಲಿ ಇಟ್ಟು ಮುದ್ದಿಸಿದೆ.
ಎದೆಯ ಹಾಲನು ನೀಡಿ, ನೀ... ಬೆಳೆಸಿದೆ ನೀ ನನ್ನನ್ನು
ಮೊದಲ ಹೆಜ್ಜೆಗೆ ಕಾದೆ ನೀ, ಅಮ್ಮ ಎನ್ನಲು ಕುಣಿದೆ ನೀ...
ಲಾಲಿಯ ಜೋಗುಳ ಹೇಳುತ್ತಾ ಕಂದ ನೀ ಮಲಗೆನ್ನುತ್ತಾ,
ಇರುಳೆಲ್ಲಾ ಕಾವಲು ಕಾದೆ ನೀ...
ಆಟ ಆಡುತ್ತಾ ಎಡವಲು, ನಿನ್ನ ಎದೆಗೊತ್ತಿ ಮುದ್ದಿಸಿದೆ,
ಚಂದಿರನ ನೀ ತೋರುತ್ತಾ... ಪ್ರೀತಿಯ ತುತ್ತನ್ನು ನೀಡಿದೆ.
ಅ, ಆ, ಇ, ಈ ಕಲಿಸಿದೆ. ಕೈ ಬೆರಳ ಹಿಡಿದು ನಡೆಸಿದೆ,
ಪ್ರೀತಿಯ ಮುತ್ತಾ... ನೀಡುತ್ತಾ... ಕಾಳಜಿಯಲ್ಲಿ ಗದರಿದೆ.
ದಿನಗಳೆಷ್ಟೇ ಕಳೆದರೂ, ವರುಷಗಳೇ ಉರುಳಿ ಹೋದರೂ
ನಿನ್ನ ಪ್ರೀತಿಯ ಮಗುವಾಗಿ, ನಾ ಎಂದೆಂದೂ ಇರುವೆ ನನ್ನಮ್ಮ.

✍ **ಪೂಜಾ ರಾವ್**, ದ್ವಿತೀಯ ಬಿ.ಎ.

ಗಾಂಧೀಜಿ: ಸದಾ ನೆನಪಾಗುವ ನಾಯಕತ್ವ

✍ **ಶರ್ಲಿನ್ ಡಿ. ಅಲ್ಮೇಡಾ,** ದ್ವಿತೀಯ ಬಿ.ಕಾಂ.

(ತನ್ನವರನ್ನು ಎಲ್ಲಿಗೆ ಮುನ್ನಡೆಸಬೇಕು ಹಾಗೂ ಕರೆದೊಯ್ಯಬೇಕು ಎಂಬುದನ್ನು ನಾಯಕನಾದವನು ಅರಿತಿರಬೇಕು. ಅಲ್ಲದೆ ಆತ ಜನರನ್ನು ಈಗಿರುವ ಸ್ಥಿತಿಗಿಂತ ಉತ್ತಮ ಸ್ಥಿತಿಗೆ ನಡೆಸುವಂತಾಗಿರಬೇಕು.)

ಇಪ್ಪತ್ತನೆಯ ಶತಮಾನದಲ್ಲಿ ಹಿಂಸೆಯ ಪಂಥಕ್ಕೆ ವರ್ಣ ದ್ವೇಷ, ಜಾತೀಯತೆ ಮತ್ತಿತರ ರಾಜಕೀಯ ಮತ್ತು ಸಾಮಾಜಿಕ ಕೆಡುಕುಗಳ ವಿರುದ್ಧ ಯಶಸ್ವಿಯಾಗಿ ಎದುರು ನಿಂತು ಅದಕ್ಕಾಗಿ ಪರಿಣಾಮಕಾರಿಯಾದ ಅಹಿಂಸಾತ್ಮಕ ತಂತ್ರವನ್ನು ರೂಪಿಸಿದ ಏಕೈಕ ವ್ಯಕ್ತಿ ಗಾಂಧೀಜಿ. ಅವರು ನಮ್ಮನ್ನು ಅಗಲಿ ಇಂದಿಗೆ 71 ವರ್ಷಗಳೇ ಕಳೆದಿವೆ. ಕೆಲವು ನಾಯಕರ ತತ್ವಗಳು ಸಂಬಂಧಪಟ್ಟ ಕಾಲ, ಪ್ರದೇಶ ಮತ್ತು ಸಮಸ್ಯೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ ಈ ಮಹಾನ್ ನಾಯಕನ ತತ್ವಗಳು ಸಾರ್ವಕಾಲಿಕ ತಳಹದಿಯಲ್ಲಿ ನಮ್ಮ ಇತಿಹಾಸದ ಮೇಲೆ ಬೀರಿದ ಪ್ರಭಾವ ಮತ್ತು ವಹಿಸಿದ ನಾಯಕತ್ವ ಮಾತ್ರ ಬಹಳ ಗಣನೀಯವಾದುದು. ಯಾಕೆಂದರೆ 'ನಮ್ಮ ಜಗತ್ತಿನಲ್ಲಿ ಕಾಣಬಯಸುವ ಬದಲಾವಣೆ ನಾವೇ ಆಗಬೇಕು' ಎಂದು ಪ್ರತಿಪಾದಿಸುವ ಗಾಂಧೀಜಿ ಅವರು ಹೇಳಿದಂತೆ ನಮ್ಮಲ್ಲೇ ನಾಯಕತ್ವದ ಸತ್ವ ಅಡಗಿದೆ. ಆದರೆ ಅದನ್ನು ವಿಮರ್ಶೆಯಿಂದ ಗುರುತಿಸಿಕೊಳ್ಳಬೇಕು. ಶಿಸ್ತಿನ ಹಾಗೂ ನಿಷ್ಠೆಯ ಪ್ರಯತ್ನದಿಂದ ಬೆಳೆಸಿಕೊಳ್ಳಬೇಕು.

ನಮ್ಮ ಕುಟುಂಬ, ವೃತ್ತಿ, ಆಶ್ರಯದಲ್ಲಿರುವವರು, ಸಮಾಜ ಮತ್ತು ನಮ್ಮ ರಾಷ್ಟ್ರಕ್ಕೆ ಉತ್ತಮ ನಾಯಕತ್ವವನ್ನು ಒದಗಿಸುವ ಕರ್ತವ್ಯ ನಮ್ಮೆಲ್ಲರ ಮೇಲಿದೆ. ನಮ್ಮ ದಿನನಿತ್ಯದ ಜೀವನದಲ್ಲಿ ಅಸತ್ಯ, ಅನ್ಯಾಯ, ನಿರಾಸೆ, ಹಿಂಸೆ ಇತ್ಯಾದಿಗಳು ನಮ್ಮೆದುರಿಗೆ ಬಂದು ನಿಲ್ಲುತ್ತವೆ. ಅದನ್ನು ನಿರ್ಲಕ್ಷಿಸುವ ಅಥವಾ ಅದರಲ್ಲಿ ಪಾಲುಗೊಳ್ಳುವ ಇಲ್ಲವೇ ಅವರನ್ನು ಎದುರಿಸಿ ಹೋರಾಡುವ ಆಯ್ಕೆ ನಮ್ಮ ಮುಂದಿರುತ್ತದೆ. ನಾಯಕತ್ವ ಇರುವುದು ಕೊನೆಯ ಆಯ್ಕೆಯನ್ನು ಆರಿಸಿಕೊಳ್ಳುವುದರಲ್ಲಿ, ಇದಕ್ಕೆ ಗಾಂಧೀಜಿ ನಮಗೆ ನಿದರ್ಶನ. 'ಇಂದು ಜಗತ್ತು ವಾಸ ಮಾಡಲು ಅಪಾಯದ ಜಾಗವಾಗಿರುವುದು ಅದರಲ್ಲಿ ವಾಸ ಮಾಡುವ ಕೆಟ್ಟ ಜನರಿಂದಾಗಿ ಅಲ್ಲ, ಬದಲಾಗಿ ಅವರಲ್ಲಿ ಇರುವ ಕೆಡುಕಿನ ಬಗ್ಗೆ ಏನನ್ನೂ ಮಾಡದವರಿಂದಾಗಿ' ಎಂಬ ಐನ್‌ಸ್ಟಿನ್‌ರ ಮಾತು ಇಂದಿಗೂ ಸತ್ಯ ಮತ್ತು ಪ್ರಸ್ತುತ.

ಗಾಂಧೀಜಿಯನ್ನು ಪ್ರೇರೇಪಿಸಿದ ಒಂದು ಯಹೂದಿ ಧರ್ಮಶಾಸ್ತ್ರದ ಸಾಲುಗಳು ಈ ರೀತಿ ಇದೆ. ಗಟ್ಟಿಯಾದವು ಹತ್ತು ಇವೆ. ಕಬ್ಬಿಣವು ಗಟ್ಟಿ ಆದರೆ ಬೆಂಕಿಗೆ ಕರಗುತ್ತದೆ. ಬೆಂಕಿ ಗಟ್ಟಿ, ಆದರೆ ನೀರು ಅದನ್ನು ಅಡಗಿಸುತ್ತದೆ. ನೀರು ಗಟ್ಟಿ ಆದರೆ ಮೋಡಗಳು ಅದನ್ನು ಆವರಿಸುತ್ತವೆ. ಮೋಡ ಗಟ್ಟಿ, ಗಾಳಿ ಮೋಡವನ್ನು ಚದುರಿಸುತ್ತದೆ. ಮಾನವ ಗಟ್ಟಿ ಆದರೆ ಭಯ ಅವನನ್ನು ಕೆಳಕ್ಕೆ ಎಳೆಯುತ್ತದೆ. ಭಯ ಗಟ್ಟಿ, ಆದರೆ ನಿದ್ದೆ ಅದನ್ನು ಗೆಲ್ಲುತ್ತದೆ. ನಿದ್ದೆ ಗಟ್ಟಿ ಆದರೆ ಸಾವು ಇನ್ನೂ ಗಟ್ಟಿ ಆದರೆ ಪ್ರೀತಿ, ದಯೆ ಸಾವಿನಾಚೆಯೂ ಉಳಿಯುತ್ತದೆ.

ನಾಯಕತ್ವದ ವಿಚಾರದಲ್ಲಿ ಹಿಂದಿನ ನಾಯಕರಿಗೂ ನಮ್ಮ ಇಂದಿನ ನಾಯಕರಿಗೂ ಬಹಳಷ್ಟು ವ್ಯತ್ಯಾಸವಿದೆ. ಆದರೆ ಸ್ಫೂರ್ತಿದಾಯಕವೂ, ವಿಶ್ವಾಸಾರ್ಹವೂ ಆದ ನಾಯಕತ್ವವನ್ನು ಒದಗಿಸಲು ಎಲ್ಲಾ ಸ್ತರಗಳ ರಾಜಕಾರಣಿಗಳಿಗೂ ಅತ್ಯುತ್ತಮ ಅವಕಾಶವಿರುತ್ತದೆ. ವ್ಯವಸ್ಥೆಯನ್ನು ಶುಚಿಗೊಳಿಸಿ ಪರಿಣಾಮಕಾರಿ ನಾಯಕತ್ವ ಒದಗಿಸುವುದು ಇಂದಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗೆ ಅತಿ ಅಗತ್ಯ ಮತ್ತು ಅನಿವಾರ್ಯ. ಭ್ರಷ್ಟಾಚಾರ, ಕೋಮುಭಾವನೆ, ಜಾತೀಯತೆ, ಹಿಂಸೆ ಮತ್ತು ಸ್ವಾರ್ಥದ ಸೋಂಕಿಗೆ ಸಿಲುಕದೆ ರಾಜಕೀಯವನ್ನು ನಿಸ್ವಾರ್ಥ ಮತ್ತು ಪ್ರಾಮಾಣಿಕ ಜನಸೇವೆಗೆ ಪರಿವರ್ತನೆ ಮಾಡುವುದು ಸಾಧ್ಯವಿದೆ. ಅದಕ್ಕೆ ಬೇಕಾದ ಬದಲಾವಣೆಗಳು ನಮ್ಮ ಜನನಾಯಕರಲ್ಲಿ ಅವಶ್ಯವಾಗಿ ಆಗಬೇಕಾಗಿದೆ. ಸಮರ್ಥ ಮತ್ತು ಸಮರ್ಪಕ ಅರ್ಪಣಾ ಭಾವದಿಂದ ಜನರ ಬದುಕನ್ನು ಉತ್ತಮಗೊಳಿಸುವ ಆಡಳಿತ ಮತ್ತು ನಾಯಕತ್ವದ ನಿಷ್ಠೆಯನ್ನು ತಳಹಂತದಿಂದಲೇ ರೂಪಿಸಬೇಕಾಗಿದೆ. ಉತ್ತಮ ಚಾರಿತ್ರ್ಯ ಹಾಗೂ ನಿಷ್ಠೆಯುಳ್ಳ ಜನನಾಯಕರು ಗೌರವಕ್ಕೆ ಪಾತ್ರರಾಗುತ್ತಾರೆ ಮತ್ತು ಚಿರಸ್ಮರಣೀಯರಾಗುತ್ತಾರೆ. ಅಂಥ ಪರಿವರ್ತನೆಯ ಮನಸ್ಸಿಗೆ ಈ ಜಗತ್ತು ಕಂಡ ಗಾಂಧೀಜಿಯ ಅಮೋಘ ನಾಯಕತ್ವದ ಮೌಲ್ಯಗಳು ಮಾದರಿಯಾಗಲಿ. ●

ಯುವಜನತೆ ಮತ್ತು ಸಾಮಾಜಿಕ ಹೊಣೆಗಾರಿಕೆ

✍ **ನವೀನ್ ಎಲ್.,** ದ್ವಿತೀಯ ಬಿ.ಎ. ಪತ್ರಿಕೋದ್ಯಮ

ಸಮಾಜ – ನಮ್ಮ ಭಾವನೆಗಳಿಗೆ, ಬುದ್ಧಿಮಟ್ಟಕ್ಕೆ ತಿಳಿದಿರುವ ಸಮಾಜ ಕೇವಲ ಬಾಯಿಮಾತಿನ ಒಂದು ಪದ. ಸಮಾಜದ ಕುರಿತು ತಿಳಿದವರಲ್ಲಿ ಸಾಮಾಜಿಕ ಭಾವೈಕ್ಯವು ಅಲ್ಪ ತಿಳಿವಳಿಕೆ ತಿಳಿದು ನಡೆಯುವ ರೀತಿ ವಿಭಿನ್ನ. ಸಮಾಜದ ಉತ್ತಮ ವಿಕಾಸಕ್ಕೆ, ಸ್ವಸ್ಥ ಬೆಳವಣಿಗೆ ಎಲ್ಲರ ಹೊಣೆ. ಈ ಹೊಣೆಯು ಬಹು ಕಷ್ಟವಾದದ್ದು ಹಾಗೆಯೇ ಸುಲಭವಾದದ್ದು ಕೂಡ. ಈ ಜವಾಬ್ದಾರಿ ಹೊರುವ ಹೆಗಲು ಶಕ್ತಿಯುತವಾಗಿದ್ದರೆ ಸಾಲದು ಮಾನವೀಯತೆ ಹಾಗೂ ಕಳಕಳಿಯ ಊರುಗೋಲನ್ನು ಹೊಂದಿದ್ದು ವಿಶ್ವಾಸ ಎದೆಯುಬ್ಬಿಸಿ ನಡೆಯುವಂತಹ ಕಾರುಣ್ಯಪೂರ್ಣವಾಗಿರಬೇಕು. ಈ ತಾರುಣ್ಯತೆ ಎಲ್ಲಾ ಮಾನವರಲ್ಲಿ ಕಾಣಸಿಗದು. ಹೆಚ್ಚಿನ ಅಭಿಪ್ರಾಯದಂತೆ ಯುವಕರು ಈ ಸಾಮರ್ಥ್ಯವನ್ನು ಹೊಂದಿರಬಲ್ಲರು. ಈ ಯುವಜನತೆ ತಮ್ಮ ಸಮಾಜದ ಕುರಿತು, ಸುರಿಸುವ ಬೆವರು, ನೀಡುವ ಬೆಳವಣಿಗೆ ಬಹುಶಃ ಬೇರಾರು ನೀಡಲಿಕ್ಕಿಲ್ಲ. ಕಳಕಳಿ, ಹೊಣೆಗಾರಿಕೆ ನಮ್ಮಲ್ಲಿ ಸ್ವತಃ ಮೂಡಿಬಂದರೆ ಆ ಸಮಾಜದ ಬೆಳಕು, ಬೆಳಗು ಎರಡು ನಿಶ್ಚಿತ.

ಯುವಜನತೆ ತಮ್ಮ ವಿದ್ಯಾಭ್ಯಾಸದ ಸಂಪೂರ್ಣ ಅರ್ಥವನ್ನು ಗ್ರಹಿಸಿ ನಡೆಯಬೇಕು. ಹಾಗೆ ನಡೆದಿದ್ದೆ ಆದಲ್ಲಿ ಶಿಕ್ಷಣ ಸಮಾಜವನ್ನು ಮೇಲೊಯ್ಯಬಹುದು. ಸಾಮಾಜಿಕ ಹೊಣೆಗಾರಿಕೆ ಹೊರುವಲ್ಲಿ ಆಯಾ ಸಮಾಜದ ಯುವಜನರ ಕೊಡುಗೆ ಈ ನಿಟ್ಟಿನಲ್ಲಿದ್ದರೆ ಸಾರ್ಥಕ ಶ್ರಮ. ಅವುಗಳೆಂದರೆ,

ದೇಶಭಕ್ತಿ :

ಇಂದಿನ ಯುವಜನತೆಗೆ ಹೆಚ್ಚಿನ ಕೊರತೆ ಇರುವುದು ಈ ದೇಶಾಭಿಮಾನ, ದೇಶಪ್ರೇಮ ಮತ್ತು ದೇಶಭಕ್ತಿ. ನಾವು ಹುಟ್ಟಿದ ಈ ದೇಶದ, ಮಣ್ಣಿನ ಋಣ ತೀರಿಸುವುದು ಅತ್ಯಗತ್ಯ. ದೇಶದ ಉಳಿವಿಗೆ, ಬೆಳವಣಿಗೆಗೆ ಶ್ರಮಿಸುವುದು ಪ್ರತಿಯೊಬ್ಬ ನಾಗರಿಕನ ನೇರ ಕರ್ತವ್ಯ. ಯುವಜನರು ದೇಶದ ಭವಿಷ್ಯ. ಇವರು ಎಚ್ಚೆತ್ತು ತಮ್ಮ ತಮ್ಮ ದೇಶದ ಬೆಳವಣಿಗೆಗಾಗಿ ನಿಲ್ಲಬೇಕು. ತಮ್ಮ ಪರಿಸರ, ಊರು, ಜಿಲ್ಲೆ, ರಾಜ್ಯ ಮತ್ತು ದೇಶ – ಹೀಗೆ ಪ್ರತಿ ಸ್ತರದಲ್ಲಿಯೂ ಮಾನವ ಪ್ರೀತಿಯೊಂದಿಗೆ ದೇಶಾಭಿಮಾನ ಹೊತ್ತು ನಡೆಯುವುದು ಸೂಕ್ತ. ಶಿಕ್ಷಿತರಾದ ಯುವಕರು ತಮ್ಮ ಸಮಾಜಕ್ಕೆ, ದೇಶಕ್ಕೆ ತಮ್ಮ ಸೇವೆ ನೀಡುವುದು ಉತ್ತಮ ಲಕ್ಷಣ.

ಶಿಕ್ಷಣ:

ದೇಶ ಕಾಯಲು ಹೊರಟವನಿಗೆ ಅಗತ್ಯ ಅಸ್ತ್ರ ಶಿಕ್ಷಣವೂ ಹೌದು. ಶಿಕ್ಷಣ ಜ್ಞಾನಾರ್ಜನೆಯನ್ನು ಹುಟ್ಟಿಸಿ ಮನುಷ್ಯನ ಜೀವನವನ್ನು ಸ್ವಸ್ಥವಾಗಿರಿಸುತ್ತದೆ. ಸ್ವಸ್ಥ ಮಾನವನ ಸುತ್ತಮುತ್ತಲಿನ ಸಮಾಜವು ಹೀಗೆಯೇ ಆರೋಗ್ಯಪೂರ್ಣವಾಗಿರುತ್ತದೆ. ಕೇವಲ ಶಿಕ್ಷಣವನ್ನು ಪದವಿಗೆ ಅಥವಾ ಅನಿವಾರ್ಯಕ್ಕಾಗಿ ಬಳಸಿಕೊಳ್ಳದೆ ಉತ್ತಮ ನಾಳೆಯನ್ನು ಕಟ್ಟಲು ಇಟ್ಟಿಗೆಗಳಾಗಿ ಬಳಸಿಕೊಳ್ಳಬೇಕು. ಶಿಕ್ಷಿತರ ನಿರ್ಧಾರಗಳು, ನಡೆ ನುಡಿಗಳು ಉತ್ತಮ ಸಮಾಜವನ್ನು ಕಟ್ಟಲು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ''ಲೇಖನಿ ಖಡ್ಗಕ್ಕಿಂತ ಹರಿತವಾದದ್ದು'' ಎಂಬುದು ನಾಣ್ಣುಡಿ. ಆ ಹರಿತ ಅಸ್ತ್ರ ಸಮಾಜದ ಒಳಿತಿಗೆ ಬಳಸಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಅದರಲ್ಲಿಯೂ ಯುವಜನತೆಯ ಪ್ರಮುಖ ಹೊಣೆಯಾಗಿದೆ.

ಸಹನೆ – ಭ್ರಾತೃತ್ವ:

ಇಂದಿನ ಪೀಳಿಗೆ ತಮ್ಮ ಮೂಗಿನ ನೇರಕ್ಕೆ ನಡೆಯುವುದನ್ನು ತಮ್ಮ ಜೀವನ ಶೈಲಿಯನ್ನಾಗಿ ಮಾಡಿಕೊಂಡಿದೆ. ಆ ಜೀವನ ಶೈಲಿ ಅವರ ಜೀವನಕ್ಕೆ ಮಾಡಲಿರುವ ಹಾನಿಯನ್ನು ಮನಗಾಣದೆ ಹೋಗಿವೆ. ಈ ರೀತಿಯ ಬೆಳವಣಿಗೆ ಈ ಸಮಾಜಕ್ಕೆ ಕೇಡಾಗಬಹುದು. ಶಾಂತಿ ಸಾರಿದ ಮಹಾತ್ಮರ ನಾಡಿನಲ್ಲಿ ಹುಟ್ಟಿದ ನಾವು ಕೇವಲ ಸ್ವಾತಂತ್ರ್ಯದ ಸಿಹಿಯನ್ನು ಅನುಭವಿಸದೆ ಅದನ್ನು ಪಡೆಯುವಾಗ ಮಾಡಿದ ಪ್ರಮಾಣವನ್ನು ನೆನಪಿನಲ್ಲಿಡಬೇಕು. ''ದಯೆ ಬೇಕು ಸಕಲ ಜೀವಿಗಳಲ್ಲಿ'' ಎಂಬುದು ಕಾಲಕಾಲಕ್ಕೂ ಸತ್ಯ. ಸಹನೆ, ತಾಳ್ಮೆ ಅಗತ್ಯ, ಯುವಜನತೆ ಈ ಅಗತ್ಯತೆಯನ್ನು, ಸತ್ಯವನ್ನು ಅರಿಯಬೇಕು. ''ಅಣ್ಣ-ತಂಗಿಯರೇ...'' ಎಂದು ಉದ್ಗರಿಸಿ ವಿಶ್ವ ಮಟ್ಟದಲ್ಲಿ ಮಿನುಗಿದವರು ನೀಡಿದ ಭ್ರಾತೃತ್ವದ ಪಾಠ ಕಲಿಯಲೇ ಬೇಕಾಗಿದೆ. ಈ ಹೊಣೆಯನ್ನು ಹೊರುವುದು ಈ ಸಮಾಜದ ಯುವಜನತೆಗೆ ಅಗತ್ಯವಾಗಿದೆ.

ಜೀವನದ ಅರ್ಥ:

ಮನುಷ್ಯ ತನ್ನ ಇರುವಿಕೆಯ ಅರ್ಥವನ್ನು ಮರೆತಿದ್ದಾನೆ, ಅಥವಾ ಮರೆತಂತೆ ನಟಿಸುತ್ತಿದ್ದಾನೆ. ತಮ್ಮ ತಮ್ಮ ಸ್ವಾರ್ಥಕ್ಕೆ ತಾವು ಮನುಷ್ಯರೆಂಬುದನ್ನು ಮರೆತು ಮೆರೆಯುತ್ತಿದ್ದಾರೆ. ತಮ್ಮ

ಜೊತೆಗೆ ತಮ್ಮವರೆಲ್ಲರೂ ಹಾಗೂ ಉಳಿದವರೆಲ್ಲರೂ ಬೆಳಗಬೇಕು, ಬೆಳೆಯಬೇಕು ಎಂದು ಶ್ರಮಿಸುವ ಗುಣ ಎಲ್ಲರಲ್ಲಿಯೂ ಬೆಳೆಯಬೇಕಿದೆ. ಎಲ್ಲರನ್ನೂ ಪ್ರೀತಿಸುವ ಮಾನವ ಗುಣವನ್ನು ಮತ್ತೆ ನೆನಪಿಸಿಕೊಳ್ಳಬೇಕಿದೆ. ಉತ್ತಮ ಸಮಾಜದ ಜನರು ಇದನ್ನು ರೂಢಿಸಿಕೊಳ್ಳಬೇಕು. ಈ ರೂಢಿ ಯುವ ಜನರು ತಮ್ಮಲ್ಲಿ ಅಳವಡಿಸಿಕೊಂಡು ಮುಂದುವರಿಯಬೇಕಾದುದು ನೈತಿಕ ಹೊಣೆಯಾಗಿದೆ.

ಸ್ವದೇಶಿಯತೆ – ಸ್ವ-ಸ್ವಾಭಿಮಾನತೆ :

ದೇಶಭಕ್ತಿಯ ಕುರಿತು ಓದಿ, ಬರೆದು, ಹಾಡಿದರೆ ಸಾಲದು ಅದರ ಕಾರ್ಯರೂಪಕ್ಕೆ ತರಲು ಶ್ರಮಿಸಬೇಕು. ತಮ್ಮ ತಮ್ಮಲ್ಲಿನ ಪ್ರತಿಭೆಯನ್ನು ಮುಖ್ಯ ಭೂಮಿಕೆಗೆ ತರುವುದು ತಮ್ಮ ಆಲೋಚನೆಗಳನ್ನು, ಸದುದ್ದೇಶಗಳನ್ನು ಸಮಾಜಕ್ಕೆ ನೀಡಬೇಕಿದೆ. ಪಾಶ್ಚಾತ್ಯರ ಅನುಕರಣೆಯಿಂದ ನಾವು ಬದುಕುವ ಬದುಕು ನಮ್ಮ ಬೆಳವಣಿಗೆಗೆ ಕಾರಣವಾಗುವುದಿಲ್ಲ. ಸ್ವದೇಶದ, ಸ್ವದೇಶಿಯ ಉತ್ಪನ್ನಗಳ ಪ್ರೋತ್ಸಾಹ ಹೆಚ್ಚು ಅಗತ್ಯ. ಏಕತೆಯ ಕೊರತೆ ಈ ಸಮಾಜಕ್ಕಿದೆ. ಹಣ ಸಂಪಾದನೆಯೇ ಮುಖ್ಯ ಗುರಿಯಾದ ಈ ಪೀಳಿಗೆಗೆ ಇಲ್ಲಿನ ಸವಲತ್ತು, ಸಂಪನ್ಮೂಲಗಳಿಗೆ ಒತ್ತು ನೀಡಿ ಸ್ವಾಭಿಮಾನ ಮತ್ತು ಸ್ವದೇಶಿ ಪ್ರೀತಿ ಬೆಳೆಸುವುದು ಇಂದಿನ ಯುವ ಜನತೆ ಹೊಣೆಯೆಂದು ತಿಳಿದು ತಿದ್ದುವುದು ಅನಿವಾರ್ಯವಾಗಿದೆ.

ಭೂಮಿ – ಪರಿಸರ :

ಸರ್ವತೋಮುಖ ಬೆಳವಣಿಗೆ ಕೇವಲ ದೇಶದ ಆರ್ಥಿಕ ಬೆಳವಣಿಗೆಯಲ್ಲಿಲ್ಲ. ತಮ್ಮ ಅನುಕೂಲಕ್ಕಾಗಿ ಇಟ್ಟ ಹೆಜ್ಜೆ ತಪ್ಪಾಗಬಾರದು, ಇತರರಿಗೆ ನೋವನ್ನುಂಟು ಮಾಡಬಾರದು. ತಾವು ಬೆಳೆದ, ಹುಟ್ಟಿದ ದೇಶದ ಜೊತೆಗೆ ತನ್ನ 'ಭೂತಾಯಿ'ಯ ರಕ್ಷಣೆ ಹೆಚ್ಚು ಅವಶ್ಯ. ಜಾಗತೀಕರಣದ ಭರದಲ್ಲಿ ಜಾಗತಿಕ ತಾಪಮಾನಕ್ಕೆ ಬಲಿಯಾಗಿ ನರಳುತ್ತಿರುವ ಈ ಪರಿಸರದ ರಕ್ಷಣೆ ಬೇಕಾಗಿದೆ. ಇಂದಿನ ಯುವಜನತೆ ಎಚ್ಚೆತ್ತರೆ ಇದು ಸಾಧ್ಯ ಮನೆಯಲ್ಲಿ ಯಾರಿಲ್ಲದಾಗ ವಿದ್ಯುತ್ ಉಳಿಸುವುದು, ವಾಹನ ಬಳಕೆ ಕಡಿಮೆ ಮಾಡುವುದು, ಕೈಗಾರಿಕೆಗಳನ್ನು ಕಡಿಮೆ ಮಾಡುವುದು ಮತ್ತು ನೀರು-ಮಣ್ಣು-ಗಾಳಿಯನ್ನು ಕಾಪಾಡುವುದು ಪ್ರತಿಯೊಬ್ಬರ ಹೊಣೆಯಾಗಬೇಕು, ಅಭ್ಯಾಸವಾಗಬೇಕು. ಈ ಅಭ್ಯಾಸ ಯುವ ಪೀಳಿಗೆ ಹೊತ್ತರೆ ಸುಂದರ ನಾಳೆ ಖಂಡಿತ.

ಕೊನೆಯದಾಗಿ ...

ಬದಲಾವಣೆ ಪ್ರಕೃತಿ ನಿಯಮ. ಈ ನಿಯಮ ಯಾರ ಒತ್ತಡವೂ ಇಲ್ಲದೆ ಸಾಗುತ್ತದೆ. ಆದರೆ ಆ ಪ್ರಕೃತಿಯ ಅವಿಭಾಜ್ಯ ಅಂಗವಾದ ಮನುಷ್ಯ ತನ್ನ ಕರ್ತವ್ಯವನ್ನು ಮರೆಯುತ್ತಿದ್ದಾನೆ. ಇಲ್ಲಿ ಬದಲಾಗಬೇಕಿರುವುದು ಪ್ರಕೃತಿಯಲ್ಲ ; ಮನುಷ್ಯ. ಮನುಷ್ಯ ತನ್ನ ಸ್ವಾರ್ಥಕ್ಕೆ ತನ್ನ ಪರಿಸರ, ಸಮಾಜವನ್ನು ಕಡೆಗಣಿಸುತ್ತಿದ್ದಾನೆ. ಸ್ವಸ್ಥ ಬದುಕು ಎಲ್ಲರ ಹಕ್ಕು. ಆ ಹಕ್ಕಿಗೆ ಹಾರುವ ರೆಕ್ಕೆ ಕಟ್ಟಲು ನಾವು ಅಂದರೆ ಯುವಜನತೆ ಮುಂದಾಗಬೇಕು.

ಯಾರೋ ಬದಲಾದದನ್ನು ನೋಡಿ ನಾವು ಬದಲಾಗುವ ಮುನ್ನ ತಮ್ಮ ಸ್ವಪ್ರೇರಣೆಯಿಂದ ಬಂದ ಬದಲಾವಣೆ ಹೆಚ್ಚು ಪರಿಣಾಮಕಾರಿ.

ಸಮಾಜಕ್ಕೆ ಎಲ್ಲರೂ ನೀಡಬೇಕಾದ ಕೊಡುಗೆ ಕರ್ತವ್ಯ. ಶಕ್ತಿ ಮತ್ತು ಸಮಯ ಎರಡನ್ನು ಹೊಂದಿರುವ ಯುವಜನತೆ ಆ ನಿಟ್ಟಿನಲ್ಲಿ ಶ್ರಮಿಸಿದರೆ ಸುಂದರ ನಾಳೆ ನಮ್ಮದು. ಸುಂದರ ಸಮಾಜದ ನಿರ್ಮಾಣ ಪ್ರತಿಯೊಬ್ಬರ, ಪ್ರತಿಯೊಬ್ಬ ಯುವಜನರ ಹೊಣೆ. ಆ ಹೊಣೆ ಈಡೇರುವುದು ಅನಿವಾರ್ಯ.

●

ಅಭ್ಯಾಸವಿದ್ದಂತೆ ವಿದ್ಯೆ ಬರುತ್ತದೆ. ಕರ್ಮವಿದ್ದಂತೆ ಬುದ್ಧಿಯುಂಟಾಗುತ್ತದೆ. ಪ್ರಯತ್ನವಿದ್ದಂತೆ ಸಂಪತ್ತು ಬರುತ್ತದೆ. ಭಾಗ್ಯವಿದ್ದಂತೆ ಫಲ ದೊರೆಯುತ್ತದೆ.

– ಲೋಕೋಕ್ತಿ

* * *

ಓದಿ ಮರುಳಾಗಬಾರದು, ಓದದೆಯೂ ಮರುಳಾಗಬಾರದು, ಓದಿ ಹರಳಾಗಬೇಕು, ಹುರುಳಾಗಬೇಕು.

– ವಿ. ಕೃ. ಗೋಕಾಕ

ಪ್ರಜಾಪ್ರಭುತ್ವವನ್ನು ಸಶಕ್ತಗೊಳಿಸುವ ಬಗೆ

✍ **ನಿವೇದಿತಾ,** ತೃತೀಯ ಬಿ.ಸಿ.ಎ.

ಪ್ರಜಾಪ್ರಭುತ್ವವೆಂಬುದು ಮೂಲತಃ ಒಂದು ರಾಜಕೀಯ ಸಿದ್ಧಾಂತ. ರಾಜ್ಯ ಅಥವಾ ರಾಷ್ಟ್ರಗಳು ತಮ್ಮ ಸುಗಮ ಆಡಳಿತಕ್ಕೆ ಅಳವಡಿಸಿಕೊಳ್ಳುವ ಒಂದು ನಮೂನೆಯ ಪರಿಕಲ್ಪನೆ. ರಾಜಪ್ರಭುತ್ವ ಅಥವಾ ನಿರಂಕುಶಪ್ರಭುತ್ವಗಳಿಂದ ಬೇಸತ್ತ ಜನತೆ ಕಂಡುಕೊಂಡ ಜನಪರ ಆಡಳಿತದ ಒಂದು ವಿಧಾನ. ಇಲ್ಲಿ ಪ್ರಜೆಗಳೇ ಅಂತಿಮ ಮತ್ತು ಫಲಾನುಭವಿ ಮಾಧ್ಯಮ. ಇದುವರೆಗೆ ಜಗತ್ತು ಕಂಡುಕೊಂಡ ಅತ್ಯುತ್ತಮ ರಾಜಕೀಯ ಆಡಳಿತದ ನಮೂನೆಯೆಂಬುದು ಇದಕ್ಕಿರುವ ಹೆಗ್ಗಳಿಕೆ. ಪ್ರಜೆಗಳೇ ಪ್ರಭುಗಳಾಗಿ ತಮ್ಮ ಬೇಕು ಬೇಡಗಳನ್ನು ಕಂಡುಕೊಳ್ಳುವ ಸುಗಮ ಮಾರ್ಗ.

ಎಲ್ಲ ರಾಜಕೀಯ ದಿಗ್ಗಜರು ಮತ್ತು ಚಿಂತಕರು ಪ್ರಜಾಪ್ರಭುತ್ವ ವನ್ನು ಹಾಡಿ ಹೊಗಳಿದ್ದಾರೆ. ಏಕೆಂದರೆ ಬೇರಾವ ವ್ಯವಸ್ಥೆಯಲ್ಲೂ ಇರದ ಅತ್ಯಂತ ನಿರಪಾಯಕಾರೀ ಲಕ್ಷಣಗಳು ಇದರಲ್ಲಿವೆ ಎಂದು. ಪ್ರಜಾಪ್ರಭುತ್ವ ಮಾರ್ಗವು ಎಷ್ಟೇ ಕೆಟ್ಟದಿರಲಿ ಅದು ಉಳಿದೆಲ್ಲ ಮಾರ್ಗಗಳಿಗಿಂತ ಅತ್ಯಂತ ಶ್ರೇಷ್ಠ ಎಂಬುದು ನಿರ್ವಿವಾದ. ಅಂದರೆ ಪ್ರಜಾಪ್ರಭುತ್ವ ಸರಿಯಿಲ್ಲ ಎಂದು ಅನಿಸುವುದಾದರೆ ಅದಕ್ಕಿಂತ ಬೇರೆ ಮಾರ್ಗಗಳು ಇನ್ನೂ ಸರಿಯಿರುವುದಿಲ್ಲ ಎಂದೇ ಅರ್ಥ. ಆದರೆ ನಾವು ಈಗ ನೋಡುತ್ತಿರುವ ಈ ವಿಧಾನ ಅಥವಾ ರಾಜಕೀಯ ತತ್ತ್ವ ಯಾಕೋ ಸರಿಯಿಲ್ಲ ಎಂದು ಎಲ್ಲರಿಗೂ ಒಮ್ಮೆಯಾದರೂ ಅನಿಸೀತು.

ಹಾಗೆ ಅನಿಸುವುದರ ಹಿಂದೆ ಪ್ರಜಾಪ್ರಭುತ್ವದ ಸೋಲು ಇಲ್ಲ, ಅದರ ವಿಫಲತೆ ಎದ್ದು ಕಾಣುತ್ತದೆ. ಸೋಲು ಬೇರೆ; ವಿಫಲತೆ ಬೇರೆ. ಸೋಲು ಹತಾಶೆಯನ್ನೂ, ದುಃಖವನ್ನೂ ಒಟ್ಟಿಗೆ ತರುತ್ತದೆ. ಆದರೆ ವಿಫಲತೆಯು ಗೆಲ್ಲಲು ಇನ್ನೂ ಅವಕಾಶ ಇರುವುದನ್ನು ಖಾತ್ರಿಪಡಿಸುತ್ತದೆ. ವಿಫಲತೆಯು ಸಫಲತೆಯ ಮೊದಲ ಮೆಟ್ಟಿಲು ಎಂದೇ ಎಲ್ಲರೂ ತಿಳಿದಿರುವ ಸತ್ಯ. ವಿಫಲತೆಯು ಅನೇಕ ಅವಕಾಶಗಳನ್ನು ಕೊಡುತ್ತದೆ. ಅವನ್ನು ಗಮನಿಸುತ್ತಾ ಯಾವುದು ಸೂಕ್ತ ಎಂಬುದನ್ನು ಆಯ್ಕೆ ಮಾಡಿಕೊಂಡಾಗ ಸಫಲತೆಯ ದಾರಿ ಕಾಣಿಸಬಹುದು.

ಜಗತ್ತಿನ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿವೆ. ಕಾರಣ, ಅದು ಇರುವುದರಲ್ಲಿ ಅತ್ಯುತ್ತಮ ರಾಜಕೀಯ ಪ್ರಣಾಳಿಕೆ. ಭಾರತವನ್ನು ಬಹುದೊಡ್ಡ ಪ್ರಜಾಪ್ರಭುತ್ವ ದೇಶವೆಂದು ಹೆಮ್ಮೆಯಿಂದ ಗುರುತಿಸಲಾಗುತ್ತದೆ. ಜನಸಂಖ್ಯೆಯ ದೃಷ್ಟಿಯಿಂದ ಈ ಗೌರವ ಲಭಿಸಿದೆ. ಅಮೆರಿಕಾ ಕೂಡ ಪ್ರಜಾಪ್ರಭುತ್ವ ದೇಶ. ಅಲ್ಲಿರುವುದು ಅಧ್ಯಕ್ಷೀಯ ಮಾದರಿ ಸರಕಾರ. ನಮ್ಮದು ಸಂಸದೀಯ ಮಾದರಿ ಸರಕಾರ. ಇಷ್ಟು ವ್ಯತ್ಯಾಸ ಬಿಟ್ಟರೆ ಬೇರೇನಿಲ್ಲ. ಆದರೆ ನಮ್ಮಲ್ಲಿ ಪ್ರಜಾಪ್ರಭುತ್ವವನ್ನು ಕೇವಲ ಪ್ರತಿನಿಧಿ ಪ್ರಭುತ್ವವಾಗಿ ಪರಿಣಮಿಸಿದೆ. ಇದಕ್ಕೆ ಕಾರಣ, ನಮ್ಮಲ್ಲಿ ಸಾಕ್ಷರತೆ ಹೆಚ್ಚು ಇಲ್ಲದಿರುವುದು. ಪ್ರಜಾಪ್ರಭುತ್ವ ಯಶಸ್ವಿಯಾಗಲು ವಿದ್ಯಾವಂತರು ಹೆಚ್ಚು ಇರಬೇಕು. ಇಲ್ಲದಿದ್ದರೆ ಅದು ಇಂದು ನಮ್ಮಲ್ಲಿ ಆಗಿರುವಂತೆ, ಕೇವಲ ಪ್ರತಿನಿಧಿಗಳ ಖಾಸಗಿ ದರ್ಬಾರಾಗುತ್ತದೆ. ಹೆಸರಿಗೆ ಪ್ರಜಾಪ್ರಭುತ್ವ, ಆದರೆ ನಿಜವಾಗಿ ನೋಡಿದರೆ ರಾಜಪ್ರಭುತ್ವದಂತೆ ಭಾಸವಾಗುವುದು.

ಅಮೆರಿಕಾದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಲು ವಿದ್ಯೆ ಪ್ರಮುಖ ಕಾರಣ. ಅಲ್ಲಿ ನಡೆಯುವ ಚುನಾವಣೆಗಳು ತುಂಬ ವಿವೇಚನೆಯಿಂದ ಕೂಡಿರುತ್ತವೆ. ನಮ್ಮಲ್ಲಿ ಚುನಾವಣೆಗಳು ಕೇವಲ ಕಣ್ಣೊರೆಸುವ ಕಸರತ್ತಾಗಿದೆ. ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸಶಕ್ತಗೊಳಿಸಲು ಅಂದರೆ ಅದಕ್ಕೆ ಶಕ್ತಿ ತುಂಬಲು ಕೆಳಗಿನ ಅಂಶಗಳನ್ನು ವೃದ್ಧಿಸಿಕೊಳ್ಳಬೇಕು:

1. ಸಾಕ್ಷರತೆ
2. ಮತವನ್ನು ಮಾರಿಕೊಳ್ಳದೇ ವಿವೇಚನೆಯಿಂದ ಚಲಾಯಿಸುವುದು.
3. ಸೂಕ್ತ ಮತ್ತು ಒಳ್ಳೆಯ ಮಂದಿ ರಾಜಕಾರಣವನ್ನು ಪ್ರವೇಶಿಸುವುದು.
4. ಚುನಾವಣೆಗಳು ನಡೆಯುವ ವಿಧಾನದಲ್ಲಿ ಮಾರ್ಪಾಟು ಅಥವಾ ಸುಧಾರಣೆ.
5. ಸುಳ್ಳು ಆಶ್ವಾಸನೆಗಳನ್ನು ನೀಡುವ ರಾಜಕಾರಣಿಗಳ ಅನರ್ಹತೆ.
6. ಮತ–ಮಾನ್ಯಗಳನ್ನು ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡಿಸುವುದು.
7. ಬೇನಾಮಿ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು.
8. ಕಪ್ಪು ಹಣದ ನಿಯಂತ್ರಣ ಮತ್ತು ಅಭಿವೃದ್ಧಿಗೆ ಬಳಸುವುದು.
9. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜನಸಾಮಾನ್ಯರಲ್ಲಿ ಪ್ರಚುರಪಡಿಸುವುದು.
10. ಸಂವಿಧಾನವನ್ನು ಗೌರವಿಸುವುದು ಮತ್ತು ಅದರಂತೆ ವರ್ತಿಸುವುದು.

ಮೇಲಿನ ಈ ಹತ್ತು ಅಂಶಗಳನ್ನು ಸಮರ್ಪಕವಾಗಿ ಮತ್ತು ಸಮಂಜಸವಾಗಿ ಅಳವಡಿಸಿಕೊಂಡಾಗ ನಮ್ಮ ದೇಶದ

ಪ್ರಜಾಪ್ರಭುತ್ವವನ್ನು ಬಲಗೊಳಿಸಬಹುದಾಗಿದೆ. ಜೊತೆಗೆ ರಾಷ್ಟ್ರದ ನಿಜವಾದ ಏಳಿಗೆಗೆ ಸಂಕಲ್ಪ ತೊಡಬಹುದಾಗಿದೆ.

ಒಂದು ದೇಶ ನಿಜವಾಗಿಯೂ ಸಶಕ್ತವಾಗಿರಬೇಕಾದರೆ ಅಲ್ಲಿನ ಮಾನವ ಸಂಪನ್ಮೂಲ ಸದ್ಬಳಕೆಯಾಗುತ್ತಿರಬೇಕು. ಜೊತೆಗೆ ರಾಜಕೀಯ-ಆರ್ಥಿಕ-ಸಾಮಾಜಿಕ ರಂಗಗಳಲ್ಲಿ ಅತ್ಯುತ್ಕೃಷ್ಟವಾದ ಕೊಡುಗೆಗಳು ಲಭಿಸುತ್ತಿರಬೇಕು. ಮನುಷ್ಯ ಮೂಲತಃ ರಾಜಕೀಯ ಜೀವಿ ಎಂದು ಬಹಳ ಹಿಂದೆಯೇ ಅರಿಸ್ಟಾಟಲ್ ಹೇಳಿದ್ದಾನೆ. ಹಾಗೆಂದರೆ ನನಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲವೆಂದು ಸುಮ್ಮನಿರುವಂತಿಲ್ಲ. ನಾನೂ ವ್ಯವಸ್ಥೆಯ ಒಂದು ಭಾಗ ಮಾತ್ರವಲ್ಲ, ನನ್ನನ್ನೂ ಒಳಗೊಂಡು ಈ ಸಮುದಾಯದ ಹಿತ ಅವಲಂಬಿತವಾಗಿರುತ್ತದೆ. ಯಾರೂ ಮುಖ್ಯರಲ್ಲ ಮತ್ತು ಯಾರೂ ಅಮುಖ್ಯರಲ್ಲವೆಂದು ಭಾವವು ಸದಾ ಹಿನ್ನೆಲೆಯಲ್ಲಿ ತಾಂಡವವಾಡುತ್ತಿರುತ್ತದೆ. ನಾನು ಸುಮ್ಮನಿರಬಹುದು. ಆದರೆ ನನ್ನ ನಿರ್ಲಿಪ್ತತೆಯೂ ಪ್ರಜಾಪ್ರಭುತ್ವದಲ್ಲಿ ಗಣನೆಗೆ ಬರುತ್ತದೆ. ಹಾಗಾಗಿ, ಅಲಿಪ್ತತೆ ಕೂಡ ಪ್ರಜಾಸತ್ತೆಯ ಬಹುಮುಖ್ಯ ಭಾಗ. ಭಾರತವು ಅಲಿಪ್ತ ನೀತಿಯನ್ನು ತನ್ನ ಅಜೆಂಡಾದಲ್ಲಿ ಅಳವಡಿಸಿಕೊಂಡಿದೆ. ಹಾಗೆಂದರೆ, ಮೇಲೆ ಬಿದ್ದು ಯಾವ ರಾಷ್ಟ್ರಗಳ ಸ್ವಂತ ಆಡಳಿತ ಮತ್ತು ಅಂತರಾಳಕ್ಕೆ ಕೈ ಹಾಕದೇ ಸುಮ್ಮನಿರುವುದು ಎಂದರ್ಥ. ಹೀಗೆ ಪ್ರಜಾಪ್ರಭುತ್ವವು ಮೇಲು ನೋಟಕ್ಕೆ ಇರುವಷ್ಟು ಅಶಕ್ತವಾದುದಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

ಪ್ರಜಾಪ್ರಭುತ್ವದ ಪ್ರಮುಖ ಮೂರು ಆಶಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವಗಳು ಇನ್ನಾವ ರಾಜಕೀಯ ವ್ಯವಸ್ಥೆಯಲ್ಲೂ ಕಾಣಸಿಗುವುದಿಲ್ಲ. ಒಂದಿದ್ದರೆ ಇನ್ನೊಂದಿರುವುದಿಲ್ಲ. ಸಮಾಜವಾದ ಅಥವಾ ಸಮತಾವಾದದಲ್ಲಿ ಸಮಾನತೆಯನ್ನು ಕಾಣುತ್ತೇವೆ. ಆದರೆ ಸ್ವಾತಂತ್ರ್ಯವನ್ನಲ್ಲ. ಸ್ವಾತಂತ್ರ್ಯವಿರದ ಸಮಾನತೆಗೆ ಅರ್ಥವಿಲ್ಲ. ಜೊತೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯು ಸಾಮಾಜಿಕ ನ್ಯಾಯದ ಅಡಿಪಾಯದ ಮೇಲೆ ನಿಂತಿದೆ. ಹೀಗಾಗಿ ಅತ್ಯಂತ ತಳವರ್ಗದ ಜನರಿಗೂ ಇಲ್ಲಿ ನ್ಯಾಯ ಸಿಗುತ್ತದೆ. ಸಂವಿಧಾನದತ್ತವಾದ ಅಧಿಕಾರವನ್ನು ಚಲಾಯಿಸಿ ಇದನ್ನು ಆಗು ಮಾಡಬಹುದಾಗಿದೆ.

ಪ್ರಜಾಪ್ರಭುತ್ವವನ್ನು ಬಲಗೊಳಿಸಬೇಕಾದರೆ, ಅದರ ಸದಾಶಯಗಳನ್ನು ಅನುಷ್ಠಾನಕ್ಕೆ ತರುವ ಸರಕಾರ ಅತ್ಯಂತ ಅವಶ್ಯ. ಸರಕಾರಗಳು ಪ್ರಜಾಪ್ರಭುತ್ವದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ತಮ್ಮ ಪ್ರಣಾಳಿಕೆಗಳಲ್ಲಿ ಅವುಗಳು ಘೋಷಿಸುವ ವಿಷಯಗಳನ್ನು ಜಾರಿಗೆ ತರುವ ದೃಢತೆ ಇರಬೇಕು. ಪ್ರಜೆಗಳೇ ಪ್ರಭುಗಳಾಗಿರುವುದು ಎಂದರೆ ಅವರ ಕೈಯಲ್ಲಿ ಸರಕಾರದ ಜನಪ್ರತಿನಿಧಿಗಳ ವರ್ತನೆಯನ್ನು ನಿಯಂತ್ರಿಸುವ ಅಧಿಕಾರ ಇರುತ್ತದೆ ಎಂದರ್ಥ. ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಲ್ಲಿ ಆರಿಸಿ ಕಳಿಸುವ ಅಭ್ಯರ್ಥಿಗಳು ಸಮರ್ಥರಾಗಿರಬೇಕು ಅಂದರೆ ಪ್ರಜೆಗಳ ಆಶೋತ್ತರಗಳಿಗೆ ಸ್ಪಂದಿಸುವವರಾಗಿರಬೇಕು. ಮುಖ್ಯವಾಗಿ ಅವರು ಜನಸೇವಕರಾಗಿರಬೇಕು. ಸೇವೆಯೇ ಉಸಿರಾಗಿರುವವರಾಗಿರಬೇಕು, ಇಲ್ಲದಿದ್ದರೆ ಪ್ರಜಾಪ್ರಭುತ್ವ ವಿಫಲವಾಗುತ್ತದೆ.

ಇದಕ್ಕಾಗಿ ವ್ಯಾಪಕ ಪ್ರಮಾಣದಲ್ಲಿ ಜನರನ್ನು ಒಗ್ಗೂಡಿಸುವ ಮತ್ತು ಅವರನ್ನು ವಿವೇಕವಂತರನ್ನಾಗಿಸುವ ಜವಾಬ್ದಾರಿಯು ಶೈಕ್ಷಣಿಕ ರಂಗದಲ್ಲಿ ಕೆಲಸ ಮಾಡುವವರಲ್ಲಿ ಇರಬೇಕಾಗುತ್ತದೆ. ದೃಶ್ಯ ಮಾಧ್ಯಮಗಳು ಅತ್ಯಂತ ಪರಿಣಾಮಕಾರಿಯಾಗಿ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುವ ಅವಕಾಶವನ್ನು ಪಡೆದಿರುತ್ತವೆ. ಜನರೇ ಜನಾರ್ದನರಾಗಿರುವ ಸಮಾಜದಲ್ಲಿ ಎಲ್ಲರೂ ಶಿಕ್ಷಿತರಾಗಿರುವುದಿಲ್ಲ. ಕೆಲವರು ಹಲವರನ್ನು ಅವಲಂಬಿಸಿರುತ್ತಾರೆ. ಇದರಿಂದ ಆ ಹಲವರು ಸರಿಯಾದ ಶಿಕ್ಷಣವನ್ನೂ ತಿಳಿವಳಿಕೆಯನ್ನೂ ನೀಡುವವರಾಗಿರಬೇಕು. ಅದರಲ್ಲೂ ಸಿನಿಮಾ, ದೂರದರ್ಶನ ಮೊದಲಾದ ಮಾಧ್ಯಮಗಳು ಪ್ರಜಾಪ್ರಭುತ್ವವನ್ನು ಸಶಕ್ತಗೊಳಿಸುವ ಎಲ್ಲ ಅರ್ಹತೆ ಮತ್ತು ಯೋಗ್ಯತೆಗಳನ್ನು ಸಹಜವಾಗಿ ಹೊಂದಿರುತ್ತವೆ. ಇವು ಜನರನ್ನು ಹೇಗೆ ಬೇಕಾದರೂ ದಿಕ್ಕು ತಪ್ಪಿಸಬಹುದು. ಈಗ ಆಗಿರುವುದಾದರೂ ಏನು? ಇದೇ ಅಲ್ಲವೇ?

ಇನ್ನು ಪತ್ರಿಕಾ ಮಾಧ್ಯಮದ ಜವಾಬ್ದಾರಿ ತುಂಬ ದೊಡ್ಡದು. ಪ್ರಜಾಪ್ರಭುತ್ವವನ್ನು ಶಕ್ತಿಶಾಲಿಯಾಗಿಸಲು ಇದನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳಬಹುದು. ಪತ್ರಿಕೆಯೆಂದರೆ ಕೇವಲ ಸುದ್ದಿ ಮೀಮಾಂಸೆ ಮಾತ್ರವಲ್ಲ, ಲೇಖನಗಳ ಸಂಚಯ. ಜನಮಾನಸದ ಕೈಗನ್ನಡಿ. ಮಂದಿಯ ಅಂತರಾಳವೇ ಅದರಲ್ಲಿ ಹುದುಗಿರುತ್ತದೆ. ಓದುಗರ ಅನಿಸಿಕೆಗಳಿಗೆ ಬೆಲೆಯಿದೆ. ಸಾಪ್ತಾಹಿಕ ಪುರವಣಿಗಳ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಬಹುದು. ಸಮೀಕ್ಷೆ ನಡೆಸಿ ಅಂದಾಜಿಸಬಹುದು. ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದು ಪತ್ರಿಕೆಯನ್ನು ಕರೆಯುವುದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ. ಶಾಸಕಾಂಗ ಮತ್ತು ಕಾರ್ಯಾಂಗದ ಕಾರ್ಯ ವೈಖರಿಯನ್ನು ಇದು ವಿಮರ್ಶಿಸುತ್ತದೆ. ಹಾಗಾಗಿ ಪತ್ರಿಕಾಂಗವನ್ನು ಸಮರ್ಪಕವಾಗಿ ಬಳಸಿಕೊಂಡು ಪ್ರಜಾಪ್ರಭುತ್ವವನ್ನು ಬಲಗೊಳಿಸಬಹುದು.

ಇನ್ನು ಇದನ್ನು ನೋಡುವ ಕಣ್ಣುಗಳು ಬೇರೆಯದೇ ಆಗಬೇಕು. ಪ್ರಜಾಪ್ರಭುತ್ವವೆಂದರೆ ಕೇವಲ ರಾಜಕಾರಣ ಎಂದಷ್ಟೇ ನೋಡಬಾರದು. ರಾಜಕಾರಣವಿಲ್ಲದಿದ್ದರೆ ಅರಾಜಕತೆ ಉಂಟಾಗಿ ದೇಶವು ದಿವಾಳಿ ಏಳುತ್ತದೆ. ಸುಮ್ಮನೆ ರಾಜಕಾರಣಿಗಳನ್ನು ಬಯ್ಯುತ್ತಾ ಕೂರುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಒಬ್ಬರನ್ನು ಬಯ್ಯುವಾಗ ನಮ್ಮ ಅಂತರಂಗವನ್ನು ನೋಡಿಕೊಳ್ಳಬೇಕಾಗುತ್ತದೆ. ಪ್ರಪಂಚದಲ್ಲಿ ಎಲ್ಲರೂ ಒಂದೇ ಮತ್ತು ಎಲ್ಲರೂ ಒಬ್ಬರಲ್ಲಿ ಮಿಳಿತಗೊಂಡಿರುತ್ತಾರೆ. ಆಗಸವನ್ನು ನೋಡಿ ಉಗಿದರೆ ನಮ್ಮ ಮುಖಕ್ಕೆ ಬೀಳುತ್ತದಲ್ಲ ಹಾಗೆ. ಹಾಗಾಗಿ ಟೀಕಿಸುವ ಮುನ್ನ ಮತ್ತು ದೂರೀಕರಿಸುವ ಮುನ್ನ ನಮ್ಮನ್ನು ನಾವು ನೋಡಿಕೊಳ್ಳಬೇಕು. ನಾವು ಸರಿಯಾಗಿದ್ದೇವೆಯೇ? ಎಂದು ವಿಚಕ್ಷಿಸಿಕೊಳ್ಳಬೇಕು.

ನಮ್ಮೊಳಗಿನ ಪ್ರೀತಿ ಮತ್ತು ಪ್ರಾಮಾಣಿಕತೆಗಳಿಂದ ಪ್ರಜಾಪ್ರಭುತ್ವವನ್ನು ಇನ್ನಷ್ಟು ಸದೃಢಗೊಳಿಸಬಹುದು. ವಿನಾಕಾರಣ ದ್ವೇಷಿಸುವುದನ್ನು ಬಿಡಬೇಕು. ನಾವು ಮೊದಲು ಪ್ರಾಮಾಣಿಕರಾಗಿರಬೇಕು. ಕರ್ತವ್ಯಗಳನ್ನು ಮರೆತು ಹಕ್ಕುಗಳನ್ನಷ್ಟೇ ಕೇಳುತ್ತಾ ಕೂತರೆ ಪ್ರಜಾಪ್ರಭುತ್ವವು ಯಶಸ್ವಿಯಾಗುವುದಿಲ್ಲ. ನಾಗರಿಕ ಕರ್ತವ್ಯಗಳನ್ನು ಮರೆಯಬಾರದು. ರಸ್ತೆಗಳಿರುವುದೇ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ಓಡಿಸಲು ಎಂದು ನಾವು ತಿಳಿದಿದ್ದೇವೆ! ಇದೊಂದು ಸಾಕು; ನಮ್ಮ ವರ್ತನೆಯನ್ನು ಅರಿಯಲು. ಕಾಲಕಾಲಕ್ಕೆ ಪ್ರಾಮಾಣಿಕವಾಗಿ ತೆರಿಗೆ ಕಟ್ಟಬೇಕು. ತೆರಿಗೆಯನ್ನು ವಂಚಿಸಲೆಂದೇ ವಿದ್ಯೆ ಕಲಿಯುತ್ತಿಲ್ಲವೇ? ಈಗ! ಇದು ತಪ್ಪು.

ಹಾಗಾಗಿ ಪ್ರಾಮಾಣಿಕ ಬದುಕು ಮತ್ತು ಸ್ಪಂದನಗಳಿಂದ ಪ್ರಜಾಪ್ರಭುತ್ವವನ್ನು ಗೆಲ್ಲಿಸಬಹುದು ಎಂದು ಹೇಳಲು ಬಯಸುವೆ.

●

ಮನಸ್ಸು ಕಲ್ಲಾದಾಗ

ಏನು ಹೇಳಿದರೇನು?
ಮನಸ್ಸು ಕಲ್ಲಾದಾಗ
ವ್ಯಥೆಯು ಉಕ್ಕಿ
ಭಾವನೆಗಳು ಮಂಕಾದಾಗ
ಏನು ಹೇಳಿದರೇನು ?

ತಮಟೆ ಸೌಂಡು ನಗಾರಿ ಬಾರಿಸಿದರೇನು?
ಮೊಗವು ಬಾಡಿದಾಗ
ಹೇಳಲಾಗುತ್ತಿಲ್ಲ, ಕಲ್ಲು ಕರಗುತ್ತಿಲ್ಲ
ಮನಸ್ಸು ಸೊರಗಿತಲ್ಲ

ಏನು ಹೇಳಿದರೇನು?
ಮನಸ್ಸು ಕಲ್ಲಾದಾಗ
ಒಲುಮೆ ಉಕ್ಕಿ ಬಂದರೇನು?
ಕುಲುಮೆಯಲ್ಲಿ
ಬೆಂಕಿ ಹಚ್ಚಿದಾಗ

ಏನು ಹೇಳಿದರೇನು?
ಮನಸ್ಸು ಕಲ್ಲಾದಾಗ
ಮುಗುಳು ನಕ್ಕರು
ಮಂದಹಾಸ
ನಗುವ ಬೀರದಾಗ...

✍ **ಸಿ. ಸುರೇಶ,** ದ್ವಿತೀಯ ಬಿ.ಎ.

ಮತದಾನ ನಮ್ಮ ಹಕ್ಕು

✍ **ಪೂಜಾ,** ಪ್ರಥಮ ಬಿ.ಎಸ್ಸಿ.

ಕನ್ನಡದ ಮಹಾನ್ ಕವಿ, ಎಂ. ಗೋಪಾಲಕೃಷ್ಣ ಅಡಿಗರು 1940ರಲ್ಲಿ ''ಕಟ್ಟುವೆವು ನಾವು'' ಕವನ ಬರೆದರು. ಅಂದರೆ ಸ್ವಾತಂತ್ರ್ಯ ಸಿಗುವ ಮೊದಲು ಈ ದೇಶ ಹಾಲು ಮತ್ತು ಜೇನು ಹರಿಯುವ ದೇಶ ಆಗಿ ಬಿಡುತ್ತದೆ ಎಂಬ ಭಾವನೆ ಅವರಿಗಿತ್ತು. ದೇಶದುದ್ದಕ್ಕೂ ಗಾಂಧೀಜಿಯ ಜೊತೆಗೆ ಕೋಟಿಗಟ್ಟಲೆ ಬಿಳಿ ಟೋಪಿಯ ಜನರೇ ಕಾಣುತ್ತಿದ್ದರು. ವಂದೇ ಮಾತರಂ, ಭೋಲೋ ಭಾರತ್ ಮಾತಾ ಕೀ ಜೈ ಅಂದದ್ದೇ ಅಂದದ್ದು. ಈ ಕೋಟಿಗಟ್ಟಲೆ ಟೋಪಿಗಳ ನಡುವೆ ವಿಷ ಬೀಜಗಳು ಇದ್ದಾವೆಂದು ಯಾರಿಗೆ ತಾನೇ ಗೊತ್ತಿತ್ತು!

ಎಂ. ಗೋಪಾಲಕೃಷ್ಣ ಅಡಿಗರ ಕವನ ಹೀಗಿದೆ, ''ಕಟ್ಟುವೆವು ನಾವು ಹೊಸ ನಾಡೊಂದನು ರಸದ ಬೀಡೊಂದನು'' ಎಂಬುದು ಮೊದಲ ಸಾಲು. ಎಂತಹ ಆಸೆ ಇತ್ತು ಆ ಕಾಲದ ಜನರಿಗೆ. ಸಮಸ್ಯೆಗಳು ಇರಲಿಲ್ಲವೆಂದಲ್ಲ. ಅದರ ಅರಿವು ಅವರಿಗಿತ್ತು. ''ಜಾತಿ ಮತ ಭೇದಗಳು ಕಂದಕವು ಸುತ್ತಲೂ... ರೂಢಿ ರಾಕ್ಷಸನು ಅರಸುಗೈಯುವನು...'' ಎಂದು. ಆದರೆ ಅವರ ಧೈರ್ಯ ಎಷ್ಟಿತ್ತೆಂದರೆ ''ನಾವು ಹಿಂದೆಗೈವೆವೆ: ವೀರ ತರುಣರು ನಾವು. ಕುಟ್ಟಿ ಪುಡಿ ಮಾಡುವೆವು ಕೋಟೆಗಳನು... ತಡೆವವರು ಬನ್ನಿರಿ, ಹೊಡೆವವರು ಬನ್ನಿರಿ, ಕೇಡು ನುಡಿವ ಸ್ವಾರ್ಥ ಬಗೆವ ಕೆಡುಕು ಜನರೇ ಬನ್ನಿರಿ !... ನಿಮ್ಮೆಲ್ಲರನು ತೊಡೆದು ನಿಮ್ಮ ಮಸಣದ ಮೇಲೆ ಕಟ್ಟುವೆವು ಹೊಸ ನಾಡೊಂದನು – ಸುಖದ ಬೀಡೊಂದನು !''

ಇಂದಿನ ರಾಜಕಾರಣಿಗಳು ನಮ್ಮನ್ನು ಎಂತಹ ದುಃಸ್ಥಿತಿಗೆ ತಂದು ನಿಲ್ಲಿಸಿದ್ದಾರೆ ಎಂದು ಯೋಚಿಸಿದರೆ, ಅಕ್ಷರ ಜ್ಞಾನ ಏನೂ ಇಲ್ಲದ ಈ ದುರಾತ್ಮ ರಾಜಕಾರಣಿಗಳು ಮಾಡಿದ ಕೆಲಸವಾದರೂ ಏನು? ಎಂಬ ಮಟ್ಟಿಗೆ ನಾವು ಜನರು ಕಂಗಾಲಾಗುತ್ತೇವೆ. ಬಿಸಿಲಿನಲ್ಲಿ ನಮ್ಮನ್ನು ದೂಡಿ, ಮರದಡಿಯಲಿ ತಾವು ಕುಳಿತು, ಮಾತು, ಮಾತು, ಮಾತು, ಮಾತಿನ ದಾಟಿಯಲ್ಲೇ ಕರಾಮತ್ತು ನಡೆಸುವರು. ನನ್ನ ಪ್ರಕಾರ ಈ ರಾಜಕಾರಣಿಗಳು ಮಾಡಿದ್ದು ಇದನ್ನೇ. ಮಾತಿನ ಮೂಲಕ ಮಂಟಪಗಳನ್ನು ಗಾಳಿಗೋಪುರಗಳನ್ನು ಕಟ್ಟುತ್ತಾ ಕಟ್ಟುತ್ತಾ ನಮ್ಮ ಮೈ ಚರ್ಮವನ್ನು ಸುಲಿದು ಕಂಬಳಿಗಳನ್ನು ನೇಯ್ದು (ಭರ್ಜರಿ ತೆರಿಗೆ ಹಾಕಿ, ಅದನ್ನು ಅವರೇ ನುಂಗಿ) ಮಾರಾಟ ಮಾಡಿದವರು. ನಾವು ಎಲ್ಲಿಯವರೆಗೂ ಮೈಮರೆತು ಕುಳಿತಿದ್ದೇವೆ ಎಂದರೆ ನಮ್ಮ ಮೈ ಚರ್ಮ ಸುಲಿದರೂ ನಮಗೆ ಗೊತ್ತಾಗಲಿಲ್ಲ.

ಇಂದಿಗೂ ನಾವು ಕುರಿಗಳಾಗಿಯೇ ಉಳಿದೆವು. ನಾವು ಬದಲಾಗಲಿಲ್ಲ. ಈ ದುಷ್ಟ ರಾಜಕಾರಣಿಗಳ ಬಗ್ಗೆ ನಾವು ಎಚ್ಚೆತ್ತುಕೊಳ್ಳಲೇ ಇಲ್ಲ. ಈಗ 2019. ಸ್ಥಿತಿ ಹಾಗೆಯೇ ಇದೆ, ಬದಲಾಗುವ ಚಿಕ್ಕ ಕುರುಹೂ ಕಾಣಿಸುತ್ತಿಲ್ಲ. ಈ ದೇಶದ ಜನಸಂಖ್ಯೆ 129 ಕೋಟಿ. ಇಲ್ಲಿನ ನದಿಗಳಲ್ಲಿರುವ ನೀರು, ನದಿಯ ದಡದಲ್ಲಿರುವ ಮರಳು, ದಟ್ಟ ಕಾಡಿನ ಮರಗಳು, ಭೂಮಿಯೊಳಗಿರುವ ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಕಲ್ಲಿದ್ದಲು, ಸರಕಾರದ ವಶದಲ್ಲಿರುವ ಭೂಮಿ... ಇವೆಲ್ಲವೂ ನಮ್ಮ ಆಸ್ತಿ ಅಂದರೆ 129 ಕೋಟಿ ಭಾರತೀಯರ ಆಸ್ತಿ. ಅಲ್ಲವೆ?

ನಾವು ಗಮನಿಸಬೇಕಾದ ವಿಷಯಗಳು ಸಾವಿರಾರು. ಅದರಲ್ಲಿ ಒಂದು ವಿಷಯ ಹೀಗಿದೆ, ನಮ್ಮ ಕ್ಷೇತ್ರದ ಎಂಎಲ್ಎ, ಎಂಪಿ, ಮಂತ್ರಿಯು ಚುನಾವಣೆಗೆ ನಿಲ್ಲುವ ಮೊದಲು ಅವನ ಆಸ್ತಿ ಎಷ್ಟಿತ್ತೆಂದು ಗಮನಿಸಿ. ದಯವಿಟ್ಟು ಗಮನಿಸಿ. ಈಗ ಅವನ ಆಸ್ತಿ ಎಷ್ಟಾಗಿದೆ ಎಂದು ನೋಡಿ. ನೀವೇ ನಿಮ್ಮ ಅಭಿಪ್ರಾಯ, ಅನಿಸಿಕೆಗಳೊಂದಿಗೆ ಚರ್ಚಿಸಿ. ಈ ಆಸ್ತಿ ಯಾರದ್ದು ? ನೀವೇ ಕಟ್ಟಿದ ಕೋಟಿಗಟ್ಟಲೆ ತೆರಿಗೆ ಹಣವಲ್ಲವೇ ಇದು? ಇಂತಹವನು ನಮ್ಮನ್ನು ಆಳಬೇಕೇ? ವಿಚಾರ ಮಾಡಿ ಇದಕ್ಕೆ ಕಾರಣ ಏನು? ನಾವು, ನಾವು ಜನರೂ ಭ್ರಷ್ಟರಾಗಿದ್ದೇವೆ ಅಲ್ಲವೆ?

ನಾವು ಅಭ್ಯರ್ಥಿಯ ಗುಣ, ನಡತೆ ನೋಡಿ ಮತ ಹಾಕಬೇಕು. ಕೆಟ್ಟ ಪಕ್ಷದಲ್ಲಿ ಒಳ್ಳೆಯವನು ನಿಂತರೂ ಮತ ಹಾಕಬಾರದು. ಒಳ್ಳೆಯ ಪಕ್ಷದಲ್ಲಿ ನಿಂತ ಕೆಟ್ಟವನಿಗೂ ಇದು ಅನ್ವಯಿಸುತ್ತದೆ. ಹಿನ್ನೆಲೆ ಕಂಡು ಒಳ್ಳೆಯ ಪಕ್ಷೇತರ ಅಭ್ಯರ್ಥಿಗೆ ಮತ ಹಾಕೋಣ. ಅವರು ಸೋತರೂ ನಮ್ಮ ಮತ ಗೆಲ್ಲುತ್ತದೆ. ಒಳ್ಳೆಯ ಅಭ್ಯರ್ಥಿಯ ಪರವಾಗಿ ಇರುವ ಮತ ತೃಪ್ತಿ ನೀಡುತ್ತದೆ. ಹೀಗೆ ಮಾಡುವುದರಿಂದ ಲಕ್ಷ ಮತ ಪಡೆಯುವ ಒಬ್ಬ ದೊಡ್ಡ ಕಳ್ಳ ಸೋತು ಲಕ್ಷದ ಒಂದು ಮತ ಪಡೆಯುವ ಸಣ್ಣ ಕಳ್ಳ ಗೆಲ್ಲುತ್ತಾನೆ. ಕ್ರಮೇಣವಾಗಿ ನಮ್ಮ ರಾಜಕೀಯ ಸಾಧನೆಯ ಗುರಿಯತ್ತ ಪ್ರಯಾಣ ಬೆಳೆಸುತ್ತದೆ.

ನಮ್ಮ ದೇಶದಲ್ಲಿ ರಾಜಕಾರಣಿಗಳು ಇದುವರೆಗೆ ನಡೆಸಿದ ಸಾವಿರಾರು ಕೋಟಿ ರೂಪಾಯಿಗಳ ಲೂಟಿಯ ಕತೆಗಳನ್ನು ನಾನು ಹೇಳುತ್ತೇನೆ. ಲೂಟಿ ಮಾಡುವುದರಲ್ಲಿ ಎಲ್ಲಾ ಪಕ್ಷಗಳು ಒಂದೆ. ನಮ್ಮ ದೇಶದಲ್ಲಿ ದಂಧೆಗಳಲ್ಲಿ ಭಾಗಿಯಾಗದ ಪಕ್ಷಗಳೇ ಇಲ್ಲ. ಹೀಗಾಗಿ ಭಾರತ ದೇಶದ ಜವಾಬ್ದಾರಿಯುತ ಪ್ರಜೆಗಳಾಗಿ ನಾವು ರಾಜಕಾರಣಿಗಳು ಲೂಟಿ ಮಾಡುವ ರೀತಿಯನ್ನು ಗಮನಿಸಬೇಕು. ಅದರ ಬಗ್ಗೆ ಊಹೆ ಮಾಡುವ ಹೊರತಾಗಿ ಸತ್ಯ ಸಂಗತಿಗಳನ್ನು ಹುಡುಕಲು ಪ್ರಯತ್ನಿಸಬೇಕು. ಇಂದು ರಾಜಕಾರಣಿಗಳು

ದೇಶವನ್ನು ಮುಂದುವರಿಯುತ್ತಿರುವ ದೇಶವಾಗಿ ನಿಲ್ಲಿಸಿ ದೇಶದ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ನಟಿಸುತ್ತಿದ್ದಾರೆ. ಇದನ್ನು ಕ್ಷಮಿಸದ ಪ್ರತಿಯೊಬ್ಬ ನಾಗರಿಕರೂ ಭಾರತವನ್ನು ಮುಂದುವರಿದ ದೇಶವಾಗಿ ನಿರ್ಮಿಸುವಲ್ಲಿ ಶ್ರಮಿಸುವುದು ಅಗತ್ಯ. ಏಕೆಂದರೆ ನಮ್ಮ ರಾಜಕೀಯದ ರಾಜಕಾರಣಿಗಳಿಂದ ದೇಶ ರಚಿತವಾಗಲಿಲ್ಲ, ನಮ್ಮ ದೇಶ ನಮ್ಮಿಂದ ರಚಿತವಾದದ್ದು, ಅದರ ಅಭಿವೃದ್ಧಿ ನಮ್ಮ ಕರ್ತವ್ಯ.

ಭಾವ - ಕಿರಣಗಳು

ಭಾವನೆಗಳ ಬೆನ್ನೇರಿ, ಭಾಷೆಗಳ ಬೆಂಬಲದಿ
ಆಶಯದ ಕಿರಣಗಳು, ಲೇಖನದಿ ಮೂಡಲಿ......
ಆಗಸವು ಸಿಗದಿರಲು, ಕನಸುಗಳಿಗೆ ಬರವಿರದೆ
ಸಾಸಿವೆ ಬದುಕಿನಲಿ, ಆಶಯದ ಕಿರಣಗಳು
ಲೇಖನದಿ ಮೂಡಲಿ.......
ಸಾಗರದ ಬದುಕಿನಲಿ, ಸಾಧನೆಯ ಹಾದಿಯಲಿ
ತಾರೆಗಳ ಮುಟ್ಟುವ, ಆಶಯದ ಕಿರಣಗಳು
ಲೇಖನದಿ ಮೂಡಲಿ......
ಓದುವ ಮನಸಿನಲಿ, ಹಿಂಬಾಲಿಸಿ ಕಾಡುವ
ಕಾಣದೆ ಹೆಜ್ಜೆಯ ಮೂಡಿಸುವ, ಆಶಯದ ಕಿರಣಗಳು
ಲೇಖನದಿ ಮೂಡಲಿ......
ಓದಿ ತಿಳಿವ ಮನಸು, ಓದಲಿ ಜೀವನವು ಬೆರೆತು
ಬದುಕ ಬೆಳಗಿಸುವ ಲೇಖನವು
ಲೇಖನಿಯಲಿ ಮೂಡಲಿ......
ಮಾದರಿಯಾಗುವ ಲೇಖನಗಳು, ಲೇಖನಿಯಲಿ ಮೂಡಿ,
ಸುಂದರದಿ ಮೂಡಿದ ಲೇಖನವ ಸಂಯಮದಿ
ಓದಿದ ಮನಸಿನಲಿ ಜೀವನದಲಿ ಜೀವಿಸುವ,
ಆತ್ಮಸ್ಥೈರ್ಯವ ನೀಡಲಿ......
ಭವಿಷ್ಯ ಉಜ್ವಲವಾಗಲಿ......
ಇದು ಆಶಯದ ಮುನ್ನುಡಿ,
ಲೇಖನ ಜೀವನವಾಗಲಿ......

ಕಿರಣ್ ಎಸ್. ಜಿ., ದ್ವಿತೀಯ ಬಿ.ಎಸ್ಸಿ.

ಸಣ್ಣ ಕತೆ

ಎತ್ತ ನೋಡಿದರೂ ನೀನೆ !

✍ **ರಮ್ಯಶ್ರೀ ಡಿ.,** ಪ್ರಥಮ ಬಿ.ಎ.

ಏ ನಿಹಾರಿಕ, ಅಲ್ಲಿ ಹೋಗಬೇಡ. ದಮ್ಮಯ್ಯ ಈಚೆ ಬಾರೆ ತಾಯಿ, ಎಷ್ಟು ಸಲ ಸಾಗರಿಕ ಹೇಳಿದರೂ ನಿಹಾರಿಕ ಕೇಳಲೇ ಇಲ್ಲ. ಕಾಲು ಜಾರಿಯೇ ಬಿಟ್ಟಿತು. ನಿಹಾರಿಕ ಹುಲ್ಲಿನ ಬೆಟ್ಟ ಮತ್ತು ಪಾತಾಳದ ನಡುವೆ ನಿಂತು ನರ್ತನ ಆರಂಭಿಸಿದಳು. ಮಾನ್ಯ, ತನು, ಮನು, ಸಾಗರಿಕ ಹೋಗುವಷ್ಟರಲ್ಲಿ ಹಾರಿ ಬಂದ ಕರ್ಣ ಕೈ ಹಿಡಿದು ಪಾತಾಳಕ್ಕೆ ನಿಹಾರಿಕ ಬೀಳುವುದನ್ನು ತಪ್ಪಿಸಿದ.

ಅಬ್ಬ, ಒಂದು ಸಲ ಜೀವ ಹೋಗಿ ಬಂದ ಹಾಗೇ ಆಯಿತು. ಇನ್ನೊಮ್ಮೆ ಆಸೆ ಉಂಟಾ ಪಾತಾಳ ನೋಡಲು ಎಂದು ಸಾಗರಿಕ ಕಿಚಾಯಿಸಿದಳು. ಏನೇ ಮಹಾರಾಣಿ, ಅಲ್ಲಿನೋಡು. ಆ ಮಂಜಿನಂತೆ ತುಂಬಿದ ಮುತ್ತಿನಹಾರದಂತೆ ಕಾಣುವ ಆ ಮೋಡಗಳು. ಶಾಂತ ಸರಸ್ವತಿಯ ನೋಡು ನೀ ಅದೇ ಆ ಜಲಪಾತ. ಮೌನದ ಅವತಾರ ತಾಳಿರುವ ಆ ಗಿಳಿಯ ರೂಪದ ಆ ಹಸಿರು ಬೆಟ್ಟಗಳು ನೋಡು. ಸಣ್ಣ ಸಣ್ಣ ಪಕ್ಷಿಗಳು ಕೂ ಎಂದು ಕೂಗುವ ಆ ಚೆಂದ ನೋಡೆ. ಆ ಬಾಲ ನೋಡು ಅದೇ ಆ ಮಂಗನ ಬಾಲ ಅಲ್ಲಾಡಿಸುತ ನನಗೆ ಬಾಳೆಹಣ್ಣು ಕೊಡು ಎಂದು ಹಸಿವಿನಿಂದ ಕಾಯುತ್ತಿದೆ ನನಗಾಗಿ. ಇದನ್ನೆಲ್ಲಾ ಬಿಟ್ಟು ಆ ಪಾತಾಳಕ್ಕೆ ನಾ ಹೋಗಲಾರೆ.

ಹಲೋ, ಹಲೋ ಪ್ಲೀಸ್ ಸ್ಟಾಪ್ ಸ್ಟಾಪ್. ನಾವು ಕೂಡ ಇಲ್ಲಿ ಇದ್ದೇವೆ ಅಂತ ತನು ಹೇಳಿದಳು ನಿಹಾರಿಕನಿಗೆ. ಆಯಿತು, ಆಯಿತು ನೀವು ಇದ್ದೀರಾ. ಸರಿ, ಸರಿ ನಾವು ಯಾಕೆ ಇಲ್ಲಿ ಬಂದಿದ್ದೇವೆ ಅಂತಾ ಗೊತ್ತಿದೆ ತಾನೇ ? ಮನು ಕೇಳಿದಳು ಎಲ್ಲರನ್ನು, ಮಾನ್ಯ ಹೇಳಿದಳು – ಹಾ, ಗೊತ್ತು. ನಮಗೆ ರಜೆ ಸಿಗೋದೆ ಕಡಿಮೆ. ಸಿಕ್ಕಿದಾಗ ಈ ತರ ಸ್ಥಳಗಳಿಗೆಲ್ಲಾ ನಾವ್ಯಾರು ಹೋಗದೆ ಬಿಡೋರಲ್ಲ. ನಮ್ಮ ಕಾಲೇಜಿನ ಕಪಿ ಸೈನ್ಯವೇ ನಾವು. ಕಪಿ ಅಂತಾ ಅಂದ ಮೇಲೆ ಊರು ಸುತ್ತದೇ ಇರೋದು ನಾವಲ್ಲ.

ಕರ್ಣ ಅವರೇ ತುಂಬಾ ಧನ್ಯವಾದಗಳು ಕಣ್ರೀ. ಜೀವ ಉಳಿಸಿದವರಿಗೆ ಧನ್ಯವಾದ ಹೇಳೋದು ಬಿಟ್ಟು ನೋಡಿ ಅಲ್ಲಿ ಮಾತಾಡುತ್ತ ನಿಂತಿದ್ದಾರೆ. ಈ ಹುಡುಗಿಯರೇ ಹೀಗೆ. ಸಮಯ ಸಿಕ್ಕಿದರೆ ಸಾಕು ಮಾತಾಡುತ್ತಾ ನಿಂತುಬಿಡುತ್ತಾರೆ. ಇರಲಿ ಬಿಡಿ ಸುಖ್ಯಾತ್, ಎಲ್ಲ ಬನ್ನಿ ಇಲ್ಲಿ ಎಂದು ಸುಖ್ಯಾತ್ ಕರೆಯುತ್ತಾರೆ ಅವರನ್ನ, ಆಯಿತಾ ಮಾತಾಡಿ? ನಡೀರಿ ಇನ್ನು ಆಚೆ ಹೋಗೋಣ.

ಸುಖ್ಯಾತ್ ಇವರು ತಂದ ಕಾರಿನ ಡ್ರೈವರ್. ಕರ್ಣ ಇವರು ಬಂದ ಸ್ಥಳದ ಅರಣ್ಯ ಇಲಾಖೆಯ ಸಿಬ್ಬಂದಿ. ನಿಹಾರಿಕ ಸಾಗರಿಕಾಗೆ ಪರಿಚಯ ಇರುವಾತ. ಸುಮಾರು ಮೂವತ್ತು ವರುಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಉದ್ದ, ಸಪೂರ ವ್ಯಕ್ತಿ, ಚೌಕ ಮುಖ, ಕೈಯಲ್ಲಿ ವಾಚನ್ನು ಸದಾ ಕಟ್ಟುವ ಇವರು, ತಾಳ್ಮೆಯ ವ್ಯಕ್ತಿ. ಮೂರ್ತಿ ಎಂದೇ ಭಾವಿಸಿದ್ದಾರೆ ನಿಹಾರಿಕ, ಸಾಗರಿಕ.

ತನು ಲೇಸ್ ತಿನ್ನುತ್ತಾ ಇದ್ದ ತಿಂಡಿಕೋತಿ. ಲೇಸ್ ಖಾಲಿ ಆದಮೇಲೆ ಆ ಕವರನ್ನು ಅಲ್ಲಿಯೇ ಎಸೆದುಬಿಡುತ್ತಾಳೆ. ಗೋಂದು ಮಿಠಾಯಿಯನ್ನು ತಿಂದಾದ ಮೇಲೆ ಮನು ಅದನ್ನು ಅಲ್ಲೇ ಉಗಿಯುತ್ತಾಳೆ. ಇದನ್ನು ನೋಡಿದ ಕರ್ಣರವರು ಏನಮ್ಮ ? ವಿದ್ಯಾಭ್ಯಾಸ ಮಾಡುತ್ತಿರುವವಳು, ಪ್ರಬಂಧ ಕೂಡ ಬರೆದಿರಬಹುದು ಸ್ವಚ್ಛತೆಯ ಕುರಿತು ನೀವೇ ಹೀಗೆ ಮಾಡಿದರೆ ಹೇಗೆ ಹೇಳಿ ? ಎಲ್ಲೂ ಕಸದ ಬುಟ್ಟಿ ಕಾಣಲಿಲ್ಲ ಅಲ್ವಾ ? ಅದಕ್ಕೆ .... ಅದಕ್ಕೆ ಇಲ್ಲೇ ಹಾಕಿಬಿಡುದು ಸರಿ ನಾ ? ತಾಯಿ ಹೇಳು. ತಪ್ಪುತಾನೇ ? ತಪ್ಪಾಯಿತು ಕರ್ಣರವರೇ.

ಕ್ಯಾಂಪ್‌ಗೆ ಇಲ್ಲಿ ಬರುವವರು ಹೀಗೆ. ರಾತ್ರಿ ಯಾರಿಗೂ ಗೊತ್ತಿಲ್ಲದ ಹಾಗೇ ಬಂದು ಇಲ್ಲಿ ಶಿಬಿರಾಗ್ನಿ ಮಾಡುತ್ತಾ ಕಸ ಇಲ್ಲಿಯೇ ಹಾಕಿಬಿಡುತ್ತಾರೆ. ಕೊನೆಗೆ ನಾವುಗಳೇ ಇದನ್ನು ಸ್ವಚ್ಛವಾಗಿ ಇಟ್ಟುಕೊಳ್ಳುತ್ತೇವೆ. ಇಲ್ಲಿ ಕಸದ ರಾಶಿ ಒಬ್ಬರು ಹಾಕಿದರೆ ಉಳಿದವರು ಅದನ್ನೇ ಮಾಡಿ ಇಷ್ಟು ಸುಂದರವಾದ ಸ್ಥಳವನ್ನು ಕಸದಿಂದ ತುಂಬಿಸಿ ಬೆಟ್ಟ ಮಾಡಲು ಸಿದ್ಧರಿರುತ್ತಾರೆ.

ಅಲ್ಲ ಕರ್ಣರವರೇ, ಕಳೆದ ಬಾರಿಗಿಂತ ಈ ಬಾರಿ ಕಸ ಕಾಣುತ್ತಿಲ್ಲ ರಸ್ತೆಯಲ್ಲಿ. ಮಂಗಗಳಿಗೆ ತಿಂಡಿ ಕೊಡುತ್ತಿದ್ದವರು ಯಾರೂ ಕಾಣುತ್ತಿಲ್ಲ. ರಸ್ತೆಯಲ್ಲಿ ಹಾಗೇ ಮಾಡಿದಲ್ಲಿ ದಂಡ ವಿಧಿಸಲಾಗುತ್ತದೆ ಎಂಬ ಫಲಕಗಳೇ ಎದ್ದು ಕಾಣುತ್ತಿದೆ ಎಂದು ಸುಖ್ಯಾತ್ ಹೇಳಿದಾಗ, ಕರ್ಣರವರು ರಸ್ತೆ ಬದಿಯಲ್ಲಿ ತಿಂಡಿ ಕೊಟ್ಟು ಮಂಗನಿಗೆ ಅಭ್ಯಾಸ ಮಾಡಿದುದರಿಂದ ಕೆಲವೊಮ್ಮೆ ಕಾರು, ಬೈಕು, ಬಸ್ಸು ಅಂತಾ ಅದರ ಹಿಂದೆ ತಿಂಡಿ ಆಸೆಗಾಗಿ ಹನುಮನ ಪ್ರತಿರೂಪವಾದ ಇವು ಮೃತಪಟ್ಟವು. ಕೆಲವೊಂದು ಚೇಷ್ಟೆ ಮಾಡುತ್ತಿದ್ದವು. ಆದ ಕಾರಣ ದಂಡ ಎಂದು ಫಲಕಗಳನ್ನು ಹಾಕಿದೆವು ಮತ್ತು ಕಸಗಳನ್ನು ಅಲ್ಲಿ ಇಲ್ಲಿ ಹಾಕಿ ಆಭರಣದಂತೆ ಇರುವ ಈ ಸೌಂದರ್ಯ ದೇವತೆಯಾದ ಪ್ರಕೃತಿಯ ಕಣ್ಣಲ್ಲಿ ನೀರು ಬರಿಸಿದ್ದರು. ಈಗ ಸ್ವಲ್ಪ ಹತೋಟಿಗೆ ಬಂದಿದೆ. ಹಿಂದೆ ಬಿದ್ದ ಕಸಗಳನ್ನು ತೆಗೆಯಲು ನಾವು ಮತ್ತು ಟ್ರೇನ್ ಸಾಕಷ್ಟು ಕಷ್ಟಪಟ್ಟೆವು.

ಕರ್ಣ ಅಂಕಲ್ ಬೆಂಕಿ ಆಕಸ್ಮಿಕ ಸಂಭವಿಸುತ್ತದೆಯಾ ? ಈಗಲೂ. ಹೌದು ನಿಹಾರಿಕ. ಅದಕ್ಕೆ ಏನು ಮಾಡುತ್ತೀರಾ ?

ಎಂದು ಸಾಗರಿಕ ಕೇಳುವಳು. ಮುಂಚೆ ಆದರೆ ತುಂಬಾ ಮರಗಳು ನಾಶವಾಗಿ ಬಿಡುತ್ತಿದ್ದವು ನಾವು ಅಲ್ಲಿಗೆ ಹೋಗುವುದರೊಳಗೆ. ಈಗ ಅದಕ್ಕಾಗಿಯೇ ಅಲ್ಲಲ್ಲಿ ಫಲಕಗಳನ್ನು ಹಾಕಿದ್ದೇವೆ ಕರೆ ಮಾಡಿ ಬೆಂಕಿ ಕಂಡಲ್ಲಿ ಎಂದು, ಮತ್ತು ನಾಲ್ಕು ತಂಡಗಳನ್ನು ಮಾಡಿದ್ದೇವೆ.

ಮಾನ್ಯ ಕೇಳುವಳು – ನಿಮಗೆಲ್ಲಾ ರಾತ್ರಿ ಹೆದರಿಕೆ ಆಗೋದಿಲ್ವಾ? ಈ ಕಾಡಲ್ಲಿ, ಈ ಇಪ್ಪತ್ತೈದು ವರುಷಗಳಲ್ಲಿ ನಮ್ಮ ಗೆಳೆಯರನ್ನು ಕಳೆದುಕೊಂಡೆವು. ನಮಗೆ ಸಿಕ್ಕಿರುವ ಈ ಕೆಲಸವನ್ನು ಎಷ್ಟೇ ಕಷ್ಟ ಆದರೂ ನಾವು ಮಾಡಲೇಬೇಕು. ಅವತ್ತೊಂದು ದಿನ ರಾತ್ರಿ ನನ್ನ ಗೆಳೆಯ ಸುರೇಶ್ ಹುಲಿಯ ಧ್ವನಿ ಕೇಳುತ್ತಿದೆ. ನಾ ಅಲ್ಲಿ ಹೋಗಿ ನೋಡಿ ಬರುತ್ತೇನೆ ಎಂದವನು ಮರಳಿ ನಮ್ಮನ್ನು ನೋಡಲಿಲ್ಲ. ಜನರ ರಕ್ಷಣೆಗಾಗಿ ತನ್ನ ಪ್ರಾಣವನ್ನೇ ಬಲಿಯಾಗಿ ನೀಡಿದ. ಆ ಹುಲಿಯನ್ನು ಮುಂದೆ ಚುಚ್ಚುಮದ್ದಿನಿಂದ ಸಾಯಿಸಿಯೇ ಬಿಟ್ಟರು. ಇನ್ನು ಯಾವುದೋ ಸದ್ದು ಕೇಳುತ್ತಿದೆ. ಮರ ಕಡಿಯುತ್ತಿದ್ದಾರೆ ಮರಕಳ್ಳರು ಎಂದು ಆಕಾಶ್ ನೋಡಲು ಹೊರಟ, ಮುಂದೆ ಅವನ ನಾಲಿಗೆಯೇ ತಿರುಗಲಿಲ್ಲ.

ಅಲ್ಲಾ ಅಂಕಲ್, ಇದನ್ನೆಲ್ಲಾ ಹಿರಿಯ ಅಧಿಕಾರಿ ಹತ್ತಿರ ಹೇಳುವುದಿಲ್ವಾ? ನಮ್ಮ ಹಿರಿಯ ಅಧಿಕಾರಿಗಳು ಕೇಳಿಯೂ ಕೇಳದಂತೆ ಇದ್ದುಬಿಡುವ ಭ್ರಷ್ಟಾಚಾರಿಗಳು. ಮುಂಚೆ ರಾತ್ರಿಯ ಸಮಯದಲ್ಲಿ ಹುಲಿ, ಜಿರಾಫೆ, ಜಿಂಕೆಗಳೆಲ್ಲಾ ಕಾಣುತ್ತಿದ್ದವು. ಈಗ? ಎಂದು ಸುಖ್ಯಾತ್ ಕೇಳಿದಾಗ, 'ಕೆಂಪು ಪಟ್ಟಿ' ಎಂದು ಸರ್ಕಾರ ಘೋಷಿಸಲು ಇದು ಒಂದು ಕಾರಣ. ಆ ಪ್ರಾಣಿಗಳು ಬೇಟೆಗೋ, ಅಗ್ನಿಗೋ, ಚರ್ಮ ಮಾಡಲೋ ಬಳಸಿ ಇಂದು ಕೇಳರಿಯದಂತೆ ಮಾಯವಾಗುತ್ತಿದ್ದಾವೆ.

ಸರಿ ಮಧ್ಯಾಹ್ನವಾಗುತ್ತಾ ಬಂತು, ಇಲ್ಲೇ ಇದ್ದರೆ ಅಷ್ಟೇ, ಊಟ ಮಾಡಿ ಮನೆಗೆ ಹೊರಡಿ ಎಂದು ಸುಖ್ಯಾತ್ ಇಷ್ಟೆಲ್ಲಾ ಕೇಳುತ್ತಾ ಕುಳಿತ್ತಿದ್ದ ಮನು, ತನು, ಮಾನ್ಯ, ಸಾಗರಿಕ, ನಿಹಾರಿಕನಿಗೆ ಹೇಳಿದರು.

●

ರಕ್ಷಣೆ

ಸುಂದರ ಕವಚದಿಂದ ಹೊರ ಬಂದ ಕಂದ
ಪೂರ್ಣಚಂದಿರ ಸ್ಪರ್ಶಕ್ಕೆ ಕಿಲಕಿಲ ಎಂದಿತು
ನಕ್ಷತ್ರಗಳ ಮೊಗದಲ್ಲಿ ಪ್ರಶ್ನಾರ್ಥಕದ ಭಾವ

ಮಗಳ ಪುಟ್ಟ ಪುಟ್ಟ ಸದ್ದಿನ ರೂವಾರಿ
ಲಕ್ಷ್ಮೀಯ ಕಂಡು ನಕ್ಕ ಸಮುದ್ರ ರಾಜ
ಮುದ್ದಾದ ಗಿಳಿಯ ಬೆಳಕ ಕಂಡು ನಕ್ಕ ಈ ರಾಜ

ಸೀತೆಯ ವಿವಾಹ ರಾಮನೊಡನೆ
ಆನಂದಭಾಷ್ಪ ಇತ್ತ ಪಿತ

ಅಂದಳು ಸೀತೆ – ಹಿಡಿದ ಈ ಕೈಯ ಬಿಡಲಾರೆನು ಒಬ್ಬಂಟಿ
ಇನ್ನೇನು ಬೇಕು ಆ ಪುಟ್ಟ ಹೃದಯದ ಗೂಡಿಗೆ
ಮಗಳು – ತಂದೆಯ ಬಾಂಧವ್ಯ ಕೊನೆಯಿಲ್ಲದಾಯಿತು ಇಂತು.

✍ **ರಮ್ಯಶ್ರೀ ಡಿ.,** ಪ್ರಥಮ ಬಿ.ಎ.

ಕವನಗಳು

ಬಿದಿರು

ಕಾಡಿನ ಕಳೆಯೆಂದು ಕಡೆಗಣಿಸಿ,
ಬಡವನ ಬಳವಳಿಯೆಂದು ಬದಿಸರಿಸಿ,
ಕಾಡ್ಗಿಚ್ಚಿನ ಕಿಡಿಯೊಂದು ಕಿಡಿ ಕಾರಿ,
ಅಂದು ಅಲಕ್ಷಿಸಿದ ಬಿದಿರು ಬಾರಿ ಬಾರಿ ...

ಬಿದಿರಿನಲಿ ನೂರಾರು ಜಾತಿ,
ಇಲ್ಲ ಮೇಲು ಕೀಳಿನ ಭ್ರಾಂತಿ,
ಎಂಥ ನೆಲದಲ್ಲಿಯೂ ಬೆಳೆಯಬಲ್ಲ.
ಕಗ್ಗಾರು, ಕಗ್ಗಾಲ, ಖೇದ ಇಲ್ಲ...

ಬಿದಿರಿನ ಗುಣಧರ್ಮ ತರ ತರ,
ಬಿದಿರು ಬೆಳೆಯುವುದು ಭರ ಭರ,
ಇದರ ಭರ ಭರಾಟೆಗೆ ಸಾಟಿ ಇಲ್ಲ,
ಬಿದಿರಿನ ರಹಸ್ಯ ಆ ದೇವರೇ ಬಲ್ಲ...

ಬಿದಿರಿನ ಉಪಯೋಗ ಬಹು ವಿಧ,
ಇದರ ಅನುಭೋಗಿಗಳು ಬಡವ – ಬಲ್ಲಿದ.
ಮೇಲು ಕೀಳಿನ ಅಂತರವಿಲ್ಲದೆ
ಎಲ್ಲರಿಗೂ ಬಿದಿರು ಮೂಲಾಧಾರ...

ಕವಿ, ಕರ್ಣಕರಿಗೆ ಕಾಗದ ಕೊಟ್ಟ ಬಿದಿರು,
ಈಗ, ಅಂಗನೆಯರ ಅಂಗವಸ್ತ್ರದ ಪದರು,
ಆಗ, ದನದ ದೊಡ್ಡಿಯ ಹೊದಿರು,
ಈಗ, ಬೆಡಗಿನ ಹಡಗಿನ ಹೊಗರು...

✍ **ಚೈತ್ರಶ್ರೀ ಟಿ. ಎನ್.,** ತೃತೀಯ ಬಿ.ಎಸ್ಸಿ.

ನಿನಗಾಗಿ... (ಸ್ನೇಹಕ್ಕಾಗಿ...)

ಸ್ನೇಹದ ಕಡಲಿನಲ್ಲಿ ನಿನ್ನದೇ ಹೆಜ್ಜೆ ಗುರುತು
ನೋವಲ್ಲೂ ನಲಿವಲ್ಲೂ ನಿನ್ನದೇ ನೆನಪು
ಕಳೆಯುವುದಿಲ್ಲ ದಿನ ನಿನ್ನ ಮಾತುಗಳಿಲ್ಲದೆ
ಸಂಪೂರ್ಣವಲ್ಲ ಖುಷಿ ನಿನ್ನ ನಗುವಿಲ್ಲದೆ
ಎಣಿಸಲು ಸಾಧ್ಯವಿಲ್ಲ ನಮ್ಮ ತಲೆಹರಟೆಗಳ
ಆದರೂ ಪಡೆದೆವು ಎಲ್ಲರ ಮೆಚ್ಚುಗೆಯ
ಗೆಳೆತನ ಆರಂಭದ ದಿನ ನನಗದುವೆ ಶುಭಗಳಿಗೆ
ಮರೆಯಲು ಮನಸಿಲ್ಲ ಈ ಬಾಂಧವ್ಯದ ಕೊಡುಗೆ.

* * *

ಕವಿತೆಯ ಬರೆಯಲು ಕವಯತ್ರಿ ನಾನಲ್ಲ
ಆದರೂ ಗೀಚುವೆ ನನ್ನೆಲ್ಲ ಭಾವನೆಯ
ಪದಗಳಿಲ್ಲ ವರ್ಣಿಸಲು ಆ ನಿನ್ನ ಸಾಮ್ಯತೆಯ
ಹಂಬಲಿಸಿದೆ ಮನ ತುಂಟಮಾತಿನ ಸರಮಾಲೆಯ
ಮರೆಯಲು ಸಾಧ್ಯವಿಲ್ಲ ಈ ಮಧುರ ಅನುಭವವ
ನಿನ್ನೊಂದಿಗಿನ ಗೆಳೆತನದ ಸಿಹಿ ಪ್ರೀತಿಯ
ಬಹುಬೇಗ ಪಡೆದೆ ನೀ ನನ್ನೀ ಸಲುಗೆಯ
ಮನೋಹರ ಚಂಚಲ ಮನಸ್ಸಿನ ಮೆಚ್ಚುಗೆಯ

✍ **ಪೂರ್ಣಿಮಿ ಕಿರಣ್,** ಪ್ರಥಮ ಎಂ.ಎಸ್ಸಿ.

ತಿಳಿದಿರುವ ನೀನೊಬ್ಬ

ಒಂದೇ ಮಾತನು ನೂರು ಬಾರಿ ಹೇಳಿದರೂ
ನೂರು ಬಾರಿಯೂ ಅರ್ಥವಾಗದವರು
ಎಷ್ಟು ಸಲ ಬೇಡಿಕೊಂಡರೂ
ಕೇಳದಂತೆ ಕುಳಿತಿಹರು
ಕಣ್ಣಿಗೆ ಅಂದವಾದ ಪಟ್ಟಿ ಬಿಗಿದು
ಅದೇ ಜಗತ್ತೆಂದು ನಂಬಿಹರು
ಇವರೆಲ್ಲರೂ ಗಾಂಧಾರಿಯ ಇನ್ನೊಂದು ರೂಪ,
ಇನ್ನೊಂದು ಮುಖ.

ಯಾರಿಗೆ ಹೇಳುವೆ 'ತಿಳಿದಿರುವ' ನೀನೊಬ್ಬ
ಜೀವದ ಮಾತು ಉಳಿದವರಿಗೆ
ಹೇಗೆ ಹೇಳುವೆ ?
ಹೇಗೆ ತಡೆಯುವೆ ಈ ಅಂಧ ಬೆಳವಣಿಗೆ ?
ಕತ್ತಲಿನ ಮೋಡದಬ್ಬರಕ್ಕೆ ಸಿಲುಕಿಹರವರು
ಪ್ರಯೋಜನಕ್ಕೇ ಬಾರದ ಪ್ರಯತ್ನವ ಪ್ರಯೋಗಿಸುವುದೇಕೆ?
ಈ ಭೂಮಿ, ಈಗಿನದು
ಬುದ್ಧಿಗೆ ವೈರಿಯೇ ವಿದ್ಯೆಯು
ಸಾಧಿಸುವ ಛಲ ನೀ ಏಕೆ ಹೊಂದಿರುವೆ ?
ತಿಳಿದೂ, ಈ ದಾರಿಯಲಿ ಒಂಟಿ ಚಾಲಕ ನೀನು ?

ಉಕ್ಕುವ ನದಿ ಜೊತೆಗೆ ಬೆರೆತ ಈ ಅಂಧಕಾರವ
ಕುಡಿದು, ಬೆಂದವರು 'ನಾವು'
ನಮ್ಮನು, ಬೆಳಕ ಬಳಿ ತರಲು ನೀ ಹೋರಾಡುವೆ ಏಕೆ ?
ಕಾಲವ ಧಿಕ್ಕರಿಸುವ ಇವರು
ಕಾಲವು ಬಂದಂತೆ ಮಣ್ಣಾಗುವರು
ನಂತರ ಮೂಡಿಸು 'ತಿಳಿದಿರುವ' ನೀನೊಬ್ಬ
ನೋಡಲು ಹಾತೊರೆಯುವಂತಹ ಜಗತ್ತು
ಅಲ್ಲಿ ಸೃಷ್ಟಿಸು, ನಿನ್ನಂತಹುದೇ ನಿರ್ಮಲ ಮನಸು

✍ **ಅದಿತಿ ಎಸ್.,** ದ್ವಿತೀಯ ಪಿ.ಯು.ಸಿ.

ಮರ ನೀ ದೇವರ ವರ

ಅಂಕುರದಿ ಹುಟ್ಟಿ ಅಂಬರವ ಮುಟ್ಟಿ
ಅಂಬುದವ ತಟ್ಟಿ ಅಮೃತಧಾರೆ ಕಟ್ಟಿ
ಮಳೆ, ಗಾಳಿ, ಚಳಿಗೆ ತೊಡೆ ತಟ್ಟಿ
ಬಿಸಿಲು ಬೇಗೆಗೆ ಮೈಯೊಡ್ಡಿ
ನೆರಳಾಗಿ ನಿಂತಿರುವೆ, ಓ ಹೆಮ್ಮರ, ನೀ ದೇವರ ವರ...

ಮಿಂಚುಳ್ಳಿ, ಮಿಡತೆ, ಮಿಂಚುಳಗಳ ಆಲಯ
ಮಯೂರ, ಮಲ್ಲಾರ, ಮರ್ಕಟಗಳ ಮಹಾಲಯ
ಮದ್ದು, ಮದ್ವಾಲೆ, ಮಕರಂದದ ಮಹೋದಯ
ಹಸಿರು ಹೊದಿಕೆಯ ಸ್ಥಿರ ಸ್ಥಾವರ, ಓ ಮರ, ನೀ ದೇವರ ವರ...

ಕಟುಕನ ಕೊಡಲಿಗೂ ಕೋಲು ಕೊಟ್ಟು
ಕಡಿಕನಿಗೂ ಕರುಣಿಸುವ ಮರ ಮುಟ್ಟು,
ಕರುಣೆಯೇ ಕೈವಲ್ಯದ ಗುಟ್ಟು,
ಜಲೆ, ಜೀವ, ಜಂತುಗಳಿಗೆ ಕರುಣಾಕರ, ಓ ಮರ ನೀ ದೇವರ ವರ...

ರೆಂಬೆ, ಕೊಂಬೆಗಳನು ಧ್ಯಾನದಿ ಧರಿಸಿ
ಪತ್ರಂ, ಪುಷ್ಪಂ, ಫಲಂ ಅರ್ಪಿಸಿ
ಕಲಕಂಠಿಯ ಕಲನಾದದಿ ಭಜಿಸಿ,
ಸದಾಕಾಲ ಸದಾಶಿವನ ಜಪಿಸಿ,
ಜೀವನ ಜಗತ್ತಿಗೆ ಶುಭಕರ, ಓ ಮರ ನೀ ದೇವರ ವರ...

ಹೂವು ಧರಿಸಿ, ಹಣ್ಣು ಭರಿಸಿ,
ಭುವಿಗೆ ಬಗ್ಗಿ, ಬಾಗಿ, ವಿನೀತನಾಗಿ
ಗರ್ವಬಿಟ್ಟು ಗೌರವ ಪಟ್ಟು,
ಲೋಕಕೆ ಸಾರುವೆ, ಸಾರ್ಥಕ ಬದುಕಿನ ಗುಟ್ಟು
ಮರೆಯಲಾಗದು ನಿನ್ನೀ ಉಪಕಾರ, ಓ ಮರ, ನೀ ದೇವರ ವರ ...

✍ **ಚೈತ್ರಶ್ರೀ ಟಿ. ಎನ್.,** ತೃತೀಯ ಬಿ.ಎಸ್ಸಿ.

ಮನೆ ಕಟ್ಟಿಸುವವರ ಹಾಡು-ಪಾಡು

ಕಾಡಿಸಿದರು ನನ್ನ ಜನ ಒಂದೇ ಸಮನೆ
ಕಟ್ಟಿಸಿ ನಮಗೊಂದು ಹೊಸ ಮನೆ.

ಕೆಟ್ಟ ಘಳಿಗೆ, ಒಪ್ಪಿಕೊಂಡೆ ನಾನು ಒಮ್ಮೆಲೇ,
ಬೆಟ್ಟದಷ್ಟು ಸಾಲ ಇದ್ದರೂ ತಲೆಮೇಲೆ.

ಸಿದ್ಧವಾಯಿತು ಮನೆ ಸೈಟು
ಬಾರದಾಯಿತು ನಿದ್ದೆ ಪ್ರತೀ ನೈಟು.

ಇಂಜಿನಿಯರು ನಮ್ಮವರು,
ಮೇಸ್ತ್ರೀ, ಕಾರ್ಪೆಂಟರ್ ತುಂಬಾ ಬೇಕಾದವರು.

ಕಬ್ಬಿಣ, ಸಿಮೆಂಟಿನವರು ಪರಿಚಯದವರು.
ಕಲ್ಲು, ಮರಳು ಕೊಡುವವರಿದ್ದಾರೆ.

ತಡವೇಕೆ ? ಹಾಕಿಸಿ ಬುನಾದಿ !
ನಿತ್ಯವೂ ಮನೆಯವರ ತಗಾದೆ !

ಮೇಸ್ತ್ರಿ, ಕಾರ್ಪೆಂಟರ್‌ಗಳ ಅನುಕಂಪದಲ್ಲಿ,
ನಿಂತವು ಗೋಡೆ-ಬಾಗಿಲು-ಕಿಟಕಿಗಳು.

ಪಾವತಿಸಲಾಗದ ಉದ್ದುದ್ದ ಬಿಲ್ಲುಗ್ಗಳು,
ನಿತ್ಯವೂ ಹೊಸ ಹೊಸ ಥ್ರಿಲ್ಲುಗಳು !

ಬೇಕು ದೊಡ್ಡ ಮನೆ, ಜನ ಜಾಸ್ತಿ,
ಮನೆ, ಮಕ್ಕಳು ಎಲ್ಲಾ ನಿಮ್ಮ ಆಸ್ತಿ.

ಪುಸಲಾಯಿಸಿದರು ಎಲ್ಲಾ
ಹಿಂಡಿದರು ಗಲ್ಲ!

ಇದ್ದದ್ದು ಸಾಲದೆಂದೆನಿಸುವಾಗ
ಸಾಲ ಎತ್ತುವುದು ಇದ್ದದ್ದೆ!

ಕೈಲಿದ್ದದ್ದು ಸಾಲದೆಂದೆನಿಸಿದಾಗ,
ಸಾಲ ಕೇಳಲು ಹೊರಟೆ.

ಹತ್ತಿರದವರು ದೂರವಾದರು !
ದೂರದವರು ಇವನದೇನು ಕಾಟವೆಂದು ದೂರಿದರು !

ಮನೆ ಎಲ್ಲಿಯವರೆಗೆ ಬಂತು ?
ಕೇಳಿದರು ಪರಿಚಯದವರು.

ಕುತ್ತಿಗೆ ವರೆಗೆ ಎಂದೆ, ನಕ್ಕರವರು !
ನನಗೆ ನಗು ಬರಲಿಲ್ಲ.

ಅವರಿವರ ಬೆನ್ನು ಹತ್ತಿ, ಬ್ಯಾಂಕುಗಳ ಸುತ್ತಿ,
ಬರಿದಾಯ್ತು ಮೈಮನಗಳ ಶಕ್ತಿ !

ಸಾಲ ಕೊಡಿಸಿದವರು ಸಿಟ್ಟಾಗಿ ಮಾತು ಬಿಟ್ಟರು.
ಸಾಲ ಕೊಟ್ಟವರು ಕೇಳಿ ಕೇಳಿ ಸುಸ್ತಾದರು.

ಆದರೂ ಬಿಡಲಿಲ್ಲ, ನನ್ನ ಭಗೀರಥ ಪ್ರಯತ್ನ
ವರ್ಷಗಟ್ಟಲೆ ನಿಂತು, ಪುನಶ್ಚೇತನ ಪಡೆದು,

ಅಬ್ಬಬ್ಬಾ ಅಂತೂ-ಇಂತು ಮುಗಿಯಿತು
ನಮ್ಮ ಪಾಲಿನ ಕನಸಿನರಮನೆಯ ನಿರ್ಮಾಣ !

✍ **ಪ್ರಮೋದ್ ಆರ್. ನಾಯಕ್,** ಪ್ರಥಮ ಪಿ.ಯು.ಸಿ.

ಕವನಗಳು

1. ಎದೆಯ ಬಾಗಿಲ ತೆರೆದು
ಕಾದಿರುವೆ...
ಏತಕೆ ಈ ಮುನಿಸು
ಬಂದು ನೀ ಮುದ್ದಿಸು
ತುಸು ನನ್ನ ನೀ ಮನ್ನಿಸು

* * *

2. ಪ್ರೀತಿಯ ಕೈ ಹಿಡಿದವನು ನಾನು
ಪ್ರೀತಿಗೆ ಕೈ ಕೊಟ್ಟವಳು ನೀನು
ನನ್ನ ಬಿಟ್ಟು ಬೇರೆಯವರ ಕೈ
ಹಿಡಿದವಳು ನೀನು
ಇಂದಿಗೂ ನಿನ್ನ ಪ್ರೀತಿಗೆ
ಕಾಯುತಿರುವೆ ನಾನು.

* * *

3. ದೋಣಿ ಎಷ್ಟೇ ಭಾರವಿದ್ದರೂ
ನೀರಿನಲ್ಲಿ ತೇಲಬೇಕು
ಹೃದಯ ಎಷ್ಟೇ ಗಟ್ಟಿಯಿದ್ದರೂ
ಪ್ರೀತಿಗೆ ಸೋಲಬೇಕು.

* * *

4. ಕಣ್ಣಿನ ಕಾಡಿಗೆ ಏನೇನೋ ಹೇಳಿದೆ
ತುಟಿಯಂಚಿನ ನಗುವಲ್ಲೇ ಎಲ್ಲಾ ಅಡಗಿದೆ
ಇಷ್ಟೇ ಸಾಕು ಈ ಹೃದಯಕೆ
ಉಸಿರಾಡಲೂ ಇನ್ನೇನೂ ಬೇಕಿದೆ.

* * *

5. ಬರಗಾಲವಿರುವ ಭೂಮಿಗೆ
ಮಳೆಯ ಹನಿಯೇ ಬೇಕು
ಕಾಯುತಿರುವ ಈ ಹೃದಯಕೆ
ನಿನ್ನ ಕಿರುನಗೆಯೇ ಸಾಕು.

6. ಎಲ್ಲಿ ಹೋದೆ ನೀನು ಕಣ್ಣಿಗೆ ಕಾಣದೆ
ಬಿಟ್ಟಿರಲಾರೆ ನಿನ್ನ ಎಂದಿಗೂ
ನಮ್ಮ ಪ್ರೀತಿ ಹೀಗೆ ಇರಲಿ ಎಂದೆಂದಿಗೂ
ಓ ಪ್ರಿಯೇ ಹೇಳು ಬಾ ನಿನ್ನ
ಪ್ರೀತಿಯನ್ನ...

ಕಣ್ಣಿದ್ದು ಕುರುಡನಾಗಿ
ಕಿವಿಯಿದ್ದು ಕಿವುಡನಾಗಿ
ಯಾರು ಏನೇ ಹೇಳಿದರೂ
ನಾನು ಮಾತ್ರ ನಿನ್ನೇ ಪ್ರೀತಿಸುವೆ
ಓ ಪ್ರಿಯೇ ಹೇಳು ಬಾ ನಿನ್ನ
ನೋವನ್ನ...

ನಿನ್ನ ಕಡಲಿನಷ್ಟು ಪ್ರೀತಿ ಮಾಡಿ
ಕಣ್ಣಲ್ಲಿ ನೀರು ಬರದಂತೆ ನೋಡಿಕೊಳ್ಳುವೆ
ನಿನ್ನ ಮಾತುಗಳಿಗೆ, ಭಾವನೆಗಳಿಗೆ
ಬೆಲೆ ಕೊಟ್ಟು ನಿನ್ನ ಕನಸನ್ನ ನನಸು ಮಾಡುವೆ
ಓ ಪ್ರಿಯೇ ಹೇಳು ಬಾ ನಿನ್ನ
ಕನಸನ್ನ...

✍ **ಸದಾಶಿವ ಬಿ. ಎನ್.,** ಪ್ರಥಮ ಬಿ.ಎ.

ಮಿನುಗುತಾರೆ

ನೀ ಮಿತವರಿತು ಮಾತಾಡಿರೆ
ಪ್ರತಿ ಪದವನು...
ತಿಳಿಯಲಾರದೆ ಹೋದೆ ನಾನು
ನೋಡದಂತೆ ನಟಿಸಿದ್ದೆ
ನೋಡಿದ್ದರೂ ಅಂದು...
ಕಣ್ಣೀರಿನ ತಿಳಿ ಪದರ
ನಾ ಅರಿಯಲಿಲ್ಲ
ನಿನ್ನ ಮನದ ವಿಚಾರ
ಪ್ರತಿಕ್ಷಣ ಹೊಮ್ಮಿತ್ತು
ಆಪ್ತ ಭಾವನೆ
ಪ್ರತಿ ನಿಮಿಷ ಹೆಚ್ಚಿತ್ತು
ಹೃದಯದ ವೇದನೆ!
ನಾ ತಿಳಿಯದೆ ಹೋದೆನೇ...?!
ಸ್ಮೃತಿಪಟಲದಿ ಸರಿದು ಹೋದ
ನೆನಪು ನೀನು...
ಮತ್ತೆ ಹೇಗೆ ನೆನಪಿಸಲಿ ನಿನ್ನನು?!
ಆದರೂ ನೆನಪಾಗುವೆ ನೀನು
ಏನು ಮಾಡಲಿ ನಾನು!
ಮರಳಿ ನಾ ನಿನ್ನ
ಕರೆಯಲಾರೆ
ಕಣ್ಣಂಚಲಿ ಜಿನುಗುವುದು
ಅಶ್ರುಧಾರೆ...
ನೀನಾಗಿರುವೆಯಲ್ಲಾ...
ದಿವ್ಯಪ್ರಭೆಯ ಮಿನುಗುತಾರೆ!

✍ **ನಯನ,** ದ್ವಿತೀಯ ಬಿ.ಎಸ್ಸಿ.

ಅಮ್ಮ

ಜನ್ಮ ನೀಡಿದವಳು ಜನನಿ
ತನುವ ಬೆಳೆಸಿದವಳು ತಾಯಿ
ಮಾತು ಕಲಿಸಿದವಳು ಮಾತೆ
ಅಕ್ಕರೆ ತುಂಬಿದವಳು ಅಮ್ಮ ॥ 1 ॥

ಅಕ್ಷರವ ಕಲಿಸಿದವಳು ಅಮ್ಮ
ನಡೆನುಡಿಯ ತುಂಬಿದವಳು ತಾಯಿ
ಮತ್ತೆ ಮಗುವಂತೆ ನೋಡಿದವಳು ಮಾತೆ
ಜಗವ ತೋರಿಸಿದವಳು ಜನನಿ ॥ 2 ॥

ಜೀವನ ಕಲಿಸಿದವಳು ಜನನಿ
ಮದುವೆಯ ಮಾಡಿದವಳು ಮಾತೆ
ತನ್ನವರಿಗಾಗಿ ಕಾಲ ಕಳೆದವಳು ತಾಯಿ
ಸದಾ ಎಲ್ಲರ ಆನಂದ ಬಯಸುವವಳು ಅಮ್ಮ ॥ 3 ॥

ಜೀವಕ್ಕೆ ತೊಂದರೆಯಾಗದಂತೆ ಕಾದಿಹಳು ಜನನಿ
ಮುಪ್ಪಿನಲ್ಲಿಯೂ ನಾ ಮರೆಯದಿರುವೆ ನನ್ನ ಮಾತೆಯನು
ತಂದೆಯ ಜೊತೆಗೆ ಸಹಬಾಳ್ವೆ ನಡೆಸಿದವಳು ತಾಯಿ
ಆ ದೇವರನು ಮರೆತರು ಸಹ, ನಾ ಮರೆಯಲಾರೆ
ನನ್ನ ಅಮ್ಮನನು ॥ 4 ॥

✍ **ನಾಗರಾಜ ಹೆಚ್. ಕೆ.,** ಪ್ರಥಮ ಬಿ.ಎಸ್ಸಿ.

ಕರ್ಣ

ನೀನೇ ವೀರ ಕರ್ಣ
ನಿನ್ನದು ಕಾಂತಿಯುಕ್ತ ವರ್ಣ
ನೀ ವೀರ-ವಿಲಕ್ಷಣ
ನೀ ಸ್ಫುರದ್ರೂಪಿ-ತೇಜ ಪ್ರತಾಪಿ
ಆಗಿತ್ತು ಅಂದು ಅಪಮಾನ
ಆರ್ದ್ರವಾಗಿತ್ತು ಲೋಚನ
ಎದುರಿಸಿದೆ ಎಲ್ಲರ ಕಟುವಚನ
ಏನು ಅರಿತನೋ ಆ ಸುಯೋಧನ?!...
ನಿನಗೆಂದು ಧಾರೆಯೆರೆದ
ಅಂಗ ರಾಜ್ಯದ ವರದಾನ !
ಮುಡಿಪಾಗಿಟ್ಟೆ ಆ ದಿನದಿಂದ
ಅವನಿಗೆ ನಿನ್ನ ಜೀವನ
ನಿನ್ನದು ಚಿನ್ನದಂತ ಮನಸ್ಸು
ಕಣ್ಣಲ್ಲಿ ಎಂತಹ ತೇಜಸ್ಸು !
ಮಾತಿನಲಿ ವಿನಯವಂತ
ಗುಣದಲಿ ಹೃದಯವಂತ
ದಾನಶೂರ ನೀ,
ತ್ಯಾಗದ ಪ್ರತೀಕ ನೀ,
ಕರುಣೆಯ ಖನಿ
ಒರೆಸಿದ್ದೆ ದೀನರ ಕಂಬನಿ
ಕಪಟಿ ಇಂದ್ರನ ಜಾಲ !
ಬೇಡಿದ್ದ ಕರ್ಣಕುಂಡಲ...
ನೀ ಓದಿದ್ದೆ ಅವನ ಮನ
ಆದರೂ ಮಾಡಿದೆ ದಾನ !
ನೀ ಲೆಕ್ಕಿಸಿಲ್ಲ ನೋವು
ಧೈರ್ಯಗೆಡಲಿಲ್ಲ ಬಂದರೂ ಸಾವು
ತಮ್ಮನಿಂದಲೇ ಮರಣ
ಇದು ವಿಧಿ ಬರೆದ ಶಾಸನ...
ಕರೆಸಿಕೊಂಡರೂ 'ಸೂತ'
ಆದೆ ಲೋಕ ವಿಖ್ಯಾತ
ಮಾಡಿದೆ, ಜನರ ಹೃದಯ ಸ್ಪರ್ಶ
ನೀನಾದೆ, ವೀರರ ಪಾಲಿನ ಆದರ್ಶ.

✍ **ನಯನ,** ದ್ವಿತೀಯ ಬಿ.ಎಸ್ಸಿ.

ಗಾಂಧೀಜಿಯವರ ನುಡಿಮುತ್ತುಗಳು

ಅಹಿಂಸೆಯೇ ಪರಮಧರ್ಮ
ಬಂದದ್ದೆಲ್ಲ ಬರಲಿ, ಸತ್ಯವೊಂದಿರಲಿ
ಸ್ವಕಾರ್ಯಕ್ಕಾಗಿ ಪರಾವಲಂಬಿಯಾಗದಿರಿ
ಪಾಪವನ್ನು ದ್ವೇಷಿಸಿ, ಪಾಪಿಯನ್ನಲ್ಲ
ಸೇವೆಯೇ ಧರ್ಮ
ತ್ಯಾಗವೇ ಜೀವನ
ಸರ್ವ ಸಮಾನತೆಯೇ ಧರ್ಮ
ಈಶ್ವರಾರ್ಪಣ ಭಾವವೇ ಸೇವಾರ್ಪಣ ಭಾವ
ನಮ್ರತೆಯೇ ವಿಜಯದ ಮೆಟ್ಟಿಲು
ನೀತಿಯು ಧರ್ಮದ ಸತ್ತ್ವ
ಕಾಯಕವೇ ಯಜ್ಞ
ಸತ್ಯ ಸಾಧಕನಿಗೆ ಸ್ತುತಿ ನಿಂದೆಗಳು ನಿತ್ಯ ಸಮಾನ
ಸ್ವಾರ್ಥರಹಿತ ಕಾರ್ಯ ಸ್ವಯಂ ಪ್ರಕಾಶಿಸುತ್ತದೆ
ಸಾತ್ತ್ವಿಕತೆಯಿಂದಲೇ ಜ್ಞಾನ ಸಾಧನೆ
ಸ್ವಪರಿವರ್ತನೆಯೇ ಜಗದ ಪರಿವರ್ತನೆಗೆ ಮುನ್ನುಡಿ
ಪ್ರತಿಯೊಬ್ಬನ ಅವಶ್ಯಕತೆ ಈಡೇರಿಸುವಷ್ಟು ಈ ಭೂಮಿ ನೀಡುತ್ತಿದೆ; ಆದರೆ ದುರಾಸೆಯನ್ನು ಈಡೇರಿಸುವಷ್ಟು ಅಲ್ಲ.

❖ ❖ ❖

ಗಾಂಧೀಜಿ ವಿದ್ಯಾರ್ಥಿಗಳಿಗೆ ಕೊಟ್ಟ ಪ್ರಮುಖ ಸೂಚನೆಗಳು ಇಲ್ಲಿವೆ

- ನಮ್ಮ ತ್ರಿವರ್ಣ ಧ್ವಜದ ಸಂದೇಶವನ್ನು ಅರಿತುಕೊಂಡು ಕೋಮು ದ್ವೇಷವನ್ನು ಮತ್ತು ಅಸ್ಪೃಶ್ಯತೆಯನ್ನು ಹೃದಯದಿಂದಲೇ ತೆಗೆದುಹಾಕುವಂತಹ ಮಾನವೀಯತೆ ಬೆಳೆಸಿಕೊಳ್ಳಿ.
- ನಿಮ್ಮನ್ನು ನೀವು ಅನ್ಯರಿಗಿಂತ ಮೇಲೆಂದು ಅಥವಾ ಕೀಳೆಂದು ಭಾವಿಸಿಕೊಳ್ಳಬೇಡಿ. ಹಾಗೆಯೆ ನಿಮ್ಮ ಧರ್ಮವೂ ಇತರ ಧರ್ಮಗಳಿಗಿಂತ ಮೇಲೂ ಅಲ್ಲ ಕೀಳೂ ಅಲ್ಲ ಎಂಬ ಸಮಾನತೆಯ ವಿಶ್ವಪ್ರಜ್ಞೆ ಬೆಳೆಸಿಕೊಳ್ಳಿ ಮತ್ತು ಆ ಅರಿವಿನ ಪ್ರಸಾರ ಮಾಡಿ.
- ನೆರೆಹೊರೆಯವರು ಕಷ್ಟದಲ್ಲಿದ್ದಾಗ ಸ್ಪಂದಿಸಿ, ಗಾಯವಾಗಿದ್ದರೆ, ಅನಾರೋಗ್ಯವಿದ್ದರೆ ಸೂಕ್ತ ಪ್ರಥಮ ಚಿಕಿತ್ಸೆ ಕೊಟ್ಟು ವೈದ್ಯಕೀಯ ಉಪಚಾರ ಕೊಡಿಸಿ ಆರೈಕೆ ಮಾಡಿ.
- ಸ್ವಚ್ಛತಾ ಕೆಲಸವನ್ನು ಮಾಡಿ, ನೈರ್ಮಲ್ಯವನ್ನು ಕಾಪಾಡಿ, ಹಳ್ಳಿ–ಹಳ್ಳಿ–ಕೇರಿ–ಕೇರಿ ಪಟ್ಟಣಗಳಲ್ಲಿ ಸದ್ಭಾವನೆಯನ್ನು ಮೂಡಿಸಿ.
- ಮಕ್ಕಳಿಗೆ ಮತ್ತು ಶಿಕ್ಷಣವಂತಿತ ವಯಸ್ಕರಿಗೆ ಶಿಕ್ಷಣ ಕೊಡಿಸಿ.
- ಕಲಿತದ್ದನ್ನು ಕಲಿಸಿ!
- ಏನೇ ಹೊಸತನ್ನು ಕಲಿತರೂ ಅದನ್ನು ಮಾತೃಭಾಷೆಗೆ ಸರಳವಾಗಿ ಅನುವಾದ ಮಾಡಿ ಹಳ್ಳಿಗಳಿಗೂ ತಲುಪಿಸಿ.
- ಗುಣನಡತೆಯನ್ನು ಉತ್ತಮಪಡಿಸಿಕೊಳ್ಳಿ. ಮಹಿಳೆಯರನ್ನು ಗೌರವಿಸಿ. ಸಹಪಾಠಿ ವಿದ್ಯಾರ್ಥಿನಿಯರಿಗೆ ತೊಂದರೆ ಕೊಡದೆ ಸರಿಯಾಗಿ ವರ್ತಿಸಿ !

ಈ ಉಪದೇಶಗಳು ಇಂದಿಗೆ ಹೆಚ್ಚು ಪ್ರಸ್ತುತವಾಗಿವೆಯಲ್ಲವೇ ?

✍ **ದರ್ಶನ್ ಜಿ. ಸಿ,** ತೃತೀಯ ಬಿ.ಎಸ್ಸಿ

ಕನಸು

ಕಡಲ ತೀರದಂತೆ ಎದುರು ನೋಡುತ್ತಿರುವೆ ನಾ
ಅಲೆಯಂತೆ ಬಂದು ನನ್ನ ಸೇರು ಬಾ ನೀ....
ನವಿಲಂತೆ ಕಾಯುತಿರುವೆ ನಾ
ಆಗಸದಿಂದ ವರ್ಷವಾಗಿ ನನ್ನ ಮನ ತಣಿಸು ಬಾ ನೀ....

ಇಳೆಯಲ್ಲಿ ರೂಪವಿಲ್ಲದ ಕಲ್ಲಾಗಿರುವೆ ನಾ
ಶಿಲ್ಪಿಯಂತೆ ಬಂದು ನನ್ನ ಕೆತ್ತು ನೀ....
ಸೂರ್ಯಕಾಂತಿಯಂತೆ ನೀನಿಲ್ಲದೆ ಬಸವಳಿದಿರುವೆ ನಾ
ಸೂರ್ಯನ ಕಿರಣವಾಗಿ ಬಂದು ಹುರಿದುಂಬಿಸು ನೀ. . . .

ಹೂವಿನ ಮೊಗ್ಗಾಗ್ಗಿ ಅಡಗಿರುವೆ ಹೂದೋಟದಲ್ಲಿ ನಾ
ದುಂಬಿಯಂತೆ ಬಂದು ಚುಂಬಿಸು ನೀ....
ಶಕುಂತಲೆಯಂತೆ ನನ್ನ ನೆನಪಲ್ಲೇ ಸೋತಿರುವೆ ನಾ
ದುಷ್ಯಂತನಂತೆ ಬಂದು ನನ್ನ ಮನದ ಪರದೆಯನ್ನು ಸರಿಸು ನೀ....

* * *

ನೀ ಮರೀಚಿಕೆಯಂತೆ ಬಂದಾಗ, ನೀ ನನ್ನ ಜೊತೆಯಾದಾಗ
ಈ ನನ್ನ ಮರ್ಕಟ ಮನ ಹಿಗ್ಗಿ ಹಾರಿತ್ತು ಒಂದು ಕ್ಷಣ
ಬಾಳೆಂಬ ನೌಕೆಯಲಿ ನಿನ್ನ ಜೊತೆಯಾಗಿ ಸಾಗಲು
ಹಾತೊರೆಯುತ್ತಿತ್ತು ನನ್ನೀ ಪುಟ್ಟ ಹೃದಯ ಹಗಲು ಇರುಳು
ಮಾಯಾವಿಯಂತೆ ಬಂದ ನೀ ತೋರಿಸಿದೆ ಭವಿಷ್ಯದ ಕಟು ಸತ್ಯ
ಆದರೂ ಬೆಂಬಿಡದೆ ಸಾಗಿದೆ ನಿನ್ನ ಜೊತೆಯಾಗಬೇಕೆಂಬ
ಕನಸು ಪ್ರತಿ ನಿತ್ಯ.

✍ **ಕೃಪಾ ವಿನಾಯಕ ನಾಯ್ಕ ,** ಪ್ರಥಮ ಬಿ.ಎಸ್ಸಿ

ಮುತ್ತಿನಂಥ ಮಾತುಗಳು

✍ **ಸುಪ್ರೀತಾ,** ದ್ವಿತೀಯ ಬಿ.ಕಾಂ.

1. ಸಾಧಿಸುವ ಮನಸ್ಸಿರುವವರಿಗೆ ನೂರು ಕಷ್ಟಗಳ ನಡುವೆಯೂ
ಸಾವಿರ ಮಾರ್ಗಗಳು ಗೋಚರಿಸುತ್ತದೆ.
ಬದುಕಿನ ಬಗ್ಗೆ ಸಕಾರಾತ್ಮಕ ನಿಲುವಿದ್ದಾಗ ಮಾತ್ರ
ಇಂಥ ಸಾಧ್ಯತೆ ತೆರೆದುಕೊಳ್ಳುತ್ತದೆ.

2. ಯಶಸ್ವಿ ವ್ಯಕ್ತಿಗಳು ಸೋಲು ಎದುರಾದಾಗ
ಕಂಗೆಟ್ಟವರಲ್ಲ ಬದಲಾಗಿ
ಆ ಸೋಲಿನ ಒಡಲಲ್ಲಿರುವ ಯಶಸ್ಸಿನ
ಪಾಠವನ್ನು ಗಮನವಿಟ್ಟು ಕಲಿತವರು.

3. ಗಡಿಯಾರ ನೋಡುತ್ತಾ ಸುಮ್ಮನೆ
ಕುಳಿತಿರಬಾರದು. ಅದರ ಮುಳ್ಳು
ಸಾಗಿದಂತೆ ಜೀವನ ಸಾಗಬೇಕು.

4. ಶತ್ರುವನ್ನು ಮಿತ್ರನಾಗಿಸುವ ಏಕೈಕ ಪರಿವರ್ತನಾ ಶಕ್ತಿ
ಪ್ರೀತಿ ಮಾತ್ರ.

5. ಜೀವನದಲ್ಲಿ ಅಸಾಧ್ಯವಾದದ್ದನ್ನು ಸಾಧಿಸಲು
ಹಂಬಲವಿದ್ದರೆ ಸಾಲದು
ದೃಢ ನಿರ್ಧಾರ, ಕಠಿಣ ದುಡಿಮೆ ಹಾಗೂ
ಆತ್ಮವಿಶ್ವಾಸವೂ ಬೇಕು.

6. ನೀವು ಯಾರ ವ್ಯಕ್ತಿತ್ವವನ್ನಾದರೂ ಆಳವಾಗಿ ತಿಳಿಯಬೇಕೇ ?
ಇದಕ್ಕಿರುವ ಸುಲಭ ಮಾರ್ಗವೆಂದರೆ ಆ ವ್ಯಕ್ತಿ
ತನ್ನ ಅಂತಸ್ತಿಗಿಂತ ಕಡಿಮೆ ಇರುವವರ
ಜೊತೆ ಹೇಗೆ ವರ್ತಿಸುತ್ತಾನೆ ಎಂಬುದನ್ನು ಗಮನಿಸಿ.

7. ಎತ್ತರವಾದ ಬೆಟ್ಟವನ್ನು
ಹತ್ತಿ ನೋಡಿದಾಗ ಮಾತ್ರ
ನಮಗೆ ತಿಳಿಯುವುದು
ಇನ್ನೂ ಎಷ್ಟೋ ಬೆಟ್ಟಗಳನ್ನು
ಹತ್ತಲು ಬಾಕಿ ಇದೆ ಎಂದು.

8. ಧೈರ್ಯವಂತರಾಗಿ ರಿಸ್ಕ್ ತೆಗೆದುಕೊಳ್ಳಿ
ಜೀವನದಲ್ಲಿ ಅನುಭವಕ್ಕಿಂತಲೂ ಉತ್ತಮ ಸಂಗತಿ
ಯಾವುದೂ ಇಲ್ಲ.

9. ಬೇರೆಯವರಿಂದ ನಮಗೆ ಪದೇ ಪದೇ ಆಗುವ ಕಿರಿಕಿರಿ
ನಮ್ಮನ್ನು ನಾವು ಚೆನ್ನಾಗಿ ಅರಿತುಕೊಳ್ಳುವುದಕ್ಕೆ ಹಾದಿ
ಮಾಡಿಕೊಡುತ್ತದೆ.

10. ನಮ್ಮ ಗುರಿ ಸ್ಥಿರವಾಗಿರಬೇಕು. ಮಾರ್ಗವು ಸರಿಯಾಗಿ
ನಿರ್ಧರಿಸಿಕೊಳ್ಳಬೇಕು
ಪ್ರಯತ್ನದಲ್ಲಿ ರಾಜಿ ಮಾಡಿಕೊಳ್ಳಲೇಬಾರದು
ಹೀಗಿದ್ದಾಗ ಮಾತ್ರ ನಾವು ವಿಜಯಿಗಳಾಗಬಲ್ಲೆವು.

11. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಆತನ ಪ್ರಶ್ನೆಗಳಿಂದ ತಿಳಿಯಬೇಕೇ
ಹೊರತು ಉತ್ತರದಿಂದಲ್ಲ.

12. ನಮ್ಮ ಸ್ನೇಹ ಸಂಬಂಧವನ್ನು ಉತ್ತಮಗೊಳಿಸಲು ಒಂದಕ್ಷರದ
ವ್ಯತ್ಯಾಸ ಇರುವುದು
'ನಾನು' ಎನದೆ 'ನಾವು' ಎಂದರೆ ಸಾಕು ಸಮಾಜ, ಜಗತ್ತು
ಎಲ್ಲವೂ ಸುಂದರವಾಗುತ್ತದೆ.

13. ಜೀವನವೆಂದರೆ ಪ್ರಶ್ನೆಗಳಿಗೆಲ್ಲ ಉತ್ತರ ಕಂಡುಕೊಳ್ಳುತ್ತಾ
ಪೂರ್ಣ ವಿರಾಮದೆಡೆಗೆ ಸಾಗುವ ದಾರಿ.

14. ಜೀವನದಲ್ಲಿ ನಾವು ಮಾಡುವ ಅತಿ ದೊಡ್ಡ ತಪ್ಪೆಂದರೆ ಎಲ್ಲಿ
ತಪ್ಪು ಮಾಡುತ್ತೇವೆ ಎಂದು ಹೆದರುತ್ತಲೇ ಬದುಕುವುದು.

15. ಅವಕಾಶ ಬಂದು ನಿಮ್ಮ ಬಾಗಿಲು ಬಡಿಯದಿದ್ದರೆ
ಕಾಯುತ್ತ ಕೂರಬೇಡಿ ನೀವೇ ಹೊಸ ಬಾಗಿಲನ್ನು ಕಟ್ಟಿಕೊಳ್ಳಿ.

●

ಸಾಮಾನ್ಯ ಜ್ಞಾನ

✍ **ಸ್ವಾತಿ,** ತೃತೀಯ ಬಿ.ಎ.

1. ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆ ಇರುವ ನಗರ ಯಾವುದು ? – **ದೆಹಲಿ**
2. ವಿಶ್ವದಲ್ಲಿ ಅತಿ ಹೆಚ್ಚು ಗೇರುಬೀಜ ಉತ್ಪಾದಿಸುವ ದೇಶ ಯಾವುದು ? – **ಭಾರತ**
3. ವಾಲ್ಮೀಕಿ ರಚಿಸಿದ ರಾಮಾಯಣದಲ್ಲಿ ಎಷ್ಟು ಶ್ಲೋಕಗಳಿವೆ ? – **24 ಸಾವಿರ**
4. ನಾಗರಹೊಳೆ ವನ್ಯಮೃಗಧಾಮ ಯಾವ ಜಿಲ್ಲೆಯಲ್ಲಿದೆ ? – **ಕೊಡಗು**
5. ಕನ್ನಡದ ಹುಲಿ ಎಂದೇ ಖ್ಯಾತಿ ಪಡೆದವರು ಯಾರು ? – **ಡೆಪ್ಯೂಟಿ ಚೆನ್ನಬಸಪ್ಪ**
6. ಅತ್ಯಂತ ಚಿಕ್ಕದಾದ ದೇಶ ಯಾವುದು ? – **ವ್ಯಾಟಿಕನ್ ಸಿಟಿ**
7. ಪ್ರಥಮ ಟಿ20 ಕ್ರಿಕೆಟ್ ನಡೆದ ದೇಶ ಯಾವುದು ? – **ದಕ್ಷಿಣ ಆಫ್ರಿಕಾ**
8. ಪಂಚ ನದಿಗಳ ಭೂಮಿ ಯಾವುದು ? – **ಪಂಜಾಬ್**
9. ಸೂರ್ಯ ಮುಳುಗುವ ನಾಡು ಯಾವುದು ? – **ಅಮೇರಿಕಾ**
10. ಪರಾಗಸ್ಪರ್ಶಕ್ಕಾಗಿ ಜೇನು ನೊಣವನ್ನು ಮಾತ್ರ ಆಶ್ರಯಿಸುವ ಹೂವು ಯಾವುದು ? – **ಸೂರ್ಯಕಾಂತಿ**
11. ಲೋಕಾಯುಕ್ತ ವ್ಯವಸ್ಥೆಯನ್ನು ಮೊದಲು ಯಾವ ರಾಜ್ಯದಲ್ಲಿ ಜಾರಿ ಮಾಡಿದರು ? – **ಒರಿಸ್ಸಾ**
12. ವಿಶ್ವ ಮಿತವ್ಯಯ ದಿನವನ್ನು ಯಾವಾಗ ಆಚರಿಸುತ್ತೇವೆ ? – **ಅಕ್ಟೋಬರ್ 3**
13. ಇದು ವಿಶ್ವ ಜನದಿನ. – **ಮಾರ್ಚ್ 22**
14. ಮಾನವನ ದೇಹದ ರಕ್ತ ಪರಿಚಲನೆಯನ್ನು ಕಂಡುಹಿಡಿದ ವಿಜ್ಞಾನಿ ? – **ವಿಲಿಯಂ ಹಾರ್ವೆ**
15. ದೇಶದಲ್ಲಿ ಅತಿ ಹೆಚ್ಚು ವಿಶ್ವವಿದ್ಯಾಲಯಗಳಿರುವ ರಾಜ್ಯ ಯಾವುದು ? – **ತಮಿಳುನಾಡು**
16. ಅಶ್ವಮೇಧ ನಾಣ್ಯ ಜಾರಿಗೆ ತಂದ ದೊರೆ ? – **ಸಮುದ್ರಗುಪ್ತ**
17. ದೆಹಲಿ ಸಾಮ್ರಾಜ್ಯವನ್ನು ಆಳಿದ ಏಕೈಕ ಮಹಿಳೆ ಯಾರು ? – **ರಜಿಯಾ ಸುಲ್ತಾನ್**
18. ಅಮೃತ ಶಿಲೆಯು ಯಾವ ಶಿಲೆಯ ರೂಪಾಂತರ ? – **ಸುಣ್ಣದ ಕಲ್ಲು**
19. ಆಲ್ ಇಂಡಿಯಾ ಟ್ರೇಡ್ ಯೂನಿಯನ್‌ನ ಮೊದಲ ಅಧ್ಯಕ್ಷರು ಯಾರು ? – **ಲಾಲ್ ಲಜಪತ್‌ರಾಯ್**
20. ಅಮರೇಶ್ವರ ಇದು ಯಾರ ಅಂಕಿತನಾಮ ? – **ರಾಯಮ್ಮ**
21. ಅಮುಕ್ತ ಮೌಲ್ಯ ಗ್ರಂಥವನ್ನು ಬರೆದವರು. – **ಕೃಷ್ಣದೇವರಾಯ**
22. ಭಾರತದ ಲೋಕಸಭೆಯ ಮೊದಲ ಅಧ್ಯಕ್ಷರು ಇವರು. – **ಜಿ. ವಿ. ಮಾಳವಂಕರ್**
23. ಹಿಮೋಗ್ಲೋಬಿನ್ ಕಡಿಮೆಯಾದರೆ ಬರುವ ರೋಗ ಯಾವುದು ? – **ಅನಿಮೀಯಾ**
24. ನಾಗಾಲ್ಯಾಂಡ್‌ನ ರಾಜಧಾನಿಯ ಹೆಸರೇನು ? – **ಕೊಹಿಮಾ**
25. 'ಹಚ್ಚೇವು ಕನ್ನಡದ ದೀಪ' ಸುಮಧುರ ಕೃತಿಯನ್ನು ರಚಿಸಿದವರು. – **ಡಿ. ಎಸ್. ಕರ್ಕಿ**

ವಿಜ್ಞಾನ ಲೋಕದ ಅಮರ ಲೇಖಕ ಯಾಕೋವ್ ಪೆರೆಲ್ಮನ್

✍ **ಹರಿ ಜಾದವ,** ಪ್ರಥಮ ಬಿ.ಎ.

ವಿಜ್ಞಾನವೆಂದರೆ ಕಬ್ಬಿಣದ ಕಡಲೆಯಲ್ಲ ಜನಸಾಮಾನ್ಯರಿಗೂ ಅದನ್ನು ಅರ್ಥವಾಗುವಂತೆ ವಿವರಿಸಬಹುದು ಎಂದು ತೋರಿಸಿಕೊಟ್ಟ ವಿಜ್ಞಾನಿ ಲೇಖಕನ ದಾರುಣ ಅಂತ್ಯ ಮಾತ್ರ ಅವರ ಅಭಿಮಾನಿಗಳ ಕಣ್ಣುಗಳಲ್ಲಿ ನೀರು ತರಿಸಿತ್ತು.

ರಂಜನೆಯೊಂದಿಗೆ ಜ್ಞಾನ:

ಗಣಿತ ಅಥವಾ ಭೌತಶಾಸ್ತ್ರಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನಾದರೂ ಮನೋರಂಜನಾತ್ಮಕವಾಗಿ ಬರೆಯುವಲ್ಲಿ ಅವರು ಸಿದ್ಧ ಹಸ್ತರು. ವಿಜ್ಞಾನವನ್ನು ಕಂಡರಾಗದ, ವಿಜ್ಞಾನವೆಂದರೆ ಭೂತದರ್ಶನವಾದಂತೆ ಬೆಚ್ಚಿ ಬೀಳುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಅವರ ಪುಸ್ತಕಗಳನ್ನು ಓದಲೇಬೇಕು. ವಿಜ್ಞಾನ ಖಂಡಿತಾ ಕಷ್ಟವಲ್ಲ, ಬದಲಾಗಿ ಅದು ನಮ್ಮೆಲ್ಲರ ಜೀವನದಲ್ಲಿ ಹಾಸುಹೊಕ್ಕಾಗಿರುವ ಸರಳ, ಸುಲಭವಾದ ಅಧ್ಯಯನ ವಿಷಯ ಎಂಬ ವಿಶ್ವಾಸವನ್ನು ಪೆರೆಲ್ಮನ್ ಮೂಡಿಸುತ್ತಾರೆ.

ಪೆರೆಲ್ಮನ್ ಜನಿಸಿದ್ದು 1882ರ ಡಿಸೆಂಬರ್ ನಾಲ್ಕರಂದು. ರಷ್ಯಾ ದೇಶ ಕಂಡ ಬಹು ಪ್ರಸಿದ್ಧ ವಿಜ್ಞಾನ ಲೇಖಕ. ಅವರು ಓದಿದ ವಿಜ್ಞಾನದ ವಿಷಯವನ್ನು ಗಮನಿಸಿದರೆ ಅವರಿಗೆ ಭೌತಶಾಸ್ತ್ರದ ಗೀಳು ಹೇಗೆ ಅಂಟಿಕೊಂಡಿತು. ಏಕೆಂದರೆ ಅವರು ಸೈಂಟ್ ಪೀಟರ್ಸ್‌ಬರ್ಗ್‌ನ ಇಂಪೀರಿಯಲ್ ಫಾರೆಸ್ಟ್ರಿ ಇನ್‌ಸ್ಟಿಟ್ಯೂಟ್ (ಈಗ ಇದರ ಹೆಸರನ್ನು ಸೈಂಟ್ ಪೀಟರ್ಸ್‌ಬರ್ಗ್ ಸ್ಟೇಟ್ ಫಾರೆಸ್ಟ್ ಇನ್‌ಸ್ಟಿಟ್ಯೂಟ್ ಟೆಕ್ನಿಕಲ್ ಯೂನಿವರ್ಸಿಟಿ ಎಂದು ಬದಲಿಸಲಾಗಿದೆ.) ಆದರೆ ಮುಂದೆ 1909ಯಲ್ಲಿ ಆಸ್ಟ್ರಿಯಾದ ಭೌತ ವಿಜ್ಞಾನಿ ಆರ್ನ್ಸ್ಟ್ ಮ್ಯಾಕ್ ಅವರ ಪ್ರಭಾವಕ್ಕೊಳಗಾದ ಪೆರೆಲ್ಮನ್‌ಗೆ ಭೌತಶಾಸ್ತ್ರದ ಬಗ್ಗೆ ಆಸಕ್ತಿ ಬೆಳೆಯಿತು. ಜೊತೆಗೆ ಮ್ಯಾಕ್ ಅವರಿಂದ ಪ್ರಭಾವಿತನಾಗಿದ್ದ ವಿಜ್ಞಾನ ಲೇಖಕ ಅಲೆಕ್ಸಾಂಡರ್ ಬೊಗ್ಡನೋವ್ ಅವರ ಪ್ರಭಾವವೂ ಇವರ ಮೇಲೆ ಆಯಿತು.

ಪೆರೆಲ್ಮನನು 'ನೇಚರ್ ಆ್ಯಂಡ್ ಪೀಪಲ್' ಮತ್ತು 'ಇನ್ ದ ವರ್ಕ್‌ಶಾಪ್ ಆಫ್ ನೇಚರ್' ಎಂಬ ಎರಡು ಪ್ರಸಿದ್ಧ ವಿಜ್ಞಾನ ನಿಯತಕಾಲಿಕಗಳ ಸಂಪಾದಕರಾಗಿದ್ದರು. ಇವರ ಪುಸ್ತಕಗಳು ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಅನುವಾದವಾಗಿದೆ. ಇಂಗ್ಲಿಷ್‌ಗೆ ತರ್ಜುಮೆಯಾದ "ಆಸ್ಟ್ರಾನಮಿ ಫಾರ್ ಎಂಟರ್‌ಟೈನ್‌ಮೆಂಟ್", "ಫಿಸಿಕ್ಸ್ ಫಾರ್ ಎಂಟರ್‌ಟೈನ್‌ಮೆಂಟ್" ಇಂತಹ ವಿಜ್ಞಾನ ಲೇಖನಗಳನ್ನು ರಚಿಸಿದ್ದಾರೆ. 1913ರಲ್ಲಿ ರಷ್ಯಾದ ಅಂಗಡಿಗಳು ಅವರ ಫಿಸಿಕ್ಸ್ ಫಾರ್ ಎಂಟರ್‌ಟೈನ್‌ಮೆಂಟ್ ಪುಸ್ತಕವನ್ನು ಮಾರಲು ಆರಂಭಿಸಿದವು. ಅದು ಅಲ್ಲಿನ ಮಾರುಕಟ್ಟೆಯಲ್ಲಿ ಹೊಸ ಸಂಚಲನವನ್ನು ಮೂಡಿಸಿತ್ತು. ಜನರು ಈ ಪುಸ್ತಕವನ್ನು ಕೊಳ್ಳಲು ಮುಗಿಬಿದ್ದರು. ಅವರ ಭಾಷೆ ಇಷ್ಟೊಂದು ಸರಳವಾಗಿತ್ತೆಂದರೆ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಕೂಡ ವಿಜ್ಞಾನದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹುಡುಕಲು ಪ್ರಾರಂಭಿಸಿದರು. ಇವರ ಕ್ರಿಯಾಶೀಲತೆ, ಬರವಣಿಗೆಯ ಶೈಲಿ ಎಲ್ಲವೂ ಸಾಟಿಯಿಲ್ಲದ್ದು ಎಂದು ಬರೆದಿದ್ದಾರೆ.

ಹಸಿವೇ ಸಾವಿಗೆ ಕಾರಣವಾಯಿತೇ:

ವಿಜ್ಞಾನದ ಬಗ್ಗೆ ಇಷ್ಟೊಂದು ಕಾಳಜಿ ಹೊಂದಿದ್ದ, ವಿಜ್ಞಾನವನ್ನೆ ಉಸಿರಾಡುತ್ತಿದ್ದ ಪೆರೆಲ್ಮನ್ ಅವರ ಅಂತ್ಯ ಮಾತ್ರ ದುರಂತವಾಗಿತ್ತು. ಅಷ್ಟೊಂದು ಹೆಸರುವಾಸಿಯಾಗಿದ್ದ ಈ ಮಹಾನ್ ಲೇಖಕ ಸತ್ತಿದ್ದು ಮಾತ್ರ ಹಸಿವಿನಿಂದ! ಎರಡನೇ ಮಹಾಯುದ್ಧ ಜರ್ಮನಿ ಲೆನಿನ್‌ಗ್ರಾದ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡಾಗ 872 ದಿನಗಳಷ್ಟು ದೀರ್ಘಕಾಲ ಇಡೀ ಊರಿಗೆ ಆಹಾರ, ಔಷಧಿಗಳ ಸರಬರಾಜನ್ನು ನಿಲ್ಲಿಸಲಾಗಿತ್ತು. ಈ ಸಮಯದಲ್ಲಿ ಸುಮಾರು 11 ಲಕ್ಷ ಜನ ಸಾವನ್ನಪ್ಪಿದ್ದರು. ಅದರಲ್ಲಿ ಇವರೂ ಒಬ್ಬರಾಗಿದ್ದರು. ವಿಜ್ಞಾನ ಕಂಡ ಬಹು ದೊಡ್ಡ ವಿಜ್ಞಾನಿ ಲೇಖಕನ ಸಾವು ಮಾತ್ರ ಒಂದು ವಿಧಿಯ ಕ್ರೂರ ಅಣಕವೇ ಸರಿ.

●

ಭಾಸ್ಕರಾಚಾರ್ಯ

✍ **ಭಾಗ್ಯಶ್ರೀ ಡಿ. ಬಿ.,** ಪ್ರಥಮ ಬಿ.ಎ.

ಭಾಸ್ಕರಾಚಾರ್ಯ ಹುಟ್ಟಿದ್ದು ನಮ್ಮ ರಾಜ್ಯದ ಬಿಜಾಪುರದ ಬಿಜ್ಜಡ ಬೀಡ ಎಂಬ ಊರಿನಲ್ಲಿ. ಮೊನ್ನೆ ಮೊನ್ನೆ ಬಿಜಾಪುರದ ಹೆಸರನ್ನು ವಿಜಯಪುರ ಎಂದು ಬದಲಾಯಿಸಿದರಲ್ಲವೇ? ಹಿಂದೆ, ಭಾಸ್ಕರಾಚಾರ್ಯನ ಕಾಲದಲ್ಲಿ ಇದಕ್ಕೆ ವಿಜಯಪುರವೆಂಬ ಹೆಸರೇ ಇತ್ತು. ಭಾಸ್ಕರಾಚಾರ್ಯನ ಕಾಲಘಟ್ಟ ಕ್ರಿ.ಶ. 1114. ಇವನ ತಂದೆ ಮಹೇಶ್ವರೋಪಾಧ್ಯಾಯ. ತಂದೆಯೂ ಗಣಿತ ಹಾಗೂ ಖಗೋಳಶಾಸ್ತ್ರಗಳ ಪರಿಣತ, ಹೀಗಾಗಿ ಮೂಲಪಾಠಗಳನ್ನು ತಂದೆಯಿಂದಲೇ ಕಲಿತ.

ಉಜ್ಜಯಿನಿ ನಗರದಲ್ಲಿದ್ದ ಖಗೋಳಶಾಸ್ತ್ರ ಪ್ರಯೋಗಾಲಯದ ಮುಖ್ಯಸ್ಥನಾಗಿ ನೇಮಕಗೊಂಡ. ಅದಾಗಲೇ ವರಾಹಮಿಹಿರ, ಬ್ರಹ್ಮಗುಪ್ತ ಮೊದಲಾದ ವಿಜ್ಞಾನಿಗಳು ಮಾಡಿದ್ದ ಕೆಲಸಗಳನ್ನು ಚೆನ್ನಾಗಿ ಅಭ್ಯಸಿಸಿದ. ಅದನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದ. ಸೂತ್ರಗಳನ್ನು ಸರಳೀಕರಿಸಿದ. ಈತನ ಸಮೀಕರಣಗಳನ್ನು ಅರ್ಥೈಸಿಕೊಂಡು ಬಿಡಿಸಲು ಯುರೋಪಿನಂಥ ದೇಶಗಳಿಗೇ ಹಲವಾರು ವರ್ಷಗಳೇ ಬೇಕಾದವು.

ಭಾಸ್ಕರಾಚಾರ್ಯ ಆರು ಗ್ರಂಥಗಳನ್ನು ರಚಿಸಿದ್ದಾನೆ. '**ಸಿದ್ಧಾಂತ ಶಿರೋಮಣಿ**' ಅದರಲ್ಲೊಂದು ಗಣಿತಾತ್ಮಕ ಖಗೋಳಶಾಸ್ತ್ರದ ಕುರಿತ ಪುಸ್ತಕವಿದು. ಈ ಹಿಂದೆ ಖಗೋಳಶಾಸ್ತ್ರದ ಬಗ್ಗೆ ಇತರ ಲೇಖಕರು ಬರೆದ ಕ್ರಮದಲ್ಲೇ ಈ ಪುಸ್ತಕವನ್ನು ರಚಿಸಿದ್ದಾನೆ. ಇದರ ಮೊದಲ 15 ಅಧ್ಯಾಯಗಳಲ್ಲಿ ಗ್ರಹಗಳ ಸರಾಸರಿ ಅಕ್ಷಾಂಶ, ರೇಖಾಂಶ, ಚಂದ್ರಗ್ರಹಣ, ಸೂರ್ಯಗ್ರಹಣ, ಸೂರ್ಯೋದಯ, ಅಸ್ತಮಾನ, ನಕ್ಷತ್ರ ಹಾಗೂ ಗ್ರಹಗಳ ನಡುವಿನ ಸಂಯೋಜನೆಯ ಕುರಿತಾದ ಸಂಪೂರ್ಣ ಮಾಹಿತಿಗಳಿವೆ.

ಇದರ ಎರಡನೆಯ ಅಧ್ಯಾಯದಲ್ಲಿ ಗೋಳಗಳ ಗುಣಲಕ್ಷಣ, ಚಲನೆಗಳ ಲೆಕ್ಕಾಚಾರಗಳಿವೆ. ಸಾಮಾನ್ಯವಾಗಿ ಅಲ್ಲಿ ಕಾಣಿಸುವ ಸಮಸ್ಯೆಗಳ ಕುರಿತಾಗಿಯೂ ಸುದೀರ್ಘ ವಿವರಣೆ ನೀಡಿದ್ದಾನೆ. ಈತನ ಇನ್ನೊಂದು ಪ್ರಸಿದ್ಧ ಕೃತಿ '**ಲೀಲಾವತಿ**', ತನ್ನ ಮಗಳ ವಿನೋದಕ್ಕಾಗಿ ಈ ಪುಸ್ತಕ ಬರೆದ ಎಂದು ಹೇಳಲಾಗುತ್ತಿದೆ. ಅಂಕಗಣಿತದ ಸಮಸ್ಯೆಗಳಿಗೆ ಸರಳವಾದ ಉತ್ತರಗಳು ಇಲ್ಲಿ ಸಿಗುತ್ತವೆ. ಮುಂದೆ ಅದೆಷ್ಟೋ ವರ್ಷಗಳ ಬಳಿಕ ನ್ಯೂಟನ್, ಲಿಬಿನೆಟ್ಸ್ ಕಂಡುಹಿಡಿದ ಕ್ಯಾಲ್ಕ್ಯುಲಸ್ (Calculus) ಭಾಸ್ಕರಾಚಾರ್ಯ ಅಂದೇ ಬಳಸಿದ್ದ ಎಂದೂ ಹೇಳಲಾಗುತ್ತದೆ.

ಆತ ಬರೆದ ಪುಸ್ತಕಕ್ಕೆ 'ಲೀಲಾವತಿ' ಹೆಸರಿಡಲು ಮತ್ತೊಂದು ಕಾರಣವಿತ್ತು. ಅದು ಆತನ ಮುದ್ದಿನ ಮಗಳ ಹೆಸರಾಗಿತ್ತು. ಆ ಬಗ್ಗೆ ಒಂದು ಕತೆಯಿದೆ. ಬಾಲ್ಯದಲ್ಲಿ ಆಕೆಯ ಜಾತಕ ಪರಿಶೀಲನೆ ಮಾಡಿದ ಸಂದರ್ಭದಲ್ಲಿ, ನಿಶ್ಚಿತ ಮುಹೂರ್ತದಲ್ಲಿ ಆಕೆಯ ವಿವಾಹ ನಡೆಯದೇ ಹೋದರೆ ಆಕೆ ಜೀವನ ಪರ್ಯಂತ ವಿವಾಹವಿಲ್ಲದೆ ಉಳಿದು ಹೋಗುತ್ತಾಳೆ ಎಂದು ತಿಳಿದು ಬರುತ್ತದೆ. ತಂದೆ ಇದನ್ನೊಂದು ಸವಾಲಾಗಿ ಸ್ವೀಕರಿಸಿ ಮಗಳಿಗೊಂದು ಚೆಂದದ ಬದುಕು ಕೊಡಲು ಪಣತೊಡುತ್ತಾನೆ.

ಮಗಳು ಬೆಳೆದು ನಿಂತು ಮದುವೆ ವಯಸ್ಸಿಗೆ ಬಂದಾಗ ಸೂಕ್ತ ವರನನ್ನು ಹುಡುಕಿ ಮದುವೆ ನಿಶ್ಚಯ ಮಾಡುತ್ತಾನೆ. ಖಗೋಳ ಶಾಸ್ತ್ರ ಹಾಗೂ ಜ್ಯೋತಿಶಾಸ್ತ್ರದ ನೆರವಿನಿಂದ ಸರಿಯಾದ ಗಂಟೆ, ನಿಮಿಷ ತಿಳಿದುಕೊಳ್ಳಲು ಘಳಿಗೆ ಯಂತ್ರ ತಯಾರಿಸಿದ. ಹಿಂದೆಲ್ಲಾ ಸಮಯ ತಿಳಿದುಕೊಳ್ಳಲು ಈಗಿನಂತೆ ಗಡಿಯಾರ ಇರಲಿಲ್ಲವಲ್ಲ. ಹೀಗಾಗಿ ನೀರಿನ ಯಂತ್ರವೊಂದರ ಮೂಲಕ ಸಮಯ ತಿಳಿಯುತ್ತಿದ್ದರು. ಸಣ್ಣ ರಂಧ್ರವಿರುವ ಪಾತ್ರೆಯಿಂದ ಕೆಳಬಿದ್ದ ನೀರಿನ ಪ್ರಮಾಣದ ಮೇಲೆ ಸೂರ್ಯ ಹುಟ್ಟಿ ಎಷ್ಟು ಹೊತ್ತಾಯಿತು ಎಂದು ತಿಳಿಯುತ್ತಿದ್ದರು. ಗಂಟೆಗಿಂತಲೂ ಘಳಿಗೆಯನ್ನು ಹೆಚ್ಚು ಅವಲಂಬಿಸಿದ್ದರು. ಒಂದು ಘಳಿಗೆ ಎಂದರೆ 24 ನಿಮಿಷ, ಹೀಗಾಗಿ ಎರಡೂವರೆ ಘಳಿಗೆ ಅಂದರೆ ಒಂದು ಗಂಟೆ. ಒಂದು ದಿನಕ್ಕೆ 60 ಘಳಿಗೆ ... ಹೀಗಿತ್ತು ಲೆಕ್ಕಾಚಾರ.

ಈ ರೀತಿ ಘಳಿಗೆ ಲೆಕ್ಕಾಚಾರದ ಆಧಾರದ ಮೇಲೆ ಮಗಳಿಗೆ ಮದುವೆಯಾಗಬೇಕಿದ್ದ ಸಮಯವನ್ನೇ ಎಲ್ಲರೂ ಕಾಯುತ್ತಿದ್ದರು. ಮತ್ತೆ ಮತ್ತೆ ನೋಡುತ್ತಿದ್ದ ಕಾರಣಕ್ಕೋ ಏನೋ ಮಗಳು ಲೀಲಾವತಿ ಮುತ್ತಿನ ಸರವೊಂದು ತುಂಡಾಗಿ ಒಂದು ಮುತ್ತು ನೀರಿನ ಯಂತ್ರದ ಮೇಲೆ ಬಿತ್ತು. ಸಮಯ ತೋರಿಸುತ್ತಿದ್ದ ಯಂತ್ರ ಕೆಟ್ಟು ನಿಂತಿತು. ಮತ್ಯಾವುದೋ ಕಾರಣಕ್ಕೆ ಮದುವೆಯೂ ನಿಂತಿತು. ಮುಂದೆಂದೂ ಆ ಮದುವೆ ನಡೆಯಲೇ ಇಲ್ಲ. ಭಾಸ್ಕರಾಚಾರ್ಯರ ಮಗಳು ಅವಿವಾಹಿತಳಾಗಿಯೇ ಉಳಿದಳು ಎಂದು ಹೇಳಲಾಗುತ್ತದೆ.

ಈ ಕೃತಿಯಲ್ಲಿ 277 ಶ್ಲೋಕಗಳಿವೆ. ಅಂಕಗಣಿತದ ಕೋಷ್ಟಕಗಳು, ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ, ವರ್ಗ, ಘನ, ವಿಲೋಮ, ಭಿನ್ನರಾಶಿ, ವರ್ಗ ಸಮೀಕರಣ, ಜ್ಯಾಮಿತಿಗಳ ಕಲಿಕೆಗೆ ಸುಲಭ ಸೂತ್ರಗಳಿವೆ. ಸರಳವಾಗಿ ಗಣಿತ ಕಲಿಸುವ ಒಂದು ಪ್ರಕಾರ ಇಲ್ಲಿದೆ ನೋಡಿ:

ಬೀಜಗಣಿತ ಒಂದು ಪ್ರಶ್ನೆ ಹೀಗಿದೆ:

ತರುಣಿಯೊಬ್ಬಳ ಮುತ್ತಿನ ಹಾರ ಕಿತ್ತು ಹೋಗಿ ಅದರ 1/3 ರಷ್ಟು ಮುತ್ತು ನೆಲದ ಮೇಲೂ, 1/5 ರಷ್ಟು ಹಾಸಿಗೆಯಲ್ಲೂ, 1/6 ರಷ್ಟು ಆಕೆಯ ಕೈಯಲ್ಲೂ ಇದ್ದು, 1/10 ರಷ್ಟು ಗಂಡನು ಸಂಗ್ರಹಿಸಿ, ಉಳಿದ 6 ಮುತ್ತುಗಳು ದಾರದಲ್ಲಿ ಇದ್ದರೆ ಆ ಹಾರದಲ್ಲಿ ಎಷ್ಟು ಮುತ್ತುಗಳಿದ್ದವು ?

ಸರದಲ್ಲಿದ್ದ ಮುತ್ತುಗಳನ್ನು 'x' ಅಂದುಕೊಂಡರೆ,

ನೆಲದ ಮೇಲೆ ಉದುರಿದ್ದು = x/3

ಹಾಸಿಗೆಯಲ್ಲಿದ್ದು = x/5

ಅವಳು ಹೆಕ್ಕಿದ್ದು = x/6

ಗಂಡನಿಗೆ ಸಿಕ್ಕಿದ್ದು = x/10

ದಾರದಲ್ಲೇ ಉಳಿದದ್ದು = 6 ಎಲ್ಲವನ್ನೂ ಸಮೀಕರಿಸಿದಾಗ,

ಹಾರದಲ್ಲಿದ್ದ ಮುತ್ತುಗಳು =

x = x/3 + x/5 + x/6 + x/10 + 6)

= (10 × + 6 × + 5 × + 3 ×)/30

(24 × + 180) 30 = x

24 × + 180) = 30 x

6x = 180

x = 30

ಹೀಗಾಗಿ ಹಾರದಲ್ಲಿದ್ದ ಒಟ್ಟು ಮುತ್ತುಗಳು **30.**

ಭಾಸ್ಕರಾಚಾರ್ಯ ಅದೆಷ್ಟೋ ವರ್ಷಗಳ ಹಿಂದೆ ಸರಳವಾಗಿ ಬಿಡಿಸಿದ ಗಣಿತದ ಈ ಸಮಸ್ಯೆಯನ್ನು ಇಂದಿನ ತಜ್ಞರೂ ಸರಿಯೆಂದು ಒಪ್ಪಿಕೊಂಡಿದ್ದಾರೆ. ದಶಮಾಂಶ ವರ್ಗೀಕರಣವನ್ನು ಈತನೇ ಪರಿಚಯಿಸಿದ ಎಂದೂ ಹೇಳುತ್ತಾರೆ. ಈ ಬಗ್ಗೆ ಹೆಚ್ಚಿನ ಪುರಾವೆಗಳಿಲ್ಲ. ಹೀಗಾಗಿ ದಶಮಾಂಶ ಪದ್ಧತಿಯನ್ನು ಈತನೇ ಅಭಿವೃದ್ಧಿಪಡಿಸಿದ ಎಂದು ನಂಬಲಾಗಿದೆ.

ಭಾಸ್ಕರಾಚಾರ್ಯ ಸುಮಾರು 1186ರಲ್ಲಿ ಸಾವನ್ನಪ್ಪಿದ ಬಳಿಕ ಈತನ ಮಗ ಲೋಕಸಮುದ್ರ ತಂದೆಯ ಸಾಧನೆಗಳನ್ನು ಜಗಜ್ಜಾಹೀರು ಮಾಡಲು ಶಾಲೆಯೊಂದನ್ನು ತೆರೆದ. ಈತನೂ ತಂದೆಯಿಂದ ಗಣಿತಶಾಸ್ತ್ರದ ಬೋಧನೆಗಳನ್ನು ಪಡೆದಿದ್ದ.

ಕೊಡಬೇಕುತ್ತಮನಾದವಂಗೆ ಮಗಳಂ ಸತ್ಪಾತ್ರಕಂ ದಾನಮಂ ।
ಬಿಡಬೇಕ್ಕೆ ಧನಲೋಭ ಬಂಧುಜನರೊಳ್ ದುಷ್ಟಾತ್ಮರೊಳ್ ಗೋಷ್ಠಿಯಂ।।
ಇಡಬೇಕೀಶ್ವರನಲ್ಲಿ ಭಕ್ತಿ ರಸಮಂ ವಿಶ್ವಾಸಮಂ ಸ್ವಾಮಿಯೊಳ್ ।
ಇಡಬೇಕಿದ್ದುಣಬೇಕೆಲ್ಲೆ ಹರ ಹರಾ ಶ್ರೀ ಚೆನ್ನಸೋಮೇಶ್ವರಾ ।।

– ಸೋಮೇಶ್ವರ ಶತಕ

ಕನ್ನಡದಲ್ಲಿ ಶೇಕ್ಸ್‌ಪಿಯರ್

✍ **ದಿಶಾ ಜಿ.,** ತೃತೀಯ ಬಿ.ಕಾಂ.

ಕನ್ನಡಿಗರಿಗೆ ಶೇಕ್ಸ್‌ಪಿಯರ್‌ನ ಪರಿಚಯ ಬಹಳ ಹಳೆಯದು. ಇಂಗ್ಲಿಷ್ ಶಿಕ್ಷಣ ತೊಡಗಿದಾಗಲೇ ಅವನ ಪರಿಚಯವೂ ಆಯಿತು. ಜಗತ್ತಿನ ಕವಿ ಎಂದು ಯಾರನ್ನಾದರೂ ಕರೆಯುವುದಿದ್ದರೆ ಅದು ಶೇಕ್ಸ್‌ಪಿಯರ್‌ನನ್ನು ಮಾತ್ರ. ಅವನಿಂದ ಇಂಗ್ಲಿಷ್ ಭಾಷೆಗೆ ಬಂದ ಗೌರವ, ಪ್ರತಿಷ್ಠೆಗಳು ಅದ್ವಿತೀಯವಾದವು. ಇಂಗ್ಲಿಷ್ ಭಾಷೆ ಎಲ್ಲೆಲ್ಲಿ ಹರಡಿತೋ ಅಲ್ಲೆಲ್ಲಾ ಇಂಗ್ಲಿಷ್ ಶಿಕ್ಷಣವನ್ನು ಗೆದ್ದ ಅವನನ್ನು ಮೀರಿಸುವ ಮತ್ತೊಬ್ಬ ಲೇಖಕ ಇನ್ನೊಂದು ಭಾಷೆಯಲ್ಲಿ ಬರಲಿಲ್ಲವೆಂದರೂ ಉತ್ಪ್ರೇಕ್ಷೆಯಾಗಲಾರದು. ಅವನನ್ನು ಗೊತ್ತುಪಡಿಸದೆ ಯಾವ ಪಠ್ಯಕ್ರಮವೂ ಪೂರ್ಣವಾಗುವುದಿಲ್ಲ.

ಇಂಥ ಶೇಕ್ಸ್‌ಪಿಯರ್ ಎಂಬ ಒಬ್ಬ ವ್ಯಕ್ತಿಯೂ ನಿಜವಾಗಿಯೂ ಇದ್ದಾನೆ ಎಂಬುದು ಇಂದಿಗೂ ಚರ್ಚೆಯ ವಿಷಯವೇ. ಆದರೂ ಅವನನ್ನು ಕೈಬಿಡಲಾಗುವುದಿಲ್ಲ ! ಜಗತ್ತಿನ ಎಲ್ಲ ಜನರಂತೆ ಕನ್ನಡಿಗರಿಗೂ ಹತ್ತಿರದವನೇ ಆಗಿದ್ದಾನೆ. ಈ ಸಂಬಂಧ ಸುಮಾರು ಒಂದೂಕಾಲು ಶತಮಾನದಷ್ಟು ಹಳೆಯದು. ಅವನ ನಾಟಕಗಳು ಪೂರ್ತಿಯಾಗಿ ಅಥವಾ ಭಾಗ ಭಾಗವಾಗಿ ಅನುವಾದಗೊಂಡಿವೆ, ರೂಪಾಂತರಗೊಂಡಿವೆ, ರಂಗದ ಮೇಲೆ ರಾರಾಜಿಸಿವೆ, ಬಗೆಬಗೆ ವಿಮರ್ಶೆಯ, ಅಧ್ಯಯನ ಕೃತಿಗಳಿಗೆ ಕಾರಣವಾಗಿವೆ. ಅನೇಕ ಲೇಖಕರು, ವಿದ್ವಾಂಸರು ಶೇಕ್ಸ್‌ಪಿಯರ್ ಕೃತಿಗಳನ್ನು ಕನ್ನಡಕ್ಕೆ ತರುವುದರಲ್ಲಿ ಆಸಕ್ತರಾಗಿದ್ದರು. ನಾಟಕದ ಕಂಪೆನಿಗಳ ಅಗತ್ಯವನ್ನು ತುಂಬುವುದೂ ಅವರ ಉದ್ದೇಶವಾಗಿತ್ತು.

ಮಹಾ ಪ್ರತಿಭಾವಂತರಾಗಿದ್ದ, ಇಂಗ್ಲಿಷ್ ತಿಳಿಯದ ಬಸವಪ್ಪ ಶಾಸ್ತ್ರಿಗಳಂಥವರೂ ಮೂಲತಃ ಮತ್ತೊಬ್ಬರ ನೆರವು ಪಡೆದು ಶೇಕ್ಸ್‌ಪಿಯರ್ ಕೃತಿಯನ್ನು ಕನ್ನಡಕ್ಕೆ ಯಶಸ್ವಿಯಾಗಿ ತಂದರೆಂಬುದು ಗಮನಿಸಬೇಕಾದ ಸಂಗತಿ ಕುತೂಹಲದಾಯಕವಾದದ್ದು. ನಂಜುಂಡ ಶಾಸ್ತ್ರಿಗಳು ಮೂರು ದಶಕಗಳಿಗೂ ಹೆಚ್ಚು ಕಾಲ ನಮ್ಮ ರಾಜ್ಯದ ಬೇರೆ ಬೇರೆ ಕಾಲೇಜುಗಳಲ್ಲಿ ಇಂಗ್ಲಿಷ್ ಪಾಠ ಹೇಳಿದವರು. ತುಂಬ ಸಮರ್ಥ ಅಧ್ಯಾಪಕರೆಂದು ಹೆಸರು ಪಡೆದವರು. ಶೇಕ್ಸ್‌ಪಿಯರ್‌ನ ಹ್ಯಾಮ್‌ಲೆಟ್, ಕಿಂಗ್ ಲಿಯರ್, ಮ್ಯಾಕ್‌ಬೆತ್ ಮತ್ತು ಒಥೆಲೋ ನಾಟಕಗಳನ್ನೂ ಒಳ್ಳೆಯ ಕನ್ನಡ ಗದ್ಯದಲ್ಲಿ ನಿರೂಪಿಸಿದ್ದಾರೆ.

ಪ್ರಮುಖವಾಗಿ ಈ ನಾಟಕಗಳ ಕಥೆಯನ್ನು ಹೇಳುವುದೇ ಮುಖ್ಯ ಗುರಿಯಾಗಿದ್ದರೂ ಅಷ್ಟಕ್ಕೇ ನಿಲ್ಲುವುದಿಲ್ಲ. ಮುನ್ನುಡಿಕಾರರು ಹೇಳುವಂತೆ ''ನಾಟಕ ಪ್ರಬುದ್ಧ ಪ್ರೇಕ್ಷಕರಿಗೆ ಏನನ್ನು ಕೊಡಬಲ್ಲದು



ಎನ್ನುವುದನ್ನು ತಿಳಿಸುವುದರಲ್ಲಿಯೂ ಯಶಸ್ವಿಯಾಗಿದ್ದಾರೆ. ಈ ಬರವಣಿಗೆ ನಾಟಕಗಳನ್ನು ಪರಿಣಾಮಕಾರಿಯಾಗಿ ಪರಿಚಯಿಸುತ್ತವೆ. ಘನವಾದ ಕಥೆ ಶೇಕ್ಸ್‌ಪಿಯರ್‌ನ ನಾಟಕಗಳಲ್ಲಿ ಇದ್ದೇ ಇರುತ್ತದೆ. ಆ ಕಥೆಗಳನ್ನು ಸಮರ್ಥವಾಗಿ ನಿರೂಪಿಸುವುದರಲ್ಲಿಯೇ ಸ್ವಾರಸ್ಯವಿರುತ್ತದೆ. ನಾಟಕಗಳ ಬೆಲೆ ತೋರಿಸಿಕೊಳ್ಳುತ್ತದೆ.''

ತಮ್ಮ ನಿರೂಪಣೆಗೆ ಸುಪ್ರಸಿದ್ಧವಾದ ನಾಲ್ಕು ದುರಂತ ನಾಟಕಗಳನ್ನು ಆಯ್ದುಕೊಂಡಿರುವ ಶಾಸ್ತ್ರಿಗಳು ತಮ್ಮ ನಿರೂಪಣೆ 'ಸಬ್ಜೆಕ್ಟಿವ್' ಆಗಿ ಇದೆ ಎನ್ನುತ್ತಾರೆ. ಇದು ಹಾಗಿರುವುದು ಸಹಜ ಮತ್ತು ಅನಿವಾರ್ಯವೆಂದೇ ನನ್ನ ಭಾವನೆ. ಈ ನಾಲ್ಕು ನಾಟಕಗಳಲ್ಲಿ ತಾವು ಕಂಡ ಶೇಕ್ಸ್‌ಪಿಯರ್‌ನ ಜೀವನದೃಷ್ಟಿ, ಮನೋವಿಶ್ಲೇಷಣೆ ಮತ್ತು ವ್ಯಕ್ತಿಚಿತ್ರಗಳನ್ನು ವಿವರಿಸಿದ್ದಾರೆ. ಭಾಷಾಂತರ, ರೂಪಾಂತರ ಕ್ರಿಯೆಯನ್ನು ಲೇಖಕರು ಸಮಂಜಸವಾಗಿ ವಿವರಿಸಿದ್ದಾರೆ.

ಶೇಕ್ಸ್‌ಪಿಯರ್‌ನ ಕೃತಿಗಳು ಬಹಳಷ್ಟು ಸಂಖ್ಯೆಯಲ್ಲಿ ಕನ್ನಡದಲ್ಲಿ ಕಾಣಿಸಿಕೊಂಡಿದ್ದರೂ ಅವನ್ನೆಲ್ಲ ಒಂದೆಡೆ ತಂದು ವಿವೇಚಿಸುವ ಕೆಲಸವನ್ನು ಇದುವರೆಗೂ ಯಾರೂ ಮಾಡಿಲ್ಲ. ಇದು ತುರ್ತಾಗಿ ಆಗಬೇಕಾದ ಕೆಲಸವಾಗಿದೆ.

●

ಬಣ್ಣದ ಲೋಕ

✍ **ಚೇತನ ಶಾನುಬಾಗ್,** ಪ್ರಥಮ ಬಿ.ಎಸ್ಸಿ

ಈ ಸುಂದರ ಪ್ರಪಂಚವು ಬಣ್ಣಗಳಿಂದ ಕೂಡಿವೆ. ಈ ಜಗತ್ತಿನಲ್ಲಿ ಎಲ್ಲಾ ಜೀವ ಜಂತುಗಳು ತನ್ನ ಜೀವನದಲ್ಲಿ ವಿವಿಧ ಉದ್ದೇಶಕ್ಕಾಗಿ ಹಲವಾರು ತರಹದ ಬಣ್ಣಗಳನ್ನು ಅವಲಂಬಿಸಿಕೊಂಡಿವೆ. ಹೇಗೆ ನಾವು ನಮ್ಮ ಜೀವನದಲ್ಲಿ ಬಣ್ಣವನ್ನು ತಮ್ಮ ಸೌಂದರ್ಯಕ್ಕಾಗಿ ಉಪಯೋಗಿಸುತ್ತೇವೆ, ಹಾಗೆಯೇ ಪ್ರಾಣಿಗಳು ತಮ್ಮ ಆಹಾರಕ್ಕಾಗಿ, ರಕ್ಷಣೆಗಾಗಿ ಹಾಗೂ ಬೇರೆ ಜೀವಿಗಳನ್ನು ಆಕರ್ಷಿಸಲು ಬಣ್ಣವನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿರುತ್ತದೆ. ತಮ್ಮ ತಮ್ಮ ರಕ್ಷಣೆಗಾಗಿ, ಆಹಾರಕ್ಕಾಗಿ ಬಣ್ಣವನ್ನು ಬದಲಿಸುವ ಜೀವಿಗಳೆಂದರೆ:

1. ಪೆಸಿಫಿಕ್ ಮರ ಕಪ್ಪೆ [Pacific tree frog]

ಈ ಕಪ್ಪೆಗಳು ಕಂದು ಬಣ್ಣದಿಂದ ಹಸಿರು ಬಣ್ಣವನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ. ಅವು ರಕ್ಷಣೆಗಾಗಿ ತಮ್ಮ ಬಣ್ಣಗಳನ್ನು ಬದಲಿಸುತ್ತದೆ. ಈ ಕಪ್ಪೆಗಳು ಹೆಚ್ಚಾಗಿ ಹಸಿರು ಪ್ರದೇಶಗಳಲ್ಲಿ ಕಂಡು ಬರುತ್ತದೆ. ಹೆಚ್ಚಾಗಿ ಹಸಿರು ಅಥವಾ ಕಂದು ಬಣ್ಣದಲ್ಲಿ ಕಾಣಸಿಗುತ್ತದೆ. ಈ ಬಣ್ಣವನ್ನು ಬದಲಾಯಿಸುವ ಮಾರ್ಗಗಳು ತಮ್ಮ ಪರಿಸರದಲ್ಲಿ ಬಣ್ಣ ಬದಲಾವಣೆಯಿಂದ ಪ್ರಚೋದಿಸಲ್ಪಡುತ್ತದೆ. ಅವುಗಳ ಮೇಲಿನ ಭಾಗವು ಬಣ್ಣದಲ್ಲಿ ಪೂರ್ಣ ಬದಲಾವಣೆಗೆ ವಾರಗಳಿಂದ ತಿಂಗಳವರೆಗೆ ತೆಗೆದುಕೊಳ್ಳಬಹುದು. ಆದರೆ ಆರಂಭಿಕ ಬದಲಾವಣೆಗಳು ಕೆಲವು ಗಂಟೆಗಳಲ್ಲಿ ಸಂಭವಿಸಬಹುದು. ಇದು ಬದುಕಲು ಸಹಾಯಕಾರಿಯಾಗಿದೆ. ಇವುಗಳನ್ನು ಚೋರಸ್ ಕಪ್ಪೆ ಎಂದು ಕರೆಯುತ್ತಾರೆ.

2. ಕಟ್ಲ ಮೀನು [Catla fish]



ಇವುಗಳನ್ನು ''ಸಮುದ್ರದ ಗೋಸುಂಬೆಗಳು'' ಎಂದು ಕರೆಯುತ್ತಾರೆ. ಏಕೆಂದರೆ ಅವುಗಳ ಚರ್ಮದ ಬಣ್ಣವನ್ನು ವೇಗವಾಗಿ ಮಾರ್ಪಡಿಸುವ ಸಾಮರ್ಥ್ಯವನ್ನು ಹೊಂದಿದೆ. ಇದು 1 ಸೆಕೆಂಡಿನಲ್ಲಿ ಸಂಭವಿಸಬಹುದು. ಇವು ಇತರ ಕಟ್ಲ ಮೀನುಗಳಿಗೆ ಸಂವಹನ ಮಾಡಲು, ತಮ್ಮ ಅಡಗಿಸಿಕೊಳ್ಳಲು ಮತ್ತು ಸಂಭಾವ್ಯ ಪರಭಕ್ಷಕಗಳನ್ನು ಎಚ್ಚರಿಸುವುದಕ್ಕೆ ತನ್ನ ಬಣ್ಣವನ್ನು ಬದಲಾಯಿಸುತ್ತವೆ. ಸಾಮಾನ್ಯವಾಗಿ ಇವುಗಳು ಉಷ್ಣವಲಯದಲ್ಲಿ ಮತ್ತು ಸಮಶೀತೋಷ್ಣ ಸಮುದ್ರದಲ್ಲಿ ನೆಲೆಸುತ್ತವೆ. ಇವುಗಳ ಸರಾಸರಿ ಜೀವಿತಾವಧಿಯು ಸುಮಾರು 1-2 ವರ್ಷಗಳು.

3. ಆಕ್ಟೋಪಸ್ ಸೈನಿಯ [Octopus cyanea]

ಇವುಗಳು ತನ್ನ ಬಣ್ಣವನ್ನು ಮತ್ತು ಚರ್ಮದ ವಿನ್ಯಾಸವನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ. ಇವುಗಳು ಏಳು ಗಂಟೆಗಳಲ್ಲಿ ಸಾವಿರ ಬಾರಿ ತನ್ನ ಬಣ್ಣವನ್ನು ಬದಲಿಸುವ ವಿಶಿಷ್ಟ

ಸಾಮರ್ಥ್ಯವನ್ನು ಹೊಂದಿದೆ. ಇವುಗಳು ಸಾಮಾನ್ಯವಾಗಿ ಸಮುದ್ರದ ಆಳದಲ್ಲಿ ನೆಲಸಿರುತ್ತವೆ. ಇವುಗಳು ಬಂಡೆಯ ಕಲ್ಲುಗಳಲ್ಲಿ, ಹವಳದ ತಳದಲ್ಲಿ, ಅವುಗಳು ತಮ್ಮನ್ನು ತಾವು ಮರೆಮಾಚಿಕೊಳ್ಳುತ್ತದೆ. ತಮ್ಮನ್ನು ತಾವು ಸುತ್ತಮುತ್ತಲಿನ ಸ್ಥಿತಿಗೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಹಾಗೂ ಚಲಿಸುವ ಮೋಡಗಳ ನೆರಳನ್ನು ಅನುಕರಿಸುವ ಸಾಮರ್ಥ್ಯವನ್ನೂ ಹೊಂದಿದೆ.

4. ಸ್ಕ್ವಿಡ್ [Squid]

ಇವುಗಳು ಸಾಮಾನ್ಯವಾಗಿ ತಮ್ಮ ಬಣ್ಣಗಳನ್ನು ಮತ್ತು ತನ್ನ ಹತ್ತಿರದ ಇತರ ವಸ್ತುಗಳನ್ನು ಹೊಂದಿಸಲು ತನ್ನ ಚರ್ಮದ ರಚನೆಯನ್ನು ಬದಲಾಯಿಸಿಕೊಳ್ಳುತ್ತದೆ. ಇವುಗಳು ಸರಿಸುಮಾರು 15 ಸೆಂ.ಮೀ. ವರೆಗೆ ಬೆಳೆಯುತ್ತದೆ. ಇವುಗಳ ವಿಷವು ಮಾನವರಲ್ಲಿ ಮತ್ತು ಇತರ ಪ್ರಾಣಿಗಳಲ್ಲಿ ಉಸಿರಾಟದ ವೈಫಲ್ಯವನ್ನು ಉಂಟುಮಾಡಬಹುದು. ಇವುಗಳು ಇತರ ಪ್ರಾಣಿಗಳಿಗೆ ಎಚ್ಚರಿಸುವಿಕೆಯಲ್ಲೂ ಬಣ್ಣವನ್ನು ಬದಲಾಯಿಸುತ್ತವೆ.

5. ಊಸರವಳ್ಳಿ [Chameleon]

ಇವುಗಳು ತನ್ನ ಚರ್ಮದ ಬಣ್ಣ ಬದಲಿಸಲು ಪ್ರಸಿದ್ಧವಾದವು. ಇವುಗಳು ತನ್ನ ವೈರಿಗಳಿಂದ ತನ್ನನ್ನು ಕಾಪಾಡಿಕೊಳ್ಳಲು ಬಣ್ಣವನ್ನು ಬದಲಾಯಿಸಕೊಳ್ಳುತ್ತವೆ. ಇವುಗಳು ಹಲವಾರು ಬಣ್ಣಗಳಲ್ಲಿ ತಮ್ಮನ್ನು ಬದಲಾಯಿಸಿಕೊಳ್ಳಬಹುದು. ಇವುಗಳು ಚರ್ಮದ ಅಡಿಯಲ್ಲಿ ವಿಶೇಷ ಕೋಶಗಳ ಪದರವನ್ನು ಹೊಂದಿರುತ್ತವೆ ಮತ್ತು ತೇವಾಂಶ, ಬೆಳಕು ಮತ್ತು ಉಷ್ಣತೆಯ ಪ್ರತಿಕ್ರಿಯೆಯಾಗಿ ಬಣ್ಣವನ್ನು ಬದಲಾಯಿಸುತ್ತವೆ. ಸಾಮಾನ್ಯವಾಗಿ ಇವುಗಳು ಉತ್ತರ ಆಫ್ರಿಕಾ, ದಕ್ಷಿಣ ಯುರೋಪ್, ದಕ್ಷಿಣ ಭಾರತ, ಶ್ರೀಲಂಕಾ ಮತ್ತು ಸಣ್ಣ ದ್ವೀಪಗಳಲ್ಲಿ ವಾಸಿಸುತ್ತವೆ. ಹಲವಾರು ಜಾತಿಯ ಊಸರವಳ್ಳಿಗಳು ಅಳಿವಿನಂಚಿನಲ್ಲಿವೆ.

6. ಏಡಿ ಜೇಡ [Crab spider]

ಏಡಿ ಜೇಡಗಳ ಈ ಜಾತಿಯು ಮಾನವ ಕಣ್ಣಿನ ಫಲಿತಾಂಶಗಳನ್ನು, ಅವರು ಬೇಟೆಯನ್ನು ಹೊಂಚು ಹಾಕಿರುವ ಹೂವುಗಳಿಗೆ ಹೋಲಿಕೆಯಾಗಿ ತಮ್ಮ ದೇಹದ ಬಣ್ಣವನ್ನು ಬದಲಾಯಿಸುವಂತಹ ಸಾಮರ್ಥ್ಯವನ್ನು ಹೊಂದಿರುತ್ತವೆ.

ಕೆಲವು ಜೇಡಗಳು ತಮ್ಮ ಬಣ್ಣ ಬದಲಾವಣೆ ಪ್ರಕ್ರಿಯೆಯನ್ನು ಹೆಚ್ಚಿಸುವ ಹಳದಿ ವರ್ಣದ್ರವ್ಯವನ್ನು ಬಿಡುಗಡೆ ಮಾಡುತ್ತವೆ. ಇವುಗಳು ತನ್ನ ಬಿಳಿ ಬಣ್ಣದಿಂದ ತನ್ನನ್ನು ಹಳದಿ ಬಣ್ಣಕ್ಕೆ ತಿರುಗಲು ಸರಿಸುಮಾರು 10-25 ದಿನಗಳನ್ನು ತೆಗೆದುಕೊಳ್ಳುತ್ತವೆ. ಆದ್ದರಿಂದ ಇವುಗಳು ತಮ್ಮ ಬೇಟೆಯನ್ನು ಆಕ್ರಮಣ ಮಾಡುವ ಮೊದಲು ತಮ್ಮ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ತಾಳ್ಮೆಯಿಂದ ಕಾಯುತ್ತಿರುತ್ತವೆ.

7. ಫ್ಲೌಂಡರ್ [Flounder]

ಇವುಗಳು ನೈಸರ್ಗಿಕವಾಗಿ ಕಂದು ಬಣ್ಣದಾಗಿರುತ್ತವೆ. ಅವುಗಳು ತನ್ನ ಸುತ್ತಮುತ್ತಲಿನ ಪರಿಸರಕ್ಕೆ ಹೋಲುವಂತೆ ತನ್ನ ಬಣ್ಣವನ್ನು ಬದಲಾಯಿಸುತ್ತವೆ. ಇವುಗಳು ಬಣ್ಣವನ್ನು ಬದಲಿಸಲು ತನ್ನ ಚರ್ಮದ

ಒಳಗೆ ವಿಶೇಷ ಕೋಶಗಳನ್ನು ಹೊಂದಿವೆ. ಪ್ರಪಂಚದಾದ್ಯಂತ ಸಾಗರಗಳ ಕೆಳಭಾಗದಲ್ಲಿ ಕಂಡುಬರುವ ತೇಲುವ ಮೀನುಗಳಾಗಿವೆ. ಅವುಗಳು ತಮ್ಮನ್ನು ತಾವು ಪರಭಕ್ಷಕ ವಿರುದ್ಧ ತಮ್ಮನ್ನು ತಾವು ಮರೆಮಾಡುತ್ತವೆ. ಇವುಗಳು 22-60 ಸೆಂಟಿಮೀಟರ್‌ಗಳಷ್ಟು ಉದ್ದಕ್ಕೂ ಮತು 95 ಸೆಂಟಿಮೀಟರ್‌ಗಳಷ್ಟು ಉದ್ದಕ್ಕೂ ಬೆಳೆಯುತ್ತದೆ. ಇವುಗಳು ಮೀನು, ಮೊಟ್ಟೆಗಳನ್ನು ತಿನ್ನುತ್ತವೆ.

8. ಗೋಲ್ಡನ್ ಆಮೆ ಜೀರುಂಡೆ [Golden tortoise beetle]



ಇವುಗಳು ಉತ್ತರ ಅಮೇರಿಕಾಕ್ಕೆ ಸ್ಥಳೀಯವಾಗಿರುವ ಒಂದು ಸಣ್ಣ ಕೀಟವಾಗಿದೆ. ಇವುಗಳನ್ನು 'ಗೋಲ್ಡನ್ ಬಗ್ಸ್' ಎಂದು ಕರೆಯುತ್ತಾರೆ. ಬಣ್ಣವನ್ನು ವೇಗವಾಗಿ ಬದಲಿಸುವ ಸಾಮರ್ಥ್ಯವು ಗೋಲ್ಡನ್ ಆಮೆ ಜೀರುಂಡೆಯು, ಜೀರುಂಡೆಗಳ ಕುಟುಂಬದಲ್ಲಿ ಬಹಳ ವಿಶೇಷವಾಗಿರುತ್ತದೆ. ಬೆದರಿಕೆಯುಂಟಾದಾಗ, ಗೋಲ್ಡನ್ ಕಿತ್ತಳೆ ಬಣ್ಣಕ್ಕೆ ತನ್ನನ್ನು ಬದಲಾಯಿಸಿಕೊಳ್ಳುತ್ತವೆ. ಈ ಬದಲಾವಣೆಯು 2-3 ನಿಮಿಷಗಳಲ್ಲಿ ನಡೆಯುತ್ತದೆ.

9. ಗಬೂನ್ ವೈಪರ್ [Gaboon viper]

ಇವುಗಳು ರಾತ್ರಿಯಲ್ಲಿ ನಿಧಾನವಾಗಿ ಚಲಿಸುವ ಸಾಮರ್ಥ್ಯ ಹೊಂದಿದೆ. ಇವುಗಳು ಸಾಮಾನ್ಯವಾಗಿ ಹೊಂಚು ದಾಳಿಯಿಂದ ಬೇಟೆಯಾಡುತ್ತದೆ. ಅನೇಕ ವೇಳೆ ದೀರ್ಘ ಕಾಲದವರೆಗೆ ಚಲನೆಯನ್ನು ಕಳೆದುಕೊಳ್ಳುತ್ತವೆ. ಸೂಕ್ತವಾದ ಬೇಟೆಯನ್ನು ಹಾದು ಹೋಗಲು ಕಾಯುತ್ತವೆ. ಅವುಗಳ ದೇಹದ ರಚನೆ ಹಾಗೂ ವರ್ಣ ರಚನೆ ಅರಣ್ಯದ ನೆಲದ ಎಲೆಗಳ ಮತ್ತು ಬೇರುಗಳ ನಡುವೆ ಬದುಕಲು ಹಾಗೂ ತಮ್ಮನ್ನು ಕಾಪಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ.

10. ಮಿಮಿಕ್ ಆಕ್ಟೋಪಸ್ [Mimic octopus]

ಇವುಗಳು ಆಗ್ನೇಯ ಏಷ್ಯಾದ ಪ್ರದೇಶದಲ್ಲಿ ಕಂಡುಬರುತ್ತವೆ. ಇವು ಇತರ ಆಕ್ಟೋಪಸ್‌ನಂತೆ ತಮ್ಮ ದೇಹದ ಬಣ್ಣವನ್ನು ಬದಲಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಇವುಗಳು ಹಲವಾರು ಪ್ರಾಣಿಗಳನ್ನು ಅನುಸರಿಸುವಿಕೆಯ ಮೂಲಕ ತನ್ನನ್ನು ತಾನು ಕಾಪಾಡಿಕೊಳ್ಳುತ್ತದೆ. ಪರಭಕ್ಷಕಗಳನ್ನು ತಪ್ಪಿಸಿಕೊಳ್ಳುವ ಸಲುವಾಗಿ ವೈವಿಧ್ಯಮಯ ಶ್ರೇಣಿಯ ರೂಪಗಳನ್ನು ಅನುಕರಿಸುವ ಏಕೈಕ ಆಕ್ಟೋಪಸ್. ಇವುಗಳು ಒಂದಕ್ಕಿಂತ ಹೆಚ್ಚು ಇತರ ಜಾತಿಗಳನ್ನು ಅನುಕರಿಸುವ ಮೂಲ ಪ್ರಭೇದವಾಗಿವೆ.

11. ಆರ್ಕ್ಟಿಕ್ ಫಾಕ್ಸ್ [Arctic fox]

ಇವು ಶೀತಲಿಕರಣ ತಾಪಮಾನವನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಅವುಗಳ ದುಂಡಗಿನ ದೇಹದ ಆಕಾರ ಮತ್ತು ಸಣ್ಣ ಕಾಲುಗಳು ಮತ್ತು ಕಿವಿಗಳು ಕೂಡಾ ಶಾಖವನ್ನು ನಿಯಂತ್ರಿಸುತ್ತವೆ. ಇವುಗಳು 46-68 ಸೆಂ.ಮಿ. ಉದ್ದ ಮತ್ತು 7 ಕೆ.ಜಿ. ತೂಕವಿರುತ್ತವೆ. ಇವುಗಳು ಮೊಲವನ್ನು ಮತ್ತು ಮೀನುಗಳಂತಹ ಬೇಟೆಯನ್ನು ಹಿಡಿಯುತ್ತದೆ. ಮುಂದಿನ ಬೇಸಿಗೆಯಲ್ಲಿ ಅವುಗಳು ಕಂದು ಬಣ್ಣಕ್ಕೆ ಬದಲಾಗುತ್ತದೆ ಹಾಗೂ ಪರಭಕ್ಷಕರಿಂದ ಅಡಗಿಕೊಳ್ಳಲು ಸಹಾಯ ಮಾಡುತ್ತದೆ. ●

ಪ್ರಕೃತಿ ವಿಕೋಪಕ್ಕೆ ಪರಿಸರ ನಾಶವೇ ಕಾರಣ

✍ **ಶ್ರೇಯಾ ಎಸ್.,** ದ್ವಿತೀಯ ಪಿ.ಯು.ಸಿ.

ಒಂದು ಭೂಕಂಪ, ಒಂದು ಚಂಡಮಾರುತ, ಒಂದು ಸುನಾಮಿ, ಭೂಕುಸಿತ ಸಾವಿರಾರು ಪ್ರಾಣಿಗಳನ್ನು ಬಲಿ ತೆಗೆದುಕೊಂಡು ಬಿಡುತ್ತದೆ. ಲಕ್ಷಾಂತರ ಜನರನ್ನು ನಿರ್ಗತಿಕರನ್ನಾಗಿ ಮಾಡುತ್ತವೆ. ಅಪಾರ ಪ್ರಮಾಣದಲ್ಲಿ ಆಸ್ತಿ-ಪಾಸ್ತಿಗಳಿಗೆ ಹಾನಿಯಾಗುತ್ತದೆ. ತಕ್ಷಣ ಎಚ್ಚೆತ್ತುಕೊಳ್ಳುವ ಜನಸಾಮಾನ್ಯರು ಸಮಾರೋಪಾದಿಯಲ್ಲಿ ಸಂಕಷ್ಟಕ್ಕೆ ಸಿಲುಕಿದವರಿಗೆ ಸಹಾಯಹಸ್ತ ಚಾಚಿ ಮಾನವೀಯತೆ ಮೆರೆಯುತ್ತಾರೆ. ಇನ್ನೊಂದೆಡೆ ಪರಿಸರ ಸಂರಕ್ಷಣೆಯ ಕೂಗು, ಜಾಗೃತಿಯ ಮಾತುಗಳು ಮೇಲಿಂದ ಮೇಲೆ ಕೇಳಿಬರುತ್ತದೆ. ಆದರೆ ಒಂದಿಷ್ಟು ದಿನಗಳು ಕಳೆದ ಮೇಲೆ ಪರಿಸರ ಸಂರಕ್ಷಣೆ ಕೂಡ ಮರೆತು ಹೋಗುತ್ತದೆ. ಪರಿಸರದ ಮೇಲೆ ಮನುಷ್ಯರ ದಬ್ಬಾಳಿಕೆ ಮತ್ತೆ ಮುಂದುವರಿಯುತ್ತದೆ.

ನಮ್ಮ ಪರಿಸರ ಸಂರಕ್ಷಣೆಯ ವೈಖರಿ ಹೇಗಿದೆಯೆಂದರೆ ಒಂದು ಮರವನ್ನು ಕಡಿದು ಅದರಿಂದ ತಯಾರಿಸಿದ ಕಾಗದದ ಮೇಲೆ ದಪ್ಪಕ್ಷರಗಳಲ್ಲಿ ''ಮರ ಬೆಳೆಸಿ, ಕಾಡು ಉಳಿಸಿ, ಕಾಡು ಬೆಳೆಸಿ, ನಾಡು ಉಳಿಸಿ'' ಎಂಬ ಘೋಷವಾಕ್ಯಗಳೊಂದಿಗೆ ಬೀದಿಯಲ್ಲಿ ಸಂಚರಿಸುತ್ತೇವೆ.

ನಮ್ಮ ಪರಿಸರದಲ್ಲಿ ಉಂಟಾಗುವ ಬದಲಾವಣೆಯೇ ವಿಕೋಪ. ಇದನ್ನು ನಾವು ಎರಡು ರೀತಿಯಲ್ಲಿ ಕಾಣಬೇಕಾಗುತ್ತದೆ. ಒಂದು ನೈಸರ್ಗಿಕ ಬದಲಾವಣೆ, ಇನ್ನೊಂದು ಮನುಷ್ಯನ ಚಟುವಟಿಕೆಗಳಿಂದ ಉಂಟಾಗುವ ಬದಲಾವಣೆಯಿಂದ ಉಂಟಾಗುವುದು. ಈ ಬದಲಾವಣೆಗಳಿಂದ ನೈಸರ್ಗಿಕ ಸಂಪನ್ಮೂಲಗಳಾದ ವಾಯು, ಜಲ, ಮಣ್ಣಿನ ವಿವಿಧ ಪ್ರಮಾಣಗಳಲ್ಲಿ ಏರಿಳಿತವಾಗುತ್ತದೆ. ಇದನ್ನು ನಾವು ಮಾಲಿನ್ಯ ಎಂದು ಹೇಳುತ್ತೇವೆ. ಇದರ ಗಂಭೀರ ಪರಿಣಾಮವೇ ವಿಕೋಪ. ನೈಸರ್ಗಿಕ ವಿಕೋಪಕ್ಕಿಂತ ಮನುಷ್ಯನ ಚಟುವಟಿಕೆಗಳಿಂದ ಉಂಟಾಗುವ ಮಾಲಿನ್ಯವೇ ಹೆಚ್ಚು ಭಯಂಕರವಾದುದು. ನೈಸರ್ಗಿಕ ಮಾಲಿನ್ಯದ ಪರಿಣಾಮ ಹಲವು ಶತಮಾನಗಳ ಹಿಂದೆ ಒಂದು ಬಲವಾದ ಬಿರುಗಾಳಿಯಿಂದ ಮರಗಳು ಮೇಲೆದ್ದು, ಆ ವಾತಾವರಣದಲ್ಲಿ ಜೀವಿಸುತ್ತಿದ್ದ ಪ್ರಾಣಿಗಳಿಗೆ ಉಸಿರಾಡಲು ಆಗದಷ್ಟು ಮಾಲಿನ್ಯವಾಗಿ ಅವುಗಳ ಸಂತತಿಯೇ ನಶಿಸಿಹೋಯಿತು. ಇದು ನೈಸರ್ಗಿಕ ಮಾಲಿನ್ಯದಿಂದ ಉಂಟಾದ ದುರಂತ. ಆದರೆ ಮನುಷ್ಯನ ಚಟುವಟಿಕೆಗಳಿಂದ ಉಂಟಾದ ಮಾಲಿನ್ಯದಿಂದ ಪ್ರತಿ ವರ್ಷ ಒಂದಲ್ಲ ಒಂದು ಪ್ರದೇಶದಲ್ಲಿ ಒಂದಲ್ಲ ಒಂದು ರೀತಿಯ ವಿಕೋಪ ಘಟಿಸುತ್ತಲೇ ಇದೆ. ಆದರೆ ಇದನ್ನೆಲ್ಲಾ ನೈಸರ್ಗಿಕ ಅಥವಾ ಪ್ರಕೃತಿ ವಿಕೋಪ ಎಂದು ಹಣೆಪಟ್ಟಿ ಹಚ್ಚಿ ನಮ್ಮ ತಪ್ಪುಗಳನ್ನು ಮುಚ್ಚಿ ಹಾಕಿಕೊಳ್ಳುತ್ತಿದ್ದೇವೆ.

ಮನುಷ್ಯನ ದುರಾಸೆಗಳಿಗೆ ಪ್ರತಿ ವರ್ಷ ಎಷ್ಟು ಪ್ರಮಾಣದಲ್ಲಿ ಅರಣ್ಯ ನಾಶವಾಗುತ್ತಿದೆ, ನೀರು ಕಲುಷಿತವಾಗುತ್ತಿದೆ, ಓಜೋನ್ ಪರದೆ ನಾಶವಾಗುತ್ತಿದೆ. ಇದಕ್ಕೆಲ್ಲಾ ಪ್ರಕೃತಿ ಕಾರಣವೇ? ಆಧುನಿಕತೆ ಮೈದಾಳಿದಂತೆ ಅರಣ್ಯ ನಾಶವಾಗುತ್ತಿದೆ, ದೇವರ ಕಾಡುಗಳು ಮರೆಯಾಗುತ್ತಿವೆ. ಮನೆಯ ಮುಂದೆ ಇದ್ದ ತೋಟಗಳು ಕಣ್ಮರೆಯಾಗುತ್ತಿವೆ. ನಾವು ಕಾಂಕ್ರೀಟ್ ಕಾಡಿನಲ್ಲಿ ಕುಳಿತು ಪರಿಸರ ಸಂರಕ್ಷಣೆಯ ಬಗ್ಗೆ ಮಾತನಾಡುತ್ತಿದ್ದೇವೆ.

ನಮ್ಮ ದೇಶದಲ್ಲಿ 47,000 ವಿವಿಧ ಜಾತಿಯ ಸಸ್ಯ, 89,000 ವಿವಿಧ ಪ್ರಾಣಿ ಪ್ರಭೇದಗಳಿವೆ. ಕರ್ನಾಟಕದಲ್ಲಿ 4,758 ವಿಧದ ಸಸ್ಯ ಜಾತಿಗಳಿವೆ. ಈಗಾಗಲೇ ನಾವು ಕಾಲು ಭಾಗದಷ್ಟು ಪರಿಸರವನ್ನು ನಾಶ ಮಾಡಿದ್ದೇವೆ. ಅಂದರೆ ಸುಮಾರು ಒಂದು ಲಕ್ಷ ಕಿಲೋಮೀಟರಿನಷ್ಟು ಅರಣ್ಯವನ್ನು ನಾಶಮಾಡಿದ್ದೇವೆ. ನಗರೀಕರಣವೇ ಅರಣ್ಯ ನಾಶಕ್ಕೆ ಕಾರಣ ಎಂದು ಹೆಚ್ಚಿನ ಮಂದಿ ಹೇಳುತ್ತಾರೆ. ಆದರೆ ಹಣ ನೀಡುವ ಬೆಳೆಗಳು, ಫಲಪುಷ್ಪಗಳು, ತೋಟಗಾರಿಕೆಗೆ ಹೆಚ್ಚು ಒತ್ತು ಕೊಟ್ಟು, ರುಚಿ ಮತ್ತು ಪರಿಮಳಕ್ಕೆ ಹೆಚ್ಚು ಆದ್ಯತೆ ನೀಡುವುದಲ್ಲದೆ, ಹೆಚ್ಚು ಇಳುವರಿಯನ್ನು ತೆಗೆದುಕೊಳ್ಳುವ ಕಡೆಗೆ ನಾವು ಒತ್ತು ಕೊಡುತ್ತಿದ್ದೇವೆ. ಹೌದು, ಜನಸಂಖ್ಯಾ ಸ್ಫೋಟದ ಪರಿಣಾಮ ಆಹಾರಕ್ಕೆ ಹೆಚ್ಚು ಒತ್ತು ನೀಡುವ ಅನಿವಾರ್ಯತೆಯಿಂದಾಗಿ ಸಹಜವಾಗಿಯೇ ನಮ್ಮ ಗಮನ ಹೊಸ ತಳಿಗಳನ್ನು ತಂದು ಹೆಚ್ಚು ಇಳುವರಿ ತೆಗೆಯುವ ಕಡೆಗೆ ಇದೆ. ಹೆಚ್ಚಿನ ರಾಸಾಯನಿಕಗಳನ್ನು ಬಳಸುವುದರಿಂದ ಹೆಚ್ಚು ಇಳುವರಿ ಪಡೆದುಕೊಳ್ಳುತ್ತಿದ್ದೇವೆ. ಆದರೆ ಇದರಿಂದ ನೀರಿನ, ಪರಿಸರದ ಮಾಲಿನ್ಯವಾಗುತ್ತಿದೆ.

ಭೂಮಿಯ ಮೇಲಿರುವ ಒಂದು ಮಿಲಿಯನ್ ಸಂತತಿಗಳಲ್ಲಿ ಮನುಷ್ಯನದ್ದು ಒಂದು ಸಂತತಿ ಮಾತ್ರ. ಇತರೆ ಜೀವಿಗಳಿಗೂ ಭೂಮಿ ಆಧಾರಸ್ತಂಭವಾಗಿದೆ. ಆದರೆ ಇತರೆ ಜೀವಿಗಳ ಆಹಾರ, ವಸತಿ, ಪರಿಸರವನ್ನು ನಾವು ಕಿತ್ತುಕೊಳ್ಳುತ್ತಿದ್ದೇವೆ. ಪರಿಸರವನ್ನು ನಾವು ಆಹಾರಕ್ಕಾಗಿ ನಾಶ ಮಾಡುತ್ತಿದ್ದೇವೆ. ಇನ್ನೊಂದೆಡೆ ಕೈಗಾರಿಕೆಗಳ ಹೆಸರಿನಲ್ಲಿ, ಗಣಿಗಾರಿಕೆಯ ಹೆಸರಿನಲ್ಲಿ, ಜಲಾಶಯಗಳ ನಿರ್ಮಾಣದ ಬೃಹತ್ ಗಾತ್ರದ ಯೋಜನೆಗಳ ಹೆಸರಿನಲ್ಲಿ, ಪರಿಸರವನ್ನಷ್ಟೇ

ಅಲ್ಲದೆ ನೈಸರ್ಗಿಕ ಸಂಪನ್ಮೂಲಗಳನ್ನು ನಾಶ ಮಾಡುತ್ತಿದ್ದೇವೆ. ಭೂ ಸವಕಳಿಯಿಂದ 70,000 ಚದರ ಕಿಲೋಮೀಟರ್‌ನಷ್ಟು ಕೃಷಿಯೋಗ್ಯ ಭೂಮಿಯನ್ನು ಅನುತ್ಪಾದನಾ ಕ್ಷೇತ್ರವನ್ನಾಗಿ ಮಾಡಿದ್ದೇವೆ.

ಈಗಾಗಲೇ 724 ಸಸ್ಯ ಜಾತಿಗಳು ನಶಿಸಿಹೋಗಿವೆ. 3,956 ಸಸ್ಯ ಜಾತಿಗಳು ವಿನಾಶದಂಚಿಗೆ ಬಂದು ನಿಂತಿವೆ. ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯವನ್ನು ನಾಶ ಮಾಡಿ, ಅಂತರ್ಜಲವನ್ನು ಬರಿದಾಗಿಸಿದ್ದೇವೆ. ಹಸಿರು ಕ್ರಾಂತಿಯ ಹೆಸರಿನಲ್ಲಿ ಹೆಚ್ಚು ಇಳುವರಿ ನೀಡುವ ತಳಿಗಳಿಗೆ ರೋಗ ರುಜಿನಗಳನ್ನು ತಡೆಗಟ್ಟಲು ರಾಸಾಯನಿಕಗಳನ್ನು ಬಳಸಿ ಪರಿಸರ ನಾಶ ಮಾಡುತ್ತಿದ್ದೇವೆ.

ತಿರುವಾಂಕೂರಿನ ಮಹಾರಾಜರು ಚಹಾ ಮತ್ತು ಕಾಫಿ ಎಸ್ಟೇಟ್‌ಗಳಾಗಿ ಪರಿವರ್ತಿಸಲು ಎಕರೆಗೆ ಒಂದು ರೂಪಾಯಿಯಂತೆ ದಟ್ಟ ಅರಣ್ಯವನ್ನು ವಿದೇಶೀಯರಿಗೆ ಕೊಟ್ಟು ಔದ್ಯೋಗಿಕರಣಕ್ಕೆ ಒತ್ತು ನೀಡಿದರು. ಹತ್ತು ವರ್ಷಗಳ ನಂತರ ಅದೇ ರಾಜರು ಎಕರೆಗೆ ಹತ್ತು ರೂಪಾಯಿಯಂತೆ ಅರಣ್ಯವನ್ನು ವಿದೇಶಿಯರಿಗೆ ನೀಡಿದರು. 1830ರಲ್ಲಿ ಚಹಾ ಮತ್ತು ಕಾಫಿ ದೊಡ್ಡ ಉದ್ಯಮವಾಗಿ ಹೊರಹೊಮ್ಮಿತ್ತು. ದೊಡ್ಡ ಮರಗಳನ್ನು ಕಡಿದು ಸಣ್ಣ ಮರಗಳನ್ನು ಬೆಳೆಸಿ ಈ ವೈವಿಧ್ಯತೆಯನ್ನು ನಾಶ ಮಾಡಿದರು. 1874ರಲ್ಲಿ 17,900 ಹೆಕ್ಟೇರ್ ಪ್ರದೇಶದಲ್ಲಿ ನೀಲಗಿರಿ ಮರವನ್ನು ಬೆಳೆಸಿದರು. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಸರ್ಕಾರವೇ ರಾಷ್ಟ್ರೀಯ ಪ್ಲೈವುಡ್ ಕಂಪನಿಯನ್ನು 1946ರಲ್ಲಿ ಸ್ಥಾಪಿಸಿತು. ಅಲ್ಲಿ 36 ವಿಧದ ಮರಮಟ್ಟು ನೀಡುವ ಮರಗಳಿದ್ದವು. ಇವೆಲ್ಲಾ ಪ್ರಕೃತಿಯನ್ನು ಹೇಗೆ ನಾಶ ಮಾಡಿದರು ಅಂತ ತೋರಿಸುತ್ತವೆ.

ಇಂದು ಕೇರಳ, ಕೊಡಗು ಮಾತ್ರವಲ್ಲದೆ ದಕ್ಷಿಣ ಮಲೆನಾಡಿನಲ್ಲೂ ನೈಸರ್ಗಿಕ ಸೌಂದರ್ಯವನ್ನು ನಾಶ ಮಾಡಿ ಹೋಮ್‌ಸ್ಟೇ, ರೆಸಾರ್ಟ್‌ಗಳನ್ನು ನಿರ್ಮಿಸಿ ಪ್ರಕೃತಿಯ ಮಧ್ಯೆ ಕಾಲ ಕಳೆಯುತ್ತಿದ್ದೇವೆ. ನೈಸರ್ಗಿಕ ಸೌಂದರ್ಯವನ್ನು ನಾಶ ಮಾಡಿ ಕೃತಕವಾಗಿ ನಿರ್ಮಿಸಿದ ಪರಿಸರ, ಗಿಡಮರಗಳು, ಜಲಪಾತಗಳೇ ಪ್ರವಾಸೋದ್ಯಮವಾಗಿದೆ. ಕೃತಕ ಪರಿಸರವನ್ನು ನೋಡುತ್ತ ಕಾಲಕಳೆಯುವ ಕಾಲಘಟ್ಟದಲ್ಲಿ, ನೈಸರ್ಗಿಕ ಪ್ರಕೃತಿ, ಪಶ್ಚಿಮ ಘಟ್ಟಗಳು, ದಟ್ಟ ಅರಣ್ಯಗಳು, ದೇವರ ಕಾಡುಗಳು ಅಪಾಯದಲ್ಲಿ ಇರುವುದನ್ನು ಮರೆಯುತ್ತಿದ್ದಾರೆ.

ಅರಣ್ಯಗಳಷ್ಟೇ ಅಲ್ಲದೆ, ಸಮುದ್ರ ತೀರ, ಪಶ್ಚಿಮ ಘಟ್ಟ, ಬಯಲು ಸೀಮೆಯ ಕೆರೆಕಟ್ಟೆಗಳು, ಬೆಟ್ಟಗುಡ್ಡಗಳು ಎಲ್ಲವೂ ಅಪಾಯದಲ್ಲಿವೆ. ನೈಸರ್ಗಿಕ ಸಂಪತ್ತನ್ನು ನಮ್ಮ ದುರಾಸೆಗೆ ಬಲಿಕೊಟ್ಟು ಕೃತಕವಾಗಿ ನಿರ್ಮಿಸಿರುವ ಪ್ರಕೃತಿಯನ್ನು ನೋಡುತ್ತಾ ಸಂಭ್ರಮಿಸುತ್ತಿದ್ದೇವೆ. ಮನೆಯ ಮುಂದೆ ಎರಡು ಸಣ್ಣ ಗಿಡಗಳು, ಬಡಾವಣೆಯ ಮಧ್ಯೆಯೊಂದು ವಾಯುವಿಹಾರಕ್ಕಾಗಿ ಪಾರ್ಕ್ ಮಾಡಿ ಪಾಲಿಷ್ ಮಾಡಿದ ಅಕ್ಕಿಯಂತೆ ಗಿಡಗಳನ್ನು ನಾಶ ಮಾಡುತ್ತಿದ್ದೇವೆ.

ಪ್ರಕೃತಿ ಎಲ್ಲವನ್ನು ನೋಡುತ್ತಾ ಮೌನವಾಗಿದೆ. ಕಾಲ ಕಳೆಯುತ್ತಿದ್ದಂತೆ ಅದು ಕೂಡ ತನ್ನ ಆಟವನ್ನು ಆಡುತ್ತಿದೆ. ಪರಿಸರ ಮಾತೆ ಇನ್ನೂ ತಾಳ್ಮೆಯಿಂದ ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದಾಳೆ. ಆದರೆ ಅವಳು ತಾಳ್ಮೆಯು ಕಟ್ಟೆಯೊಡೆದರೆ ಮನುಷ್ಯರು ಸೇರಿದಂತೆ ಇಡೀ ಪರಿಸರವೇ ನಶಿಸಿಹೋಗುತ್ತದೆ. ಇನ್ನಾದರೂ ನಾವು ಎಚ್ಚೆತ್ತುಕೊಂಡು ಪರಿಸರವನ್ನು ಸಂರಕ್ಷಿಸದಿದ್ದರೆ ಕಾಲ ಕೈಮೀರಿ ಹೋಗುತ್ತದೆ. ನಂತರ ವ್ಯಥೆ ಪಟ್ಟರೆ ಯಾವ ಪ್ರಯೋಜನವೂ ಇಲ್ಲ. ●

ಹೋರು ಧೀರತೆಯಿಂದ, ಮೊಂಡುತನದಿಂ ಬೇಡ ।
ವೈರ ಹಗೆತನ ಬೇಡ, ಹಿರಿ ನಿಯಮವಿರಲಿ ॥
ವೈರಾಗ್ಯ ಕಾರುಣ್ಯ ಮೇಳನವೆ ಧೀರತನ ।
ಹೋರುದಾತ್ತತೆಯಿಂದ – ಮಂಕುತಿಮ್ಮ ॥ ೫೮೪ ॥

ಮಗುವೇ ತಾಯಿಯಾದಾಗ

✍ **ಶಿವಕುಮಾರ ಈಬೇರಿ,** ಪ್ರಥಮ ಬಿ.ಎ.

ಮುದ್ದಾದ ಮನಸ್ಸು, ಗೆಳೆಯ-ಗೆಳತಿಯರೊಂದಿಗೆ ಸಂತೋಷದಿಂದ ಶಿಕ್ಷಕರ ಪಾಠಗಳನ್ನು ಆಲಿಸುವ ವಯಸ್ಸು, ಅವರು ಮಾಡೋ ಪಾಠ ತಲೆಗೆ ಹೋಗದಿದ್ದರೂ, ಒಡನಾಡಿಗಳೊಂದಿಗೆ ಮಾತನಾಡುತ್ತಾ, ಯಾರನ್ನೂ ಅಳಿಸುತ್ತಾ, ಇನ್ನಾರನ್ನೋ ನಗಿಸುತ್ತಾ ಚೇಷ್ಟೆಯನ್ನು ಮಾಡುವ ಮನಸ್ಸು. ತಾಯಿಯ ಅಕ್ಕರೆಯ ಬೈಗುಳ, ತಂದೆಯ ಪ್ರೀತಿಯ ಸಾಂತ್ವಾನ, ಅಣ್ಣನ ಕಾಳಜಿ, ಅಕ್ಕನ ತ್ಯಾಗಗಳು ಇವುಗಳ ಮಧ್ಯೆ ಗೆಳೆಯ-ಗೆಳತಿಯರೊಂದಿಗೆ ಸಲುಗೆಯಿಂದ ಆಟದ ಮೈದಾನದಲ್ಲಿ ಜಡಿಮಳೆಯಲ್ಲಿ ಆ ತುಂತುರು ಹನಿಗಳ ಮಧ್ಯೆ ಗರಿಬಿಚ್ಚಿದ ನವಿಲಂತೆ ಕುಣಿಯಲು ಯಾವ ಮಗುವಿಗೆ (ಹುಡುಗಿ) ಇಷ್ಟವಿಲ್ಲ ನೀವೇ ಹೇಳಿ?

ಆದರೆ, ಎಲ್ಲೋ ಒಂದು ಕಡೆ ನನ್ನ ಮನಸ್ಸು ನನ್ನನ್ನೇ ಕೇಳುತ್ತಾ ಇದೆ. "Hello" ನೀನು ಕನಸು ಕಾಣಬೇಡ ಅಂತಾ! ಯಾಕೆ ಗೊತ್ತಾ ಎಷ್ಟೋ ನವಿಲುಗಳಿಗೆ ರೆಕ್ಕೆ ಬೆಳೆದು ಗರಿಬಿಚ್ಚುವ ಮೊದಲೇ ಯಾರದೋ ಪಂಜರದಲ್ಲಿ ಬಂಧಿಯಾಗಿ ಬಿಡುತ್ತವೆ ! ಭಾರತ ಹಳ್ಳಿಗಳಿಂದ ಕೂಡಿದ ಅಖಂಡ ರಾಷ್ಟ್ರ. ಇಲ್ಲಿ ಕೈದಿಯಂತೆ ಬಂಧಿ ಯಾಗಿ ಸ್ವತಂತ್ರವಿಲ್ಲದೆ, ಯಾರದೋ ಒತ್ತಾಯಕ್ಕೆ ಬಲಿಪಶುಗಳಾಗಿ, ಮಾತುಗಳು ಬಂದರೂ ಮಾತನಾಡದೇ ಮೂಕ ವೇದನೆಯನ್ನು ತೋರಿಸುತ್ತಿರುವ, ತಮ್ಮ ಸುಂದರ ಕನಸಿನ ಚಿಲುಮೆಯನ್ನು ಬಚ್ಚಿಟ್ಟ ಪುಟ್ಟನವಿಲುಗಳ ಕಥೆಯೊಂದಿದು.

ಓದೋಕೆ ಇಷ್ಟವಿಲ್ಲದಿದ್ದರು ನೀವು ಓದಲೇಬೇಕು ಅಂತ ನಾನೇನು ಹಿಟ್ಲರ್ ತರ ಆಜ್ಞೆಯನ್ನು ಮಾಡಲ್ಲಾ , ಹಳ್ಳಿ ಭಾಗಗಳಿಗೆ ಎಂದಾದರೂ ಹೋಗಿದಿರಾ, ಹೋಗ್ಲಿ ಅವರ ಪರಿಸ್ಥಿತಿ ಕೇಳಿದಿರಾ? ಶಾಲೆಯ ಮೆಟ್ಟಿಲನ್ನು ಹತ್ತುವ ವಯಸ್ಸು, ಹೆಗಲಿಗೆ ಗೊಬ್ಬರದ ಚೀಲದಿಂದ ಮಾಡಿದ ಬ್ಯಾಗ್, ಯಾರೋ ಧನವಂತರು ಕೊಟ್ಟ ಆ ಹರಿದ ಬಟ್ಟೆ ಬೆಳಗ್ಗೇನೆ ತೋಟದಲ್ಲಿ ಹೂ ಕೀಳೋಕೋ ಅಥವಾ ಮನೆ ಕೆಲಸ ಮುಗಿಸಿಕೊಂಡೋ ಜಳಕ ಮಾಡೋಕೆ ಟೈಮ್ ಇಲ್ಲದೆ ಪೌಡರ್ ಹಾಕಿಕೊಂಡು, ಶ್ರೀದೇವಿಯ ತರಾನೋ ಇಲ್ಲ ಮಂಜುಳಾ ತರಾನೋ ತಲೆ ಬಾಚಿಕೊಂಡು ಶಾಲೆಗೆ ಬರುವ ಆ ಮುಗ್ಧ ಮನಸ್ಸುಗಳು, ಶಿಕ್ಷಣದ ಅರಿವೇ ಇಲ್ಲದ ಅಪ್ಪ-ಅಮ್ಮ, ಕಿತ್ತು ತಿನ್ನುವ ಬಡತನ, ಹೊಟ್ಟೆಗೆ ತಿನ್ನೋಕೆ ಮೂರು ಹೊತ್ತಿನ ಹಿಟ್ಟಿಲ್ಲ, ಇದರ ಮಧ್ಯೆ ತಲಿಮ್ಯಾಲಿನ ದೊಡ್ಡ ಹೋರಿನಾ (ಮಗಳನ್ನು) ಹೇಗಾದರು ಮಾಡಿ ಇಳಿಸಿಬಿಡೋಣ ಅನ್ನೋ ಚಿಂತೆ. ಪಾಪ ರೀ ಆ ಚಿಕ್ಕ ಹುಡುಗಿಗೆ ವಯಸ್ಸಿನ ಅಂತರವಿಲ್ಲದೇ, ಯಾರೋ ಎಮ್ಮೆ ತರ ಇರೋ ದೈತ್ಯನನ್ನು ತಂದು ಮದುವೆಯನ್ನು ಮಾಡಿ ಕೈ ತೊಳೆದು ಬಿಡುತ್ತಾರೆ. ಮುಂದೆ ಅವಳ ಕಥೆ? ಮದುವೆ ಅನ್ನೋ ಮೂರು ಅಕ್ಷರದ ಅರ್ಥವೇ ಗೊತ್ತಿಲ್ಲದ ಅವಳಿಗೆ ಸಂಸಾರ ಅನ್ನೋ ಇನ್ನೊಂದು ಮೂರು ಅಕ್ಷರದ ಹೊಸ ಪರಿಚಯ. ತನ್ನ ಒಳಗೊಂದು ಪ್ರಶ್ನೆ ಕೇಳಿಕೊಳ್ಳುವ ಅವಳು ನಾನು ಇನ್ನು ಯಾರ ಜೊತೆ ಆಟವನ್ನು ಆಡಬೇಕು? ಯಾರ ಜೊತೆಗೆ ಶಾಲೆಗೆ ಹೋಗಬೇಕು? ಇದು ಯಾರ ಮನೆ? ಅವ್ವಾ-ಅಪ್ಪ ಎಲ್ಲ ಕಾಣ್ತನೆ ಇಲ್ಲ! ಬಹುಷ್ಯ ನಾನು ಹೇಳುತಿರೋದು ಸುಳ್ಳು ಅನಿಸುತ್ತಾ ಇದೆಯಾ, 100ಕ್ಕೆ 100 ಸತ್ಯ! ಲಂಗಾ ದಾವಣಿ ಉಡೋಕೆ ಬರದೇ ಇರೋ ಅವಳಿಗೆ ಸೀರೆ ಉಡಿಸಿ, ಪಾಠ-ಪದ್ಯ, ವ್ಯಾಕರಣ ಹೇಳಿಕೊಡಬೇಕಾದ ವಯಸ್ಸಲ್ಲಿ ಸಂಸಾರ, ಮಕ್ಕಳು, ಗಂಡ, ಅತ್ತೆ-ಮಾವ ಅನ್ನೋ ಹೊಸ ಪದಗಳನ್ನು ಪರಿಚಯ ಮಾಡುತ್ತೇವೆ. 15 ಅಥವಾ 16ನೇ ವಯಸ್ಸಿನಲ್ಲಿ ಅವಳಿಗೆ ಒಂದು ಕಂಕುಳಲ್ಲಿ! ಇನ್ನೊಂದು ಅವಳ ರಕ್ಷಣಾ ಕವಚದಂತೆ ಇರುವ ಸೆರಗಿನ ಹೊಟ್ಟೆಯೊಳಗೆ ...!

ಅಪ್ರಾಪ್ತ ವಯಸ್ಸಿನಲ್ಲಿ ಗರ್ಭವನ್ನು ಧರಿಸುವುದರಿಂದ ಪಾಪರೀ ಅದೆಷ್ಟೋ ಹುಡುಗಿಯರು ಹೆರಿಗೆಯ ಸಮಯದಲ್ಲಿ ರಕ್ತಸ್ರಾವದಿಂದ ಮರಣ ಹೊಂದುತಾ ಇದಾರೇ! ತಪ್ಪು ಯಾರದು ಬಡತನದ ಬೊಗಸೆಯಲ್ಲಿ ಹುಟ್ಟಿ ಬೆಳೆದ ಅವಳದ್ದಾ? ಅಥವಾ ಅವಳ ತಂದೆ-ತಾಯಿಯರದ್ದಾ ? ನಮ್ಮ ಗ್ರಾಮದಲ್ಲಿ ನನ್ನದೇ ವಯಸ್ಸಿನಲ್ಲಿ ಅದೆಷ್ಟೋ ಹುಡುಗಿಯರು ಮದುವೆಯಾಗಿ ಈವಾಗ ಎರಡು ಮಕ್ಕಳು ನಮ್ಮ ತಾಯಿ ಯಾವಾಗಲೂ ಒಂದು ಮಾತು ಕೇಳುತ್ತಾ ಇರುತ್ತಾರೆ ಇಷ್ಟು ವಯಸ್ಸಾದರು ಇನ್ನು ಮಕ್ಕಳ ಬುದ್ಧಿ ಹೋಗಿಲ್ವಲ್ಲಾ ಅಂತಾ. ನನ್ನದೂ ಅದೇ ಪ್ರಶ್ನೆ ಹೌದಲ್ಲಾ. ನನ್ನದೇ ವಯಸ್ಸಿನ ಆ ಹುಡುಗಿಯರಿಗೆ ಮಕ್ಕಳ ಬುದ್ಧಿ ಹೋಯಿತಾ?

ಕುಡಿತದ ಗಂಡ, ದಿನವೆಲ್ಲಾ ಹೊಲ-ಗದ್ದೆಗಳಲ್ಲಿ ಕೆಲಸ ಮಾಡಿ ಬೆಳಗ್ಗೆ - ಸಂಜೆ ಮನೆಗೆಲಸ ಮಾಡಿ, ಇವುಗಳ ಮಧ್ಯೆ ಮಕ್ಕಳ ಭವಿಷ್ಯದ ಬಗ್ಗೆ ಬಹುದೊಡ್ಡ ಚಿಂತೆ. ತನ್ನಂತೆ ತನ್ನ ಮಕ್ಕಳ ಭವಿಷ್ಯ ಹಾಳಾಗಬಾರದು ಅಂತ ಅವರನ್ನ ಶಾಲೆಗೆ ಸೇರಿಸಿ, ಇತ್ತ ಗಂಡನಿಂದ ದಿನವಿಡಿ ಸಹಿಸಲಾಗದ ನೋವು. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಮದ್ಯದ ಅಮಲಿನಲ್ಲಿರುವ ಇವನಿಗೆ ಸಂಸಾರದ ಬಗ್ಗೆ ಏನು ಗೊತ್ತು ಹೇಳಿ? ಜೀವನ ಅನ್ನೋ ಸಂಸಾರದ ಬಂಡಿ ಸಾಗಬೇಕಾದರೆ ಗಂಡ-ಹೆಂಡತಿ ಅನ್ನೋ ಎರಡು ಚಕ್ರಗಳು ಸಮವಾಗಿರಬೇಕು.

ಕೊನೆಗೆ ಒಂದು ದಿನ ಮಧ್ಯ ವಯಸ್ಸಿನಲ್ಲಿ ಗಂಡನನ್ನು

ಕಳೆದುಕೊಂಡು ಅವಳು ತನ್ನ ಬಯಕೆ-ಭಾವನೆ, ಆಸೆ, ಪ್ರೀತಿ ಎಲ್ಲಾ ವಿಷಯಗಳಿಗೆ ಮುಕ್ತಾಯವನ್ನು ಹೇಳಿ ತನ್ನ ಮಕ್ಕಳ ಬಗ್ಗೆ ಹಲವಾರು ಕನಸುಗಳನ್ನು ಕಾಣುತ್ತಾ, ಬೇರೆಯವರ ಮನೆ ಕಸವನ್ನು ಗುಡಿಸಿ ನಾಲ್ಕು ಕಾಸು ಸಂಪಾದಿಸಿ ಮಕ್ಕಳ ಜೀವನಕ್ಕೆ ನೆರವಾಗುತ್ತಾಳೆ. ಪಾಪ ಆ ಜೀವಕ್ಕೆ ಯಾರೋ ಮಾಡಿದ ಆ ತಪ್ಪಿಗೆ ಇನ್ನಾರಿಗೋ ಶಿಕ್ಷೆ.

ಮಧ್ಯ ವಯಸ್ಸಲ್ಲಿ ಗಂಡನನ್ನು ಕಳೆದುಕೊಂಡ ಮಹಿಳೆಯನ್ನು ಸಮಾಜ ಯಾವ ರೀತಿಯಲ್ಲಿ ಕಾಣುತ್ತೆ ಅನ್ನೋ ನನ್ನ ಮೂಕ ಪ್ರಶ್ನೆ ನೇರವಾಗಿ ನಿಮಗೆ ? ಮರಳಿ ತಂದೆ-ತಾಯಿ ಆಶ್ರಯ ಪಡೆದುಕೊಳ್ಳೋದಾ ಅಥವಾ ಒಬ್ಬಂಟಿಯಾಗಿ ಇರೋದಾ ಅನ್ನೋ ಪ್ರಶ್ನೆ. ಇತ್ತ ಮಕ್ಕಳನ್ನು ಆರ್ಥಿಕವಾಗಿ ಭದ್ರತೆ ಇಲ್ಲದ ಕಾರಣದಿಂದ ಯಾವುದೇ ವಿದ್ಯಾರ್ಥಿ ನಿಲಯದಲ್ಲಿ ಆರೋ-ಏಳೋ ವಯಸ್ಸಿಗೆ ಸೇರಿಸೋದು ಪಾಪ ಆ ಮಕ್ಕಳು ತಂದೆ-ತಾಯಿ ಪ್ರೀತಿನೇ ಕಾಣದೆ ಬೆಳಿತಾವೆ. ಊಟಕ್ಕೆ ಉಪ್ಪು-ಖಾರವಿಲ್ಲದಿದ್ದರೂ ಊಟ ಮಾಡಬಹುದು. ಮಮತೆ, ಪ್ರೀತಿ ಇಲ್ಲದೆ ಇದ್ದರೆ ಅದು ಊಟವೇ ಅಲ್ಲಾ, ಕುಟುಂಬದ ಮೌಲ್ಯವನ್ನೇ ಅರಿಯದೆ ಬೆಳೆಯುವ ಈ ಮಕ್ಕಳು ಬದುಕಿನಲ್ಲಿ ಯಾವ ರೀತಿಯಾಗಿ ಬದುಕುತ್ತಾರೆ? ಈ ಎಲ್ಲಾ ಪ್ರಶ್ನೆಗಳಿಗೆ ನನ್ನ ಪ್ರಶ್ನೆ ಇದಕ್ಕೆಲ್ಲಾ ಕಾರಣ ಅವಳೋ...! ಅಥವಾ ಅವರೋ...!

ಜೀವನ ಪಯಣದ ಕೊನೆಗೆ ಆ ಜೀವ ಬಂದಾಗ ಯಾವ ಸಂತೋಷವನ್ನು ಕಾಣದೇ, ಪ್ರೀತಿಯ-ಮಮತೆಯ ಮಾತುಗಳನ್ನ ಆಲಿಸದೇ ಯಾವಾಗಲೂ ಬೈಗುಳ, ಕೊನೆಗೆ ಸಮಾಜದಿಂದ ಮುದಿಗೂಬೆ ಎಂಬ ಪಟ್ಟ ಅಷ್ಟೇ ಯಾಕೆ ಸ್ವತಃ ಮಕ್ಕಳಿಂದಲೇ ಕೊನೆಗೆ ತಿರಸ್ಕಾರ ! ತಪ್ಪು ಅವಳದ್ದ...! ಅಥವಾ ಅವರದ್ದಾ...!

ಬದುಕು ಭಗವಂತನ ಆಟವಲ್ಲ, ಬದಲಾಗಿ ಬಾಳುವವರ ಆಯ್ಕೆ!

●

ತೆರೆಮರೆಯ ಬದುಕು

✍ **ಸಿದ್ದಪ್ಪ ನಾಯಕ ಎಂ.,** ದ್ವಿತೀಯ ಬಿ.ಎ.

ನಮ್ಮ ಜಗತ್ತಿನೊಳಗೆ ಹಲವಾರು ಜೀವಿಗಳುಂಟು. ಈ ಜೀವಿಗಳಿಗೆ ಅದರದೇ ಆದ ಒಂದು ಜೀವನಶೈಲಿಯೂ ಸಹ ಉಂಟು. ಭಗವಂತ ಅಂದರೆ ಈ ಭೂರಮೆಯ ಸೃಷ್ಟಿಕರ್ತ ತನ್ನ ಸೃಷ್ಟಿಯಲ್ಲಿ ಯಾವ ವಸ್ತು ಹೇಗೆ ಇರಬೇಕು? ಯಾವ ಜೀವಿ ಹೇಗೆ ಇರಬೇಕು? ಎಂದು ಮೊದಲೇ ಯೋಚಿಸಿಯೇ ಸೃಷ್ಟಿಸ್ಯೆದಿದ್ದಾನೆಂದು ಪ್ರತಿಯೊಬ್ಬನ ಯೋಚನೆಗೆ ಬರುವುದು ಸಹಜ. ಆದರೆ ದೇವರು ನಮಗೆ ಈ ಧರೆಯೊಳಗೆ ಪ್ರತಿಯೊಂದನ್ನು ನೀಡಿ ಆತ ಎಲ್ಲೋ 'ತೆರೆಮರೆಯ ಬದುಕು' ನಡೆಸುತ್ತಿರುವುದು ಖಂಡಿತ. ವನದಲ್ಲಿರುವ ಜೀವಿಗಳು ತಮಗೆ ಆಹಾರವಿಲ್ಲದೆ ಪರದಾಡುವುದಿಲ್ಲ, ಹಾಗೆಯೇ ನಾಡಿನಲ್ಲಿರುವ ಜೀವಿಗಳು ತಮಗೆ ಜೀವಿಸಲು ಏನೂ ಸೌಕರ್ಯವಿಲ್ಲವೆಂದು ಹಪಹಪಿಸುವುದಿಲ್ಲ. ಸುರನು ನರನಿಗೆ ಬೇಕಾದನ್ನು ಮಾತ್ರ ನೀಡಿದ ಪ್ರತಿಯೊಂದು ಜೀವಿಗೂ ಅವಶ್ಯಕವಾಗುವಂತಹ ಪ್ರಾಕೃತಿಕ ಸವಲತ್ತುಗಳನ್ನು ನೀಡಿ ಸಲಹಿ, ತಾನು ಎಲ್ಲೋ ಮರೆಯಲ್ಲಿ ಕುಂತು ತೆರೆಮರೆಯ ಬದುಕನ್ನು ನಡೆಸುತ್ತಿದ್ದಾನೆ. ನಿಜಕ್ಕೂ ಭಗವಂತ ಈ ಪ್ರಾಕೃತಿಕ ದೃಷ್ಟಿಯಲ್ಲಿ ನಮಗೆ ಶ್ರೇಷ್ಠನಾಗಿದ್ದಾನೆ. ಮನುಷ್ಯ ತಾನು ಏನು ಬೇಕಾದರೂ ಸೃಷ್ಟಿಸಿಕೊಳ್ಳಬಲ್ಲ, ಆದರೆ ಈ ದೇವರು ಸೃಷ್ಟಿಸಿರುವ ಪ್ರಾಕೃತಿಕ ಸವಲತ್ತುಗಳಾದ ನೀರು, ಗಾಳಿ, ಬೆಳಕನ್ನು ಸೃಷ್ಟಿಸಲಾರ.

ಮನುಷ್ಯನು ತಾನೆಂದು ಈ ಭಗವಂತನ ರೀತಿಯಲ್ಲಿ ತೆರೆಮರೆಯ ಬದುಕನ್ನು ನಡೆಸಲಾರ. ಆತನದೇನಿದ್ದರೂ ಬರಿಯ ಆಡಂಬರದ ಮತ್ತು ತೋರ್ಪಡಿಕೆಯ ಬದುಕಷ್ಟೇ. ಮನುಷ್ಯನು ತಾನು ಯಾರಿಗಾದರೂ ಒಂದು ಸಹಾಯ ಮಾಡಿದರೆ ಅದನ್ನು ಪದೇ ಪದೇ ಹೇಳುತ್ತಾನೆ. ಅದನ್ನು ಆತ ತೋರ್ಪಡಿಸದೆ ಇರಲಾರ. ಆದರೆ ದೇವರು ಹಾಗಲ್ಲ, ಆತನು ಎಂದೂ ತೋರ್ಪಡಿಕೆಯ ಬದುಕನ್ನು ನಡೆಸುವುದಿಲ್ಲ, ಆತ ನಮಗೆ ಕಾಲಕ್ಕೆ ತಕ್ಕಂತೆ ಎಷ್ಟು ಫಲ ಕೊಡಬೇಕೋ ಅಷ್ಟನ್ನು ಕೊಟ್ಟು, ನಾವು ಆತನಿಗೆ ಮನಬಂದಂತೆ ಬೈದರೂ ಸಹ ತುಟಿಯನ್ನು 'ತಟಕ್ ಪಿಟಕ್' ಎನ್ನದೆ ಮೌನವಾಗಿರುತ್ತಾನೆ.

ಆದರೆ ಸ್ವಾರ್ಥ ಮನುಷ್ಯನು ತನ್ನಲ್ಲಿ ಎಷ್ಟೇ ಸಂಪತ್ತಿದ್ದರೂ ಅದರಲ್ಲಿ ಅಲ್ಪ ಮಾತ್ರ ಸಹಾಯ ಮಾಡಿ, ಮೌನಿಯಾಗಿರದೆ ಕಡಲು ಭೋರ್ಗರೆದಂತೆ ತನ್ನ ಜೀವನದುದ್ದಕ್ಕೂ ಭೋರ್ಗರೆಯುತ್ತಿರುತ್ತಾನೆ.

